# www.karunaduexams.com

**ಪ್ರಚಲಿತ ವಿದ್ಯಮಾನಗಳು -ಜನವರಿ 2018**

www.karunaduexams.com

# Contents

ಅಂತರ್ ರಾಷ್ಟ್ರೀಯ ............ Error! Bookmark not defined.
ಪ್ರಶಸ್ತಿಗಳು ............ Error! Bookmark not defined.
ಪರಿಸರ ............ Error! Bookmark not defined.
ವ್ಯವಹಾರ ............ Error! Bookmark not defined.
ರಾಷ್ಟ್ರೀಯ ............ Error! Bookmark not defined.
ವಿಜ್ಞಾನ-ತಂತ್ರಜ್ಞಾನ ............ Error! Bookmark not defined.
ಕ್ರೀಡೆ ............ Error! Bookmark not defined.
ರಾಜ್ಯ ............ Error! Bookmark not defined.
ಇತರೆ: ಚೂರು ಪಾರು ............ Error! Bookmark not defined.

**ಹೆಚ್ಚಿನ ಮಾಹಿತಿಗಾಗಿ,**

ನೀಮಗೆ ಯಾವುದೇ ಸಹಾಯದ ಅಗತ್ಯವಿದ್ದರೆ,
WhatsApp ಮತ್ತು ಸಂದೇಶವನ್ನು ಮಾಡಿ, ದಯವಿಟ್ಟು ಕರೆ ಮಾಡಬೇಡಿ

Mohan Kumar: Mobile: +91- 98805 33259 (Content related queries)

Chandrashekhar Nayak: Mobile: +91-9448880551 / 9844915689(Technical and Marketing related queries)

Ramakant: Mobile: +91-9972355744(Management related queries)

www.karunaduexams.com

# ಅಂತರ್ ರಾಷ್ಟ್ರೀಯ

**<u>ಸೌದಿ ಅರೇಬಿಯಾ ಮತ್ತು ಯುಎಇ ಯಲ್ಲಿ ವ್ಯಾಟ್ ಜಾರಿ</u>**



ಸೌದಿ ಅರೇಬಿಯಾ ಮತ್ತು ಸಂಯುಕ್ತ ಅರಬ್ ಒಕ್ಕೂಟವು (ಯುಎಇ) ಮೌಲ್ಯವರ್ಧಿತ ತೆರಿಗೆಯನ್ನು(ವ್ಯಾಟ್) ಜಾರಿಗೆ ತಂದಿವೆ. ಆ ಮೂಲಕ ಗಲ್ಫ್ ಸಹಕಾರ ಮಂಡಳಿ (GCC)ಯಲ್ಲಿ ಮೌಲ್ಯವರ್ಧಿತ ತೆರಿಗೆಯನ್ನು ಪರಿಚಯಿಸಿದ ಮೊದಲ ರಾಷ್ಟ್ರಗಳು ಎನಿಸಿವೆ. ಆರು ಸದಸ್ಯ ರಾಷ್ಟ್ರಗಳನ್ನು ಹೊಂದಿರುವ GCC ಯಲ್ಲಿ ಬಹ್ರೇನ್, ಕುವೈತ್, ಒಮಾನ್ ಮತ್ತು ಕತಾರ್ ಕೂಡ ವ್ಯಾಟ್ ಅನ್ನು ಪರಿಚಯಿಸಲು ಮುಂದಾಗಿವೆ. ಆದರೆ ಸದ್ಯದ ಮಟ್ಟಿಗೆ 2019ರ ವೇಳೆಗೆ ವ್ಯಾಟ್ ಜಾರಿಗೆ ತರುವುದನ್ನು ಮುಂದೂಡಿವೆ.

- ಪೆಟ್ರೋಲ್ ಮತ್ತು ಡೀಸೆಲ್, ಆಹಾರ, ಬಟ್ಟೆ, ಯುಟಿಲಿಟಿ ಬಿಲ್ಲಳು ಮತ್ತು ಹೋಟೆಲ್ ಕೊಠಡಿಗಳು ಸೇರಿದಂತೆ ಬಹುತೇಕ ಸರಕು ಮತ್ತು ಸೇವೆಗಳ ಮೇಲೆ 5% ರಷ್ಟು ವ್ಯಾಟ್ ದರವನ್ನು ನಿಗದಿಪಡಿಸಲಾಗಿದೆ. ವೈದ್ಯಕೀಯ ಚಿಕಿತ್ಸೆ, ಹಣಕಾಸು ಸೇವೆಗಳು ಮತ್ತು ಸಾರ್ವಜನಿಕ ಸಾರಿಗೆ ಸೇರಿದಂತೆ ಇತರೆ ಸೇವೆಗಳ ಮೇಲೆ ಶೂನ್ಯ ವ್ಯಾಟ್ ದರ ಅಥವಾ ವಿನಾಯಿತಿ ನೀಡಲಾಗಿದೆ.

**ಹಿನ್ನಲೆ**:

ಸೌದಿ ಅರೇಬಿಯಾದಲ್ಲಿ, ಬಜೆಟ್ ಆದಾಯ ಶೇ.90% ಕ್ಕಿಂತ ಹೆಚ್ಚು ತೈಲ ಉದ್ಯಮದಿಂದ ಬಂದರೆ, ಯುಎಇಯಲ್ಲಿ ಇದು ಸುಮಾರು 80% ಆಗಿದೆ. ಅಂತರಾಷ್ಟ್ರೀಯ ಹಣಕಾಸು ಸಂಸ್ಥೆ ಸೇರಿದಂತೆ ಇತರೆ ಸಂಸ್ಥೆಗಳು ಬಜೆಟ್ ಆದಾಯವನ್ನು ಕೇವಲ ತೈಲ ಉದ್ಯಮದ ಮೇಲೆ ಅವಲಂಭಿತವಾಗದೆ ಇತರೆ ಮೂಲಗಳ ಕಡೆ ಗಮನ ಹರಿಸುವಂತೆ ಕರೆ ನೀಡಿದ್ದವು.

**<u>ಪರಸ್ಪರ ಪರಮಾಣು ಸ್ಥಾವರ ಮಾಹಿತಿ ವಿನಿಮಯ ಮಾಡಿಕೊಂಡ ಭಾರತ-ಪಾಕಿಸ್ತಾನ</u>**



ಭಾರತ ಮತ್ತು ಪಾಕಿಸ್ತಾನ ರಾಜತಾಂತ್ರಿಕ ಅಧಿಕಾರಿಗಳ ಮೂಲಕ ಪರಮಾಣು ಘಟಕಗಳ ಮಾಹಿತಿಗಳನ್ನು ವಿನಿಮಯ ಮಾಡಿಕೊಂಡಿವೆ. ಪರಮಾಣು ಘಟಕಗಳ ಮೇಲಿನ ದಾಳಿ ನಿರ್ಬಂಧ ಒಪ್ಪಂದದ ಅಡಿಯಲ್ಲಿ (Agreement on the Prohibition of Attack against Nuclear installations) ಮಾಹಿತಿಯನ್ನು ವಿನಿಮಯ ಮಾಡಿಕೊಳ್ಳಲಾಗಿದೆ.

ಜನವರಿ 1, 1992 ರಂದು ಮೊದಲು ಮಾಹಿತಿಯನ್ನು ವಿನಿಮಯ ಮಾಡಿಕೊಂಡ ನಂತರ ಎರಡು ದೇಶಗಳ ನಡುವೆ ಸತತ 27 ನೇ ಬಾರಿಗೆ ಅನುಕ್ರಮವಾಗಿ ಮಾಹಿತಿಯನ್ನು ವಿನಿಮಯವನ್ನು ಮಾಡಿಕೊಳ್ಳಲಾಗಿದೆ.

**ಪರಮಾಣು ಘಟಕಗಳ ಮೇಲಿನ ದಾಳಿ ನಿರ್ಬಂಧ ಒಪ್ಪಂದ**:

ಇದು ಭಾರತ ಮತ್ತು ಪಾಕಿಸ್ತಾನದ ನಡುವೆ ಸಹಿ ಹಾಕಲಾದ ದ್ವಿಪಕ್ಷೀಯ ಒಪ್ಪಂದವಾಗಿದ್ದು, ಉಭಯ ದೇಶಗಳಲ್ಲಿ ಸ್ಥಾಪಿತವಾಗಿರುವ ಪರಮಾಣು ಘಟಕಗಳ ಮೇಲೆ ಯಾವುದೇ ಅಚ್ಚರಿಯ ದಾಳಿಯನ್ನು ಮಾಡದಂತೆ ತಡೆಯುವುದು ಒಪ್ಪಂದದ ಧ್ಯೇಯ. 1988 ಡಿಸೆಂಬರ್ 31ರಲ್ಲಿ ಒಪ್ಪಂದಕ್ಕೆ ಸಹಿ ಹಾಕಲಾಗಿದ್ದು, ಜನವರಿ 27, 1991ರಲ್ಲಿ ಜಾರಿಗೆ ಬಂದಿದೆ.

ಭಾರತದ ಅಂದಿನ ಪ್ರಧಾನಿ ರಾಜೀವ್ ಗಾಂಧಿ ಮತ್ತು ಪಾಕಿಸ್ತಾನದ ಅಂದಿನ ಪ್ರಧಾನಿ ಬೆನಜೀರ್ ಭುಟ್ಟೊ ಅವರು ಈ ಒಪ್ಪಂದಕ್ಕೆ ಸಹಿ ಹಾಕಿದ್ದರು. ಒಪ್ಪಂದದಂತೆ ಪ್ರತಿ ವರ್ಷ ಜನವರಿ 1 ರಂದು ಪರಮಾಣು ಘಟಕಗಳ ಮಾಹಿತಿಗಳನ್ನು ವಿನಿಮಯ ಮಾಡಿಕೊಳ್ಳಲಾಗುವುದು.

**<u>ಭಾರತ-ಮಯನ್ಮಾರ್ ಭೂ ಗಡಿ ದಾಟುವ ಒಪ್ಪಂದಕ್ಕೆ ಸಚಿವ ಸಂಪುಟ ಒಪ್ಪಿಗೆ</u>**



ಭಾರತ-ಮಯನ್ಮಾರ್ ನಡುವಿನ ಭೂ ಗಡಿ ದಾಟುವ ಒಪ್ಪಂದಕ್ಕೆ ಕೇಂದ್ರ ಸಚಿವ ಸಂಪುಟ ಒಪ್ಪಿಗೆ ಸೂಚಿಸಿದೆ. ಉಭಯ ದೇಶಗಳ ನಡುವೆ ಗಡಿ ಭಾಗದ ಮೂಲಕ ಸಾರ್ವಜನಿಕರು ಮುಕ್ತವಾಗಿ ಸಂಚರಿಸಲು ಅನುಕೂಲ ಮಾಡುವ ಒಪ್ಪಂದ ಇದಾಗಿದೆ. ಈ ಒಪ್ಪಂದವು ಭಾರತದ ಈಶಾನ್ಯ ರಾಜ್ಯಗಳ ಹಾಗೂ ಮಯನ್ಮಾರ್ ಜನರೊಂದಿಗೆ ಸಂಪರ್ಕ ಸಾಧಿಸಲು ಹಾಗೂ ಪರಸ್ಪರ ವರ್ಧಿಸಲು ಅನುವು ಮಾಡಲಿದೆ ಎಂದು ನಿರೀಕ್ಷಿಸಲಾಗಿದೆ.

**ಮಹತ್ವ**:

- ಒಪ್ಪಂದವು ಮಾನ್ಯತೆ ಹೊಂದಿರುವ ಪಾಸ್ ಪೋರ್ಟ್ ಮತ್ತು ವೀಸಾಗಳ ಆಧಾರದ ಮೇಲೆ ಜನರ ಚಲನೆಯನ್ನು ಸುಲಭಗೊಳಿಸಲಿದೆ. ಇದರಿಂದ ಉಭಯ ದೇಶಗಳ ನಡುವೆ ಆರ್ಥಿಕ ಮತ್ತು ಸಾಮಾಜಿಕ ಪರಸ್ಪರ ವರ್ಧನೆಗಳನ್ನು ಹೆಚ್ಚಲಿದೆ.
- ಒಪ್ಪಂದವು ಉಭಯ ದೇಶಗಳ ಗಡಿ ಪ್ರದೇಶಗಳಲ್ಲಿ ವಾಸಿಸುವ ಜನರಿಗೆ ಈಗಾಗಲೇ ಅಸ್ತಿತ್ವದಲ್ಲಿರುವ ಮುಕ್ತ ಸಂಚಾರ ಹಕ್ಕುಗಳ ನಿಯಂತ್ರಣ ಮತ್ತು ಸುಸಂಗತತೆಯನ್ನು ಸುಲಭಗೊಳಿಸಲಿದೆ.
- ಈಶಾನ್ಯ ರಾಜ್ಯಗಳಲ್ಲಿ ಆರ್ಥಿಕತೆಯನ್ನು ಸುಧಾರಿಸಲು ಹಾಗೂ ಮಯನ್ಮಾರ್ ನೊಂದಿಗೆ ಭೌಗೋಳಿಕ ಸಂಪರ್ಕವನ್ನು ಸಾಧಿಸಿ ವ್ಯಾಪಾರ-ವಹಿವಾಟು ಹೆಚ್ಚಿಸಲು ಸಾಧ್ಯವಾಗಲಿದೆ.

**ಹಿನ್ನಲೆ**:

www.karunaduexams.com

ಭಾರತವು ಮಯನ್ಮಾರ್ ನೊಂದಿಗೆ 1643 ಕಿ.ಮೀ ಉದ್ದದ ಗಡಿಯನ್ನು ಹೊಂದಿದೆ. ಭಾರತದ ಈಶಾನ್ಯ ರಾಜ್ಯಗಳಾದ ಅರುಣಾಚಲ ಪ್ರದೇಶ, ನಾಗಲ್ಯಾಂಡ್, ಮಣಿಪುರ ಮತ್ತು ಮಿಜೋರಾಂ ಮಯನ್ಮಾರ್ ನೊಂದಿಗೆ ಗಡಿ ಭಾಗವನ್ನು ಹಂಚಿಕೊಂಡಿವೆ. ಪ್ರಸ್ತುತ ಎರಡೂ ದೇಶಗಳು ಗಡಿಯ ಎರಡೂ ಕಡೆಗಳಲ್ಲಿ 16 ಕಿಮೀ ವ್ಯಾಪ್ತಿಯಲ್ಲಿ ವಾಸಿಸುವ ಜನರಿಗೆ ವಿಶಿಷ್ಟವಾದ ವೀಸಾ-ಮುಕ್ತ ಸಂಚಾರ ವ್ಯವಸ್ಥೆಯನ್ನು ಹೊಂದಿವೆ.

**<u>ನ್ಯಾಷನಲ್ ನಾಲೆಜ್ಡ್ ನೆಟ್ವರ್ಕ್ (ರಾಷ್ಟ್ರೀಯ ಜ್ಞಾನ ಜಾಲ)</u>**

ರಾಷ್ಟ್ರೀಯ ಜ್ಞಾನ ಜಾಲ ಎಂಬುದು ಬಹು-ಗಿಗಾಬಿಟ್ ಪ್ಯಾನ್-ಇಂಡಿಯಾ ನೆಟ್ವರ್ಕ್ಆಗಿದ್ದು, ಭಾರತದ ಸಂವಹನ ಮೂಲಸೌಕರ್ಯದ ಅಭಿವೃದ್ಧಿಯನ್ನು ಸುಗಮಗೊಳಿಸುವುದು, ಸಂಶೋಧನೆಗಳನ್ನು ಉತ್ತೇಜಿಸುವುದು ಮತ್ತು ಮುಂದಿನ ಪೀಳಿಗೆಯ ಸೇವೆಗಳನ್ನು ರಚಿಸುವ ಉದ್ದೇಶವನ್ನು ಹೊಂದಿದೆ.

**ಏಕೆ ಸುದ್ದಿಯಲ್ಲಿದೆ?**

ನ್ಯಾಷನಲ್ ನಾಲೆಜ್ಡ್ ನೆಟ್ವರ್ಕ್ ಅನ್ನು ಸಾರ್ಕ್ ರಾಷ್ಟ್ರಗಳಿಗೆ ವಿಸ್ತರಿಸಲು ಭಾರತ ಯೋಜನೆಯನ್ನು ರೂಪಿಸಲು ಮುಂದಾಗಿದೆ. ಇದಕ್ಕಾಗಿ ಟೆಲಿಕಾಂ ಸಂಸ್ಥೆಯನ್ನು ನೇಮಕ ಮಾಡಿಕೊಳ್ಳಲು ಚಾಲನೆಯನ್ನು ನೀಡಲಾಗಿದೆ. ಸಾರ್ಕ್ ರಾಷ್ಟ್ರಗಳ ಪೈಕಿ ಪಾಕಿಸ್ತಾನವನ್ನು ಹೊರತುಪಡಿಸಿ ಅಫ್ಘಾನಿಸ್ತಾನ, ಬಾಂಗ್ಲಾದೇಶ, ಭೂತಾನ್, ಮಾಲ್ಡೀವ್ಸ್, ನೇಪಾಳ ಮತ್ತು ಶ್ರೀಲಂಕಾ ದೇಶಗಳ ಶೈಕ್ಷಣಿಕ ಹಾಗೂ ಸಂಶೋಧನಾ ಸಂಸ್ಥೆಗಳಿಗೆ ಎನ್.ಕೆ.ಎನ್ ವಿಸ್ತರಿಸಲಾಗುವುದು.

ಎನ್.ಕೆ.ಎನ್ ಅಫ್ಘಾನಿಸ್ತಾನದಿಂದ ದೆಹಲಿ ಅಥವಾ ಮುಂಬೈಗೆ, ಬಾಂಗ್ಲಾದೇಶದಿಂದ ಕೋಲ್ಕತಾ ಅಥವಾ ದೆಹಲಿ, ಭೂತಾನ್ನಿಂದ ಕೋಲ್ಕತಾ ಅಥವಾ ದೆಹಲಿ, ನೇಪಾಳದಿಂದ ಕೋಲ್ಕತ್ತಾ ಅಥವಾ ದೆಹಲಿ, ಮಾಲ್ಡೀವ್ಸ್ನಿಂದ ಚೆನ್ನೈ ಅಥವಾ ಮುಂಬೈವರೆಗೆ ಮತ್ತು ಶ್ರೀಲಂಕಾದಿಂದ ಚೆನ್ನೈ ಅಥವಾ ಮುಂಬೈವರೆಗೆ ಸಂಪರ್ಕವನ್ನು ಹೊಂದಿರಲಿದೆ. ಅಫ್ಘಾನಿಸ್ತಾನ, ಮಾಲ್ಡೀವ್ಸ್ ಮತ್ತು ಶ್ರೀಲಂಕಾದೊಂದಿಗೆ ಅಂತರರಾಷ್ಟ್ರೀಯ ಸಂಪರ್ಕವನ್ನು ಜಲಾಂತರ್ಗಾಮಿ ಕೇಬಲ್ ಮೂಲಕ ಸಾಧಿಸಲಾಗುವುದು.

**ಪಾಕಿಸ್ತಾನ ಹೊರಗೆ ಏಕೆ?**

ಗಡಿಭಾಗದಲ್ಲಿ ಭಯೋತ್ಪಾದಕ ದಾಳಿಗೆ ಪಾಕಿಸ್ತಾನ ಪ್ರಚೋದನೆ ನೀಡುತ್ತಿರುವುದರಿಂದ ಭಾರತ ಮತ್ತು ಪಾಕಿಸ್ತಾನ ನಡುವಿನ ಸಂಬಂಧ ಹದಗೆಟ್ಟಿದ್ದು, ಭಾರತ ಈಗಾಗಲೇ ಪಾಕಿಸ್ತಾನ ಜೊತೆಗೆ ಮಾತುಕತೆಯನ್ನು ನಿಲ್ಲಿಸಿದೆ.

www.karunaduexams.com

## ಐಸ್ ಲ್ಯಾಂಡಿನಲ್ಲಿ ಪುರುಷ ಮತ್ತು ಮಹಿಳೆಯರಿಗೆ ಸಮಾನ ವೇತನ



ಐಸ್‌ಲ್ಯಾಂಡ್ ಸರ್ಕಾರ ಮೊಟ್ಟ ಮೊದಲ ಬಾರಿಗೆ ಪುರುಷ ಮತ್ತು ಮಹಿಳೆಯರಿಗೆ ಸಮಾನ ವೇತನ ನೀಡುವ ಕಾನೂನನ್ನು ರೂಪಿಸಿದೆ. ಆ ಮೂಲಕ ಪುರುಷ ಮತ್ತು ಮಹಿಳೆಯರಿಗೆ ಸಮಾನ ವೇತನ ಕಾನೂನು ಜಾರಿಗೆ ತಂದ ಮೊದಲ ರಾಷ್ಟ್ರವೆನಿಸಿದೆ.

- ಹೊಸ ನಿಯಮದ ಅಡಿಯಲ್ಲಿ, ಕನಿಷ್ಠ 25 ಜನರನ್ನು ನೇಮಕ ಮಾಡುವ ಕಂಪನಿಗಳು ಮತ್ತು ಸರ್ಕಾರಿ ಏಜೆನ್ಸಿಗಳು ತಮ್ಮ ಸಮಾನ-ವೇತನ ನೀತಿಯ ಸರ್ಕಾರಿ ಪ್ರಮಾಣೀಕರಣವನ್ನು ಪಡೆಯಬೇಕಾಗುತ್ತದೆ. ಸಮಾನ ವೇತನ ಸಾಬೀತುಪಡಿಸುವಲ್ಲಿ ವಿಫಲವಾದವರು ದಂಡವನ್ನು ತೆರಬೇಕಾಗುತ್ತದೆ.
- ಐಸ್‌ಲ್ಯಾಂಡ್ ನಲ್ಲಿ 2022 ರ ವೇಳೆಗೆ ಲಿಂಗ ವೇತನದ ಅಂತರವನ್ನು ನಿರ್ಮೂಲನೆ ಮಾಡುವ ಉದ್ದೇಶದೊಂದಿಗೆ ಈ ಕಾನೂನು ತರಲಾಗಿದೆ. ಪ್ರಸ್ತುತ ಐಸ್‌ಲ್ಯಾಂಡ್ ನಲ್ಲಿ ಶೇ.38% ರಷ್ಟು ಸಂಸತ್ ಸದಸ್ಯರು ಸ್ತ್ರೀಯರಾಗಿದ್ದಾರೆ. ಇದು ಜಾಗತಿಕ ಸರಾಸರಿಗಿಂತಲೂ ಕಡಿಮೆ ಇದೆ. ಪ್ರಧಾನ ಮಂತ್ರಿ ಕ್ಯಾಟ್ರಿನ್ ಜಾಕೋಬ್ಸ್ಡೋಟ್ಟಿರ್ ರವರು ದೇಶದ ಮೊದಲ ಮಹಿಳಾ ಪ್ರಧಾನಿ.

**ಐಸ್‌ಲ್ಯಾಂಡ್:**

ಐಸ್‌ಲ್ಯಾಂಡ್ ಉತ್ತರ ಅಟ್ಲಾಂಟಿಕ್ ಸಾಗರದಲ್ಲಿರುವ ಒಂದು ದ್ವೀಪ ರಾಷ್ಟ್ರವಾಗಿದ್ದು, ಸುಮಾರು 323,000 ಜನಸಂಖ್ಯೆಯನ್ನು ಹೊಂದಿದೆ. ಪ್ರವಾಸೋದ್ಯಮ ಮತ್ತು ಮೀನುಗಾರಿಕೆ ಇಲ್ಲಿನ ಆರ್ಥಿಕತೆಯ ಮೂಲ ಆಧಾರ. ಕಳೆದ ಒಂಬತ್ತು ವರ್ಷಗಳಿಂದ, ವಿಶ್ವ ಆರ್ಥಿಕ ವೇದಿಕೆ (WEF)ಯ ವಿಶ್ವದ ಅತ್ಯಂತ ಲಿಂಗ-ಸಮಾನತೆ ರಾಷ್ಟ್ರವಾಗಿ ಹೊರಹೊಮ್ಮುತ್ತಿದೆ.

- ಅಮೆರಿಕದ ಮಿನ್ನೆಸೋಟ ರಾಜ್ಯದಲ್ಲಿ ಈಗಾಗಲೇ ಸಮಾನ ವೇತನ ನೀಡಲಾಗುತ್ತಿದೆ. ಆದರೆ, ಖಾಸಗಿ ಮತ್ತು ಸರ್ಕಾರಿ ಉದ್ದಿಮೆಗಳಲ್ಲಿ ಕೂಡ ಈ ನಿಯಮವನ್ನು ಜಾರಿಗೆ ತಂದ ಮೊದಲ ರಾಷ್ಟ್ರ ಐಸ್‌ಲ್ಯಾಂಡ್ ಆಗಿದೆ.

## ಪಾಕಿಸ್ತಾನವನ್ನು "ವಿಶೇಷ ವೀಕ್ಷಣೆ ಪಟ್ಟಿ"ಗೆ ಸೇರ್ಪಡೆ ಮಾಡಿದ ಅಮೆರಿಕ

ಧಾರ್ಮಿಕ ಸ್ವಾತಂತ್ರ್ಯದ "ತೀವ್ರ ಉಲ್ಲಂಘನೆ" ಮಾಡಿರುವ ಹಿನ್ನಲೆಯಿಂದಾಗಿ ಪಾಕಿಸ್ತಾನವನ್ನು ಹೊಸದಾಗಿ ರಚಿಸಿರುವ "ವಿಶೇಷ ವೀಕ್ಷಣೆ ಪಟ್ಟಿ (Special Watch List)"ಗೆ ಅಮೆರಿಕ ಸೇರ್ಪಡೆ ಮಾಡಿದೆ.

**ವಿಶೇಷ ವೀಕ್ಷಣೆ ಪಟ್ಟಿ:**

ವಿಶೇಷ ವೀಕ್ಷಣೆ ಪಟ್ಟಿಯು ತೀವ್ರವಾದ ಧಾರ್ಮಿಕ ಸ್ವಾತಂತ್ರ್ಯವನ್ನು ಉಲ್ಲಂಘಿಸುವ ಅಥವಾ ಸಹಿಸಬಲ್ಲ ರಾಷ್ಟ್ರಗಳಿಗೆ ಆದರೆ 'ನಿರ್ದಿಷ್ಟ ಕಾಳಜಿಯ ದೇಶಗಳು' (ಸಿಪಿಸಿ) ಒಳಗೊಂಡಿರದ ಪಟ್ಟಿಯಾಗಿದೆ.

www.karunaduexams.com

**ಹಿನ್ನಲೆ**:

ವಿಶೇಷ ವೀಕ್ಷಣೆ ಪಟ್ಟಿ 2016 ಫ್ರಾಂಕ್ ಆರ್ ವೂಲ್ಫ್ ಇಂಟರ್ನ್ಯಾಷನಲ್ ರಿಲೀಜಿಯಸ್ ಫ್ರೀಡಮ್ ಆಕ್ಟ್ ಅಡಿಯಲ್ಲಿ ಹೊಸದಾಗಿ ರಚಿಸಲಾಗಿದೆ. ಅಂತರಾಷ್ಟ್ರೀಯ ಧಾರ್ಮಿಕ ಸ್ವಾತಂತ್ರ(IRF) ತಿದ್ದುಪಡಿ ಮಾಡಿ ಫ್ರಾಂಕ್ ಆರ್ ವೂಲ್ಫ್ ಇಂಟರ್ನ್ಯಾಷನಲ್ ರಿಲೀಜಿಯಸ್ ಫ್ರೀಡಮ್ ಆಕ್ಟ್ ಜಾರಿಗೆ ತರಲಾಗಿದೆ. ಇದರಡಿ ಅಮೆರಿಕದ ಅಧ್ಯಕ್ಷರು ಧಾರ್ಮಿಕ ಸ್ವಾತಂತ್ರ ಉಲ್ಲಂಘನೆಯಾಗುತ್ತಿರುವ ದೇಶವನ್ನು ವಿಶೇಷ ವೀಕ್ಷಣೆ ಪಟ್ಟಿಗೆ ಸೇರ್ಪಡೆ ಮಾಡಬಹುದಾಗಿದೆ.

**ಪಾಕಿಸ್ತಾನದ ಸೇರ್ಪಡೆ ಏಕೆ**?

ಪಾಕಿಸ್ತಾನವು ಅದರ ಧಾರ್ಮಿಕ ಅಲ್ಪಸಂಖ್ಯಾತರಿಗೆ ಕಿರುಕುಳ ಮಾಡುವುದನ್ನು ಮುಂದುವರೆಸಿದೆ, ಅಹಮದಿಗಳಂತಹ ಗುಂಪುಗಳ ವಿರುದ್ಧ ತಾರತಮ್ಯವನ್ನು ಹೊಂದಿದೆ. ದೂಷಣೆಯನ್ನು ಪ್ರಶ್ನಿಸುವವರ ವಿರುದ್ಧ ಕಾನೂನು ಮೂಲಕ ಹಿಂಸೆಯನ್ನು ನೀಡುತ್ತಿರುವ ಕಾರಣ ವಿಶೇಷ ವೀಕ್ಷಣೆ ಪಟ್ಟಿಗೆ ಸೇರಿಸಲಾಗಿದೆ.

**'ನಿರ್ದಿಷ್ಟ ಕಾಳಜಿಯ ದೇಶಗಳು' (Countries of Particular Concern" (CPC):**

ಅಮೆರಿಕ ರಾಜ್ಯ ಇಲಾಖೆಯು ಧಾರ್ಮಿಕ ಸ್ವಾತಂತ್ರ್ಯದ ವಿರುದ್ಧ ಅಪರಾಧಿಗಳೆಂದು ಪರಿಗಣಿಸಲ್ಪಟ್ಟ ರಾಷ್ಟ್ರಗಳ ಪಟ್ಟಿಯನ್ನು ಅನಾವರಣಗೊಳಿಸಿದೆ. ಈ ರಾಷ್ಟ್ರಗಳನ್ನು "ನಿರ್ದಿಷ್ಟ ಕಾಳಜಿಯ ರಾಷ್ಟ್ರಗಳು" (CPC) ಎಂದು ಕರೆಯಲಾಗುತ್ತದೆ.

ಈ ಪಟ್ಟಿಯಲ್ಲಿರುವ ದೇಶಗಳು: ಬರ್ಮಾ, ಚೀನಾ, ಎರಿಟ್ರಿಯಾ, ಇರಾನ್, ಉತ್ತರ ಕೊರಿಯಾ, ಸುಡಾನ್, ಸೌದಿ ಅರೇಬಿಯಾ, ತಜಾಕಿಸ್ತಾನ್, ತುರ್ಕಮೆನಿಸ್ತಾನ್, ಮತ್ತು ಉಜ್ಬೇಕಿಸ್ತಾನ್.

- ಧಾರ್ಮಿಕ ಸ್ವಾತಂತ್ರ್ಯದ "ವ್ಯವಸ್ಥಿತ, ಮುಂದುವರಿದ ಮತ್ತು ಅತಿರೇಕದ" ಉಲ್ಲಂಘನೆಗಳಲ್ಲಿ ತೊಡಗಿದ ನಂತರ ಒಂದು ರಾಷ್ಟ್ರವನ್ನು ಸಿಪಿಸಿ ಎಂದು ಗುರುತಿಸಲಾಗುವುದು. 1998ರ ಅಂತರರಾಷ್ಟ್ರೀಯ ಧಾರ್ಮಿಕ ಸ್ವಾತಂತ್ರ್ಯ ಕಾಯಿದೆಗೆ ಅನುಗುಣವಾಗಿ ಘೋಷಿಸಲಾಗುವುದು.

**ಪರಿಣಾಮ**:

ಸಿಪಿಸಿ ಗಳೆಂದು ಕರೆಯಲ್ಪಡುವ ರಾಷ್ಟ್ರಗಳು ಅಮೆರಿಕ ಅಧ್ಯಕ್ಷರ ನಿರ್ಧಾರಕ್ಕೆ ಒಳಪಟ್ಟಿರುತ್ತದೆ. ಅಂದರೆ ಅಂತಹ ದೇಶಗಳ ಮೇಲೆ ಆರ್ಥಿಕ ಅಥವಾ ರಾಜಕೀಯ ನಿರ್ಬಂಧವನ್ನು ಹೇರಬಹುದು. ಅಂತಹ ದೇಶಗಳಲ್ಲಿ ಧಾರ್ಮಿಕ ಸ್ವಾತಂತ್ರ್ಯ ಸ್ಥಿತಿಯನ್ನು ಸುಧಾರಿಸಲು ಇದರ ಉದ್ದೇಶ.

## ಬ್ರಿಟನ್ ನಲ್ಲಿ "ಮೈಕ್ರೋಬೀಡ್ಸ್ (Microbeads)" ಮೇಲೆ ನಿಷೇಧ



ಮೈಕ್ರೋಬೀಡ್ಸ್ಗಳನ್ನು ಒಳಗೊಂಡಿರುವ ಉತ್ಪನ್ನಗಳ ತಯಾರಿಕೆಯ ಮೇಲೆ ಬ್ರಿಟನ್ ನಿಷೇಧವನ್ನು ಹೇರಿದ್ದು, ಜನವರಿ 9 ರಿಂದ ಜಾರಿಗೆ ಬಂದಿದೆ. ತಯಾರಕರು ಇನ್ನು ಮುಂದೆ ಕಾಸ್ಮೆಟಿಕ್ ಮತ್ತು ಪರ್ಸನಲ್ ಕೇರ್ ಉತ್ಪನ್ನಗಳಲ್ಲಿ (ಸ್ಕ್ರಬ್ಸ್, ಶವರ್ ಜೆಲ್ ಮತ್ತು ಟೂತ್ ಪೇಸ್ಟ್) ಮೈಕ್ರೋಬೀಡ್ಸ್ ಗಳನ್ನು ಬಳಸುವಂತಿಲ್ಲ.

ಆದರೆ ಈ ನಿಷೇಧವು ಸನ್ಸ್ಕ್ರೀನ್ ಮತ್ತು ಮೇಕ್ಅಪ್ ಹೊರತಾಗಿದೆ. ಈ ಉತ್ಪನ್ನಗಳಲ್ಲಿ ಮೈಕ್ರೋಬೀಡ್ಸ್‌ಗಳನ್ನು ಬಳಸಲು ಅನುಮತಿಸಲಾಗಿದೆ.

**ಮೈಕ್ರೋಬೀಡ್ಸ್**:

ಮೈಕ್ರೋಬೀಡ್ಸ್ ಗಳು ಅನೇಕ ಸೌಂದರ್ಯ ಉತ್ಪನ್ನಗಳಲ್ಲಿ ಕಂಡುಬರುವ ಸಣ್ಣ ಸಣ್ಣ ಪ್ಲಾಸ್ಟಿಕ್ ತುಂಡುಗಳಾಗಿವೆ, ಉದಾಹರಣೆಗೆ ಎಫ್ಫೋಲಿಯಾಟಿಂಗ್ ಸ್ಕ್ರಬ್ಗಳು, ಟೂತ್ ಪೇಸ್ಟ್ ಗಳಲ್ಲಿ ಇವುಗಳನ್ನು ಕಾಣಬಹುದು.

**ಮೈಕ್ರೋಬೀಡ್ಸ್ ನಿಂದ ಪರಿಸರದ ಮೇಲಾಗುವ ತೊಂದರೆಗಳು:**

ಅಧ್ಯಯನದ ಪ್ರಕಾರ ಮೈಕ್ರೋಬೀಡ್ಸ್ ಗಳು ಸ್ನಾನಗೃಹದಿಂದ ಸಮುದ್ರವನ್ನು ಸೇರಬಲ್ಲವು. ಲಕ್ಷಾಂತರ ಪುಟ್ಟ ಪುಟ್ಟ ಪ್ಲಾಸ್ಟಿಕ್ಗಳು ವಿಶ್ವದ ಸಾಗರಗಳು, ಸರೋವರಗಳು ಮತ್ತು ನದಿ ಮುಖಜ ಪ್ರದೇಶಗಳನ್ನು ಸೇರ್ಪಡೆಗೊಂಡು ಸಾಗರದಲ್ಲಿ ಜೀವವೈವಿಧ್ಯತೆಗೆ ಹಾನಿ ಮಾಡುತ್ತವೆ. ಅಲ್ಲದೇ ಮೈಕ್ರೋಬೀಡ್ಸ್ ಗಳು ಆಹಾರ ಸರಪಳಿಯನ್ನು ಸೇರಿ ವಿಷಯುಕ್ತಗೊಳಿಸುತ್ತವೆ.

- ಅಮೆರಿಕಾ, ನ್ಯೂಜಿಲ್ಯಾಂಡ್, ಕೆನಡಾ ಸೇರಿದಂತೆ ಐರೋಪ್ ಖಂಡದ ಅನೇಕ ರಾಷ್ಟ್ರಗಳಲ್ಲಿ ಮೈಕ್ರೋಬೀಡ್ಸ್ ಬಳಕೆ ಮೇಲೆ ನಿಷೇಧ ಹೇರಲಾಗಿದೆ.

## ಪ್ರಶಸ್ತಿಗಳು

## ಪರಿಸರ

**ಫ್ಲೆಮಿಂಗೊ ಉತ್ಸವ (Flemingo Festival)**



ಪುಲಿಕಾಟ್ ಸರೋವರದಲ್ಲಿ ವಾರ್ಷಿಕ ಫ್ಲೆಮಿಂಗೊ ಉತ್ಸವ ಆರಂಭಗೊಂಡಿದೆ. ಪುಲಿಕಾಟ್ ಮತ್ತು ನೆಲ್ಲಪಟ್ಟು ಸರೋವರದಲ್ಲಿ ಪ್ರವಾಸೋದ್ಯಮವನ್ನು ಉತ್ತೇಜಿಸಲು ಫ್ಲೆಮಿಂಗೋ ಉತ್ಸವವನ್ನು ಪ್ರತಿವರ್ಷ ಆಯೋಜಿಸಲಾಗುತ್ತಿದೆ. ಕಳೆದ 12 ವರ್ಷಗಳಿಂದ ಫ್ಲೆಮಿಂಗೋ ಉತ್ಸವ ನಡೆಯುತ್ತಿದೆ. ಸೈಬೀರಿಯಾದ ವಲಸಿಗ ಹಕ್ಕಿಗಳು ಸಂತಾನೋತ್ಪತ್ತಿಗಾಗಿ ಈ ಸ್ಥಳಕ್ಕೆ ಭೇಟಿ ಮಾಡುತ್ತವೆ. ವರ್ಣರಂಜಿತ ಹಕ್ಕಿಗಳನ್ನು ನೋಡುವುದು ಹಕ್ಕಿ ವೀಕ್ಷಕರ ಕಣ್ಣಿಗೆ ಬಣ್ಣದ ಲೋಕವನ್ನು ಸೃಷ್ಟಿಸುತ್ತದೆ.

ಸುಮಾರು 80 ವಿವಿಧ ಹಕ್ಕಿ ಪ್ರಭೇದಗಳು ಸಂತಾನೋತ್ಪತ್ತಿಗಾಗಿ ಪುಲಿಕಾಟ್ಗೆ ವಲಸೆ ಬರುತ್ತವೆ. ಸರೋವರದ ಆಳವಿಲ್ಲದ ನೀರಿನಲ್ಲಿ ಸಂತಾನೋತ್ಪತಿ ನಡೆಸಿ, ನಂತರ ತಮ್ಮ ಸ್ವಂತ ಜಾಗಕ್ಕೆ ಹಿಂತಿರುಗುತ್ತವೆ.

www.karunaduexams.com

**ನಲ್ಲಪಟ್ಟು ಪಕ್ಷಿಧಾಮ**: ನೂರಾರು ಪೆಲಿಕನ್ ಮತ್ತು ಇತರ ಪಕ್ಷಿಗಳಿಗೆ ಇದು ದೊಡ್ಡ ಆವಾಸಸ್ಥಾನ ಆಗಿದೆ. ಆಂಧ್ರಪ್ರದೇಶ-ತಮಿಳುನಾಡಿನ ಗಡಿಯಲ್ಲಿರುವ ಪುಲಿಕಾಟ್ ಸರೋವರದ 20 ಕಿ.ಮೀ ಉತ್ತರಕ್ಕೆ ಈ ಪಕ್ಷಿಧಾಮ 459 ಹೆಕ್ಟೇರ್ ಪ್ರದೇಶದಲ್ಲಿ ಹರಡಿದೆ.

**ಪುಲಿಕಾಟ್ ಸರೋವರ:**

ಪುಲಿಕಾಟ್ ಸರೋವರ ಭಾರತದ ಎರಡನೇ ಅತ್ಯಂತ ದೊಡ್ಡ ಚೌಳಾದ - ನೀರಿನ ಸರೋವರ ಅಥವಾ ಆವೃತ ಜಲಭಾಗವಾಗಿದೆ. ಇದು ದಕ್ಷಿಣ ಭಾರತದ ಕೊರಮಂಡಲ ಕರಾವಳಿಯ ಆಂಧ್ರಪ್ರದೇಶ ಹಾಗು ತಮಿಳುನಾಡುರಾಜ್ಯಗಳ ಗಡಿಯಲ್ಲಿ ವ್ಯಾಪಿಸಿದೆ. ಸರೋವರವು ಪುಲಿಕಾಟ್ ಸರೋವರ ಪಕ್ಷಿಧಾಮವನ್ನು ಒಳಗೊಂಡಿದೆ. ಶ್ರೀಹರಿಕೋಟದ ಪ್ರತಿಬಂಧಕ ದ್ವೀಪವು ಸರೋವರವನ್ನು ಬಂಗಾಳ ಕೊಲ್ಲಿಯಿಂದ ಪ್ರತ್ಯೇಕಿಸುತ್ತದೆ. ದ್ವೀಪವು ಸತೀಶ್ ಧವನ್ ಬಾಹ್ಯಕಾಶ ಕೇಂದ್ರಕ್ಕೆ ನೆಲೆಯಾಗಿದೆ.

**ಸಿಮಿಲಿಪಾಲ್ ನಲ್ಲಿ "ಮಂಕಿಡಿಯಾ" ಬುಡಕಟ್ಟಿಗೆ ಆವಾಸಸ್ಥಾನ ನಿರಾಕರಣೆ**



ಒಡಿಶಾದ 13 ವಿಶೇಷ ದುರ್ಬಲ ಅನುಸೂಚಿತ ಪಂಗಡಗಳಲ್ಲಿ ಒಂದಾದ "ಮಂಕಿಡಿಯಾ" ಬುಡಕಟ್ಟು ಪಂಗಡಕ್ಕೆ ಸಿಮಿಲಿಪಾಲ್ ಹುಲಿ ಸಂರಕ್ಷಣಾ ವಲಯದ ಒಳಗೆ ವಾಸಿಸುವ ಹಕ್ಕುಗಳನ್ನು ನಿರಾಕರಿಸಲಾಗಿದೆ. ಐತಿಹಾಸಿಕ ಪರಿಶಿಷ್ಟ ಪಂಗಡಗಳು ಮತ್ತು ಇತರ ಸಂಪ್ರದಾಯವಾದಿ ಅರಣ್ಯ ನಿವಾಸಿಗಳು (ಅರಣ್ಯ ಹಕ್ಕುಗಳ ಗುರುತಿಸುವಿಕೆ) ಕಾಯಿದೆ, 2006 ರ ಅಡಿಯಲ್ಲಿ ಅರಣ್ಯ ಇಲಾಖೆಯು ಈ ನಿರ್ಧಾರವನ್ನು ಕೈಗೊಂಡಿದೆ. ಕಾಡು ಪ್ರಾಣಿಗಳು, ಅದರಲ್ಲೂ ಹುಲಿಗಳು ಆಕ್ರಮಣ ಮಾಡಬಹುದೆಂಬ ಕಾರಣಕ್ಕೆ ಆವಾಸಸ್ಥಾನವನ್ನು ನಿರಾಕರಿಸಲಾಗಿದೆ ಎಂದು ಅರಣ್ಯ ಇಲಾಖೆ ತಿಳಿಸಿದೆ.

**ಮಂಕಿಡಿಯಾ ಜನಾಂಗ:**

ಮಂಕಿಡಿಯಾ ಒಂದು ಅಂಚಿನಲ್ಲಿರುವ ಅನುಸೂಚಿತ ಪಂಗಡ. ಸಿಮಿಲಿಪಾಲಿನಲ್ಲಿ ಸಮೃದ್ಧವಾಗಿ ಲಭ್ಯವಿರುವ ಸಿಯಾಲಿ ನಾರಿನಿಂದ ಹಗ್ಗವನ್ನು ತಯಾರಿಸುವ ಉದ್ಯೋಗದ ಮೇಲೆ ಈ ಜನಾಂಗ ಅವಲಂಭಿತವಾಗಿದೆ.

**ವಿಶೇಷ ದುರ್ಬಲ ಅನುಸೂಚಿತ ಪಂಗಡಗಳು:**

ವಿಶೇಷ ದುರ್ಬಲ ಅನುಸೂಚಿತ ಪಂಗಡಗಳು (P*articularly Vulnerable Tribal Groups*) ಅನುಸೂಚಿತ ಪಂಗಡಗಳಲ್ಲಿ ಹೆಚ್ಚು ದುರ್ಬಲವಾಗಿವೆ. 1975 ರಲ್ಲಿ ಭಾರತ ಸರ್ಕಾರವು ಹೆಚ್ಚು ದುರ್ಬಲ ಅನುಸೂಚಿತ ಪಂಗಡಗಳನ್ನು ಗುರುತಿಸಲು ಪ್ರಾರಂಭಿಸಿತು, ಅದರಂತೆ PVTG ಗಳೆಂದು ಕರೆಯುವ ಒಂದು ಪ್ರತ್ಯೇಕ ಅನುಸೂಚಿತ ಪಂಗಡಗಳನ್ನು ಗುರುತಿಸಲಾಯಿತು. ಪ್ರಾರಂಭದಲ್ಲಿ 52 ಅಂತಹ ಪಂಗಡಗಳನ್ನು ಘೋಷಿಸಿತು ಮತ್ತು 1993ರಲ್ಲಿ ಹೆಚ್ಚುವರಿ 23 ಗುಂಪುಗಳನ್ನು

www.karunaduexams.com

ಸೇರಿಸಲಾಯಿತು., 2011ರ ಜನಗಣತಿ ಪ್ರಕಾರ 17 ರಾಜ್ಯಗಳು ಮತ್ತು ಒಂದು ಕೇಂದ್ರಾಡಳಿತ ಪ್ರದೇಶ (ಯುಟಿ)ದಲ್ಲಿ 705 ಅನುಸೂಚಿತ ಪಂಗಡಗಳು ಹರಡಿಕೊಂಡಿದ್ದು, ಇವುಗಳಲ್ಲಿ 75 ಪಂಗಡಗಳನ್ನು ವಿಶೇಷ ದುರ್ಬಲ ಅನುಸೂಚಿತ ಪಂಗಡವೆಂದು ಗುರುತಿಸಲಾಗಿದೆ. 75 PVTGಗಳಲ್ಲಿ ಒಡಿಶಾದಲ್ಲಿ (13), ಆಂಧ್ರಪ್ರದೇಶ (12) ಪಂಗಡಗಳಿವೆ.

**ಸಿಮಿಲಿಪಾಲ್ ರಾಷ್ಟ್ರೀಯ ಉದ್ಯಾನವನ:**

ಇದು ಒಡಿಶಾದ ಮಯೂರ್ಭಂಜ್ ಜಿಲ್ಲೆಯಲ್ಲಿದೆ. ಇದು ಸಿಮಿಲಿಪಾಲ್-ಕುಲ್ದಿಹಾ-ಹಡ್ಗಡ್ ಆನೆ ಸಂರಕ್ಷಣಾ ವಲಯದ ಭಾಗವಾಗಿದ್ದು ಮಯೂರ್ಭಂಜ್ ಆನೆ ಸಂರಕ್ಷಣಾ ವಲಯ ಎಂದು ಕರೆಯಲ್ಪಡುತ್ತದೆ, ಇದು ಮೂರು ಸಂರಕ್ಷಿತ ಪ್ರದೇಶಗಳು - ಸಿಮಿಲಿಪಾಲ್ ಹುಲಿ ಸಂರಕ್ಷಣಾ ವಲಯ, ಹಡ್ಗಡ್ ವನ್ಯಜೀವಿ ಅಭಯಾರಣ್ಯ ಮತ್ತು ಕುಲ್ದಿಹಾ ವನ್ಯಜೀವಿ ಅಭಯಾರಣ್ಯವನ್ನು ಒಳಗೊಂಡಿದೆ.

## ವ್ಯವಹಾರ

**ನಬಾರ್ಡ್ (ತಿದ್ದುಪಡಿ) ಮಸೂದೆ, 2017ಗೆ ಸಂಸತ್ತು ಅಂಗೀಕಾರ**

ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ರಾಷ್ಟ್ರೀಯ ಬ್ಯಾಂಕ್ (ತಿದ್ದುಪಡಿ) ಮಸೂದೆಗೆ ರಾಜ್ಯಸಭೆಯಲ್ಲಿ ಅನುಮೋದನೆ ದೊರೆಯುವ ಮೂಲಕ ಸಂಸತ್ತಿನಲ್ಲಿ ಅಂಗೀಕಾರಗೊಂಡಿದೆ. ಲೋಕಸಭೆಯಲ್ಲಿ ಆಗಸ್ಟ 2017ರಲ್ಲಿ ಈ ಮಸೂದೆ ಅಂಗೀಕಾರಗೊಂಡಿತ್ತು. ಈ ಮಸೂದೆಯು ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ರಾಷ್ಟ್ರೀಯ ಬ್ಯಾಂಕ್ (ನಬಾರ್ಡ್) ಕಾಯಿದೆ-1981ಕ್ಕೆ ತಿದ್ದುಪಡಿ ತರಲಿದೆ. ಗ್ರಾಮೀಣ ಪ್ರದೇಶಗಳಲ್ಲಿನ ಕೃಷಿ ಮತ್ತು ಕೈಗಾರಿಕಾ ಅಭಿವೃದ್ಧಿಗೆ ಸಾಲ ನೀಡುವಂತಹ ಸೌಲಭ್ಯಗಳನ್ನು ಒದಗಿಸಲು ಮತ್ತು ನಿಯಂತ್ರಿಸಲು ನಬಾರ್ಡ್ ಗೆ ಅಧಿಕಾರ ನೀಡಲಿದೆ.

**ಮಸೂದೆಯ ಪ್ರಮುಖಾಂಶಗಳು:**

- ನಬಾರ್ಡ್ ತಿದ್ದುಪಡಿ ಮಸೂದೆಯಿಂದಾಗಿ ಅದಕ್ಕೆ ತನ್ನ ಅಧಿಕೃತ ಬಂಡವಾಳವನ್ನು 5000 ಕೋಟಿಯಿಂದ ಆರು ಪಟ್ಟು ಹೆಚ್ಚಿಸಿ 30,000 ಕೋಟಿ ರೂ.ಗೆ ಏರಿಸಲು ಸಾಧ್ಯವಾಗಲಿದೆ. ಅಲ್ಲದೇ ಅವಶ್ಯವೆನಿಸಿದಾಗ ಕೇಂದ್ರ ಸರ್ಕಾರ ಭಾರತೀಯ ರಿಸರ್ವ್ ಬ್ಯಾಂಕ್ ನೊಂದಿಗೆ ಸಮಾಲೋಚಿಸಿ ಅಧಿಕೃತ ಬಂಡವಾಳವನ್ನು ರೂ 30000 ಕೋಟಿಗಿಂತ ಹೆಚ್ಚಿಸಲು ಅನುವು ಮಾಡಿಕೊಡಲಿದೆ.
- ಕೇಂದ್ರ ಸರ್ಕಾರ ನಬಾರ್ಡ್ ನಲ್ಲಿ ಶೇ. 51% ಬಂಡವಾಳ ಪಾಲನ್ನು ಹೊಂದುವ ಅವಕಾಶವನ್ನು ಕಲ್ಪಿಸಿದೆ. ಅಂತೆಯೇ ಆರ್‌ಬಿಐ ಹೊಂದಿರುವ ರೂ 20ಕೋಟಿ ಮೌಲ್ಯದ ಶೇರುಗಳನ್ನು ಕೇಂದ್ರ ಸರಕಾರಕ್ಕೆ ವರ್ಗಾಯಿಸಲು ಅನುಕೂಲವಾಗಿದೆ.
- ಮಸೂದೆಯು "ಸಣ್ಣ ಉದ್ಯಮ", "ಸಣ್ಣ ಉದ್ಯಮ ಮತ್ತು ವಿಕೇಂದ್ರಿಕೃತ ವಲಯ" ಬದಲಿಗೆ "ಸೂಕ್ಷ್ಮ ಉದ್ಯಮ", "ಸಣ್ಣ ಉದ್ಯಮ" ಮತ್ತು ಮದ್ಯಮ ಉದ್ಯಮ" ಎಂದು ಬದಲಾಯಿಸಲಿದೆ. ಅಲ್ಲದೇ ಸೂಕ್ಷ್ಮ, ಸಣ್ಣ ಮತ್ತು ಮದ್ಯಮ ಉದ್ದಿಮೆಗಳಿಗೆ ಸಾಲ ಕೊಡಲು ಬ್ಯಾಂಕುಗಳಿಗೆ ಆರ್ಥಿಕ ನೆರವು ನೀಡಲಿದೆ.

www.karunaduexams.com

**FAME ಯೋಜನೆಯಡಿ ಎಲೆಕ್ಟ್ರಿಕ್ ವಾಹನಗಳ ಉತ್ತೇಜನಕ್ಕೆ ಬೆಂಗಳೂರು ಆಯ್ಕೆ**



ಫೇಮ್ ಇಂಡಿಯಾ ಸಬ್ಸಿಡಿ ಯೋಜನೆಯಡಿ ಸಾರ್ವಜನಿಕ ಸಾರಿಗೆ ವ್ಯವಸ್ಥೆಯಲ್ಲಿ ಎಲೆಕ್ಟ್ರಿಕ್ ವಾಹನಗಳನ್ನು ಖರೀದಿಸಲು ಕೇಂದ್ರ ಭಾರಿ ಕೈಗಾರಿಕೆ ಇಲಾಖೆ ಕರ್ನಾಟಕಕ್ಕೆ ಅನುಮೋದನೆ ನೀಡಿದೆ. ಎಲೆಕ್ಟ್ರಿಕ್ ವಾಹನಗಳನ್ನು ಉತ್ತೇಜಿಸುವ ಉದ್ದೇಶಕ್ಕಾಗಿ ಬೆಂಗಳೂರು ಸೇರಿದಂತೆ ದೇಶದ 11 ನಗರಗಳನ್ನು ಆಯ್ಕೆ ಮಾಡಿದೆ.

ಈ ಯೋಜನೆಯಡಿ ಕರ್ನಾಟಕ ಸರ್ಕಾರ 40 ಎಲೆಕ್ಟ್ರಿಕ್ ಬಸ್, 100 ನಾಲ್ಕು ಚಕ್ರ ವಾಹನಗಳು, 500 ತ್ರಿಚಕ್ರ ವಾಹನಗಳನ್ನು ಗರಿಷ್ಠ ಶೇ 60% ಸಬ್ಸಿಡಿ ದರದಲ್ಲಿ ಖರೀದಿ ಮಾಡಲಿದೆ. ರಾಜಧಾನಿ ಬೆಂಗಳೂರಿನದ್ಯಾಂತ ಎಲೆಕ್ಟ್ರಿಕ್ ಚಾರ್ಜರ್ ಮೂಲ ಸೌಕರ್ಯ ಅಭಿವೃದ್ದಿಪಡಿಸಲು ಸಹ ಸಬ್ಸಿಡಿ ನೆರವನ್ನು ನೀಡಲಾಗುವುದು. ಎಲೆಕ್ಟ್ರಿಕ್ ವಾಹನಗಳು ಪರಿಸರ ರಕ್ಷಣೆ, ಇಂಧನ ಉಳಿತಾಯ ಹಾಗೂ ಸಾರ್ವಜನಿಕ ಆರೋಗ್ಯ ಸುಧಾರಣೆ ಮಾಡುವಲ್ಲಿ ಮಹತ್ವದ ಪಾತ್ರವಹಿಸಲಿವೆ.

**ಫೇಮ್ (FAME) ಇಂಡಿಯಾ ಯೋಜನೆ:**

ಫಾಸ್ಟರ್ ಅಡಾಪ್ಷನ್ ಅಂಡ್ ಮೆನ್ಯುಫ್ಯಾಕ್ಚರಿಂಗ್ ಆಫ್ ಹೈಬ್ರಿಡ್ ಅಂಡ್ ಎಲೆಕ್ಟ್ರಿಕ್ ವೆಹಿಕಲ್ಸ್ ಇನ್ ಇಂಡಿಯಾ' (ಫೇಮ್ ಇಂಡಿಯಾ) ಯೋಜನೆಯನ್ನು 2015ರಲ್ಲಿ ನ್ಯಾಷನಲ್ ಎಲೆಕ್ಟ್ರಿಕ್ ಮೊಬಿಲಿಟಿ ಮಿಷನ್ ಅಡಿಯಲ್ಲಿ ಆರಂಭಿಸಲಾಯಿತು. ಪರಿಸರ ಸ್ನೇಹಿ ವಾಹನಗಳನ್ನು ಅಭಿವೃದ್ದಿಪಡಿಸುವುದು ಯೋಜನೆಯ ಪ್ರಮುಖ ಉದ್ದೇಶ. ಭಾರಿ ಕೈಗಾರಿಕ ಇಲಾಖೆ ಯೋಜನೆಯನ್ನು ಅನುಷ್ಠಾನಗೊಳಿಸುತ್ತಿದೆ.

ಹೈಬ್ರಿಡ್ ಮತ್ತು ಎಲೆಕ್ಟ್ರಿಕ್ ವಾಹನದ ತಯಾರಿಕೆ ಮತ್ತು ಮಾರುಕಟ್ಟೆಯ ಸೃಷ್ಟಿಗಾಗಿ ಆರ್ಥಿಕ ಮತ್ತು ಹಣಕಾಸಿನ ಪ್ರೋತ್ಸಾಹವನ್ನು ಒದಗಿಸುವುದು ಯೋಜನೆಯ ಉದ್ದೇಶವಾಗಿದೆ. ದ್ವಿಚಕ್ರ ವಾಹನಗಳು, ತ್ರಿ ಚಕ್ರ ವಾಹನಗಳು, ನಾಲ್ಕು-ಚಕ್ರದ ಪ್ರಯಾಣಿಕ ವಾಹನಗಳು ಸೇರಿದಂತೆ ಎಲ್ಲ ವಾಹನ ವಿಭಾಗಗಳನ್ನು ಉತ್ತೇಜಿಸುವ ಗುರಿ ಹೊಂದಿದೆ.

**ಭಾರತ್ ನೆಟ್ ಯೋಜನೆ: ಒಂದು ಲಕ್ಷ ಗ್ರಾಮ ಪಂಚಾಯತಿಗಳಿಗೆ ಇಂಟರ್ನೆಟ್ ಸೌಲಭ್ಯ**

www.karunaduexams.com



ಡಿಜಿಟಲ್ ಭಾರತದ ಬೆನ್ನೆಲುಬಾದ ಭಾರತ್ ನೆಟ್ ಯೋಜನೆಯ ಮೊದಲ ಹಂತದಲ್ಲಿ ಒಂದು ಲಕ್ಷ ಗ್ರಾಮ ಪಂಚಾಯಿತಿಗಳಿಗೆ ಅತಿ ವೇಗದ ಆಪ್ಟಿಕಲ್ ಫೈಬರ್ ನೆಟ್ವರ್ಕ್ ಕಲ್ಪಿಸುವ ಮೂಲಕ ಗಮನಾರ್ಹ ಸಾಧನೆಯನ್ನು ಮಾಡಲಾಗಿದೆ. ಡಿಸೆಂಬರ್ 31, 2017ರೊಳಗೆ ಯೋಜನೆಯನ್ನು ಪೂರ್ಣಗೊಳಿಸುವ ಗುರಿಯನ್ನು ಹೊಂದಲಾಗಿತ್ತು. ಯೋಜನೆಯ ಮೊದಲ ಹಂತದಲ್ಲಿ ಅತಿ ವೇಗದ ಇಂಟರ್ನೆಟ್ ಸೇವೆಯನ್ನು 2.5 ಲಕ್ಷ ಹಳ್ಳಿಗಳಿಗೆ ಕಲ್ಪಿಸಲಾಗಿದ್ದು, ಇದರಿಂದ 200 ಮಿಲಿಯನ್ಗಿಂತ ಹೆಚ್ಚು ಗ್ರಾಮೀಣ ಭಾರತೀಯರು ಅನುಕೂಲ ಪಡೆಯಲಿದ್ದಾರೆ.

**ಭಾರತ್ ನೆಟ್ ಯೋಜನೆ**:

ಭಾರತ ಸರ್ಕಾರದ ಮಹತ್ವಾಕಾಂಕ್ಷೆಯ ಡಿಜಿಟಲ್ ಇಂಡಿಯಾದಡಿ ಬ್ರಾಡ್ಬ್ಯಾಂಡ್ ಮೂಲಕ ಭಾರತದ ಎಲ್ಲಾ ಮನೆಗಳನ್ನು ವಿಶೇಷವಾಗಿ ಗ್ರಾಮೀಣ ಪ್ರದೇಶಗಳಲ್ಲಿ ಸಂಪರ್ಕ ಸಾಧಿಸುವ ಸಲುವಾಗಿ ಭಾರತ್ ನೆಟ್ ಯೋಜನೆಯನ್ನು ಜಾರಿಗೆ ತರಲಾಗಿದೆ. ಇದರಡಿ ಗ್ರಾಮ ಪಂಚಾಯತಿಗಳ ಮೂಲಕ ಮನೆಗಳಿಗೆ ಬ್ರಾಡ್ಬ್ಯಾಂಡ್ ಸಂಪರ್ಕವನ್ನು ಮತ್ತು ಜಿಲ್ಲಾ ಮಟ್ಟದಲ್ಲಿ ಸರ್ಕಾರಿ ಸಂಸ್ಥೆಗಳಿಗೆ ಬ್ರಾಡ್ಬ್ಯಾಂಡ್ ಸೇವೆಯನ್ನು ಒದಗಿಸಲಾಗುವುದು. ಯುನಿವರ್ಸಲ್ ಸರ್ವೀಸ್ ಆಬ್ಲಿಕೇಷನ್ ಫಂಡ್ (ಯುಎಸ್ಒಎಫ್) ಮೂಲಕ ಈ ಯೋಜನೆಗೆ ಹಣವನ್ನು ನೀಡಲಾಗುತ್ತಿದೆ.

**ಯುನಿವರ್ಸಲ್ ಸರ್ವೀಸ್ ಆಬ್ಲಿಕೇಷನ್ ಫಂಡ್:**

ಯುನಿವರ್ಸಲ್ ಸರ್ವೀಸ್ ಆಬ್ಲಿಕೇಷನ್ ಫಂಡ್ ಅನ್ನು 2002 ರಲ್ಲಿ ಸ್ಥಾಪಿಸಲಾಗಿದೆ. ಯುಎಸ್ಒಎಫ್, ಭಾರತದಾದ್ಯಂತ ವಿಶೇಷವಾಗಿ ಗ್ರಾಮೀಣ ಮತ್ತು ದೂರದ ಪ್ರದೇಶಗಳಲ್ಲಿ ಟೆಲಿಗ್ರಾಫ್ ಸೇವೆಗಳನ್ನು ಒದಗಿಸುವುದನ್ನು ಖಚಿತಪಡಿಸಿಕೊಳ್ಳಲು ಸಬ್ಸಿಡಿಗಳನ್ನು ಒದಗಿಸುತ್ತದೆ. ಯುಎಸ್ಒಎಫ್ ಒಬ್ಬ ಆಡಳಿತಗಾರರನ್ನು ಹೊಂದಿದ್ದು, ಇವರು ಕಾರ್ಯದರ್ಶಿ, ದೂರಸಂಪರ್ಕ ಇಲಾಖೆಗೆ (DoT) ವರದಿ ಮಾಡಿಕೊಳ್ಳಬೇಕಾಗಿರುತ್ತದೆ.

- ದೂರವಾಣಿ ಕಂಪನಿಗಳ ಎಲ್ಲಾ ಹೊಂದಾಣಿಕೆಯ ಒಟ್ಟು ಆದಾಯದ (ಎಜಿಆರ್) ಮೇಲೆ ವಿಧಿಸಲಾಗುವ 5%ರಷ್ಟು ಯೂನಿವರ್ಸಲ್ ಸರ್ವಿಸ್ ಲೆವಿ (ಯುಎಸ್ಎಲ್)ಯನ್ನು ಭಾರತ ಸರ್ಕಾರದ ಸಂಕುಚಿತ ನಿಧಿಯಲ್ಲಿ ಇಡಲಾಗುತ್ತದೆ. ಸಂಕುಚಿತ ನಿಧಿಯಿಂದ ಹಣವನ್ನು ಬಳಸುವ ಮೊದಲು ಸಂಸತ್ತಿನ ಅನುಮೋದನೆಯನ್ನು ಪಡೆಯುವುದು ಕಡ್ಡಾಯ.

www.karunaduexams.com

**<u>ಡ್ರೋಣ್ ಕ್ಯಾಮೆರ ಬಳಸಲು ರೈಲ್ವೆ ನಿರ್ಧಾರ</u>**



ವಿವಿಧ ರೈಲ್ವೇ ಚಟುವಟಿಕೆಗಳು ವಿಶೇಷವಾಗಿ ಟ್ರ್ಯಾಕ್ಗಳು ಮತ್ತು ಇತರ ರೈಲ್ವೆ ಮೂಲಸೌಕರ್ಯಗಳ ಯೋಜನೆ ಮೇಲ್ವಿಚಾರಣೆ ಮತ್ತು ನಿರ್ವಹಣೆಗೆ "ಡ್ರೋನ್" ಕ್ಯಾಮೆರಾಗಳನ್ನು (UAV/NETRA) ನಿಯೋಜಿಸಲು ಭಾರತೀಯ ರೈಲ್ವೇ ನಿರ್ಧರಿಸಿದೆ,. ಈ ನಿಟ್ಟಿನಲ್ಲಿ, ಡ್ರೋಣ್

ಕ್ಯಾಮೆರಾಗಳನ್ನು ಖರೀದಿಸಲು ಝೋನಲ್ ರೈಲ್ವೆಗಳಿಗೆ ನಿರ್ದೇಶನ ನೀಡಲಾಗಿದೆ. ರೈಲು ಕಾರ್ಯಾಚರಣೆಗಳಲ್ಲಿ ತಂತ್ರಜ್ಞಾನವನ್ನು ಬಳಸಿಕೊಂಡು ಸುರಕ್ಷತೆ ಮತ್ತು ದಕ್ಷತೆ ಹೆಚ್ಚಿಸಲು ರೈಲ್ವೇ ಇಲಾಖೆ ಈಗಾಗಲೇ ಅನೇಕ ಕ್ರಮಗಳನ್ನು ಕೈಗೊಂಡಿದೆ.

- ಡ್ರೋನ್ "ಕ್ಯಾಮೆರಾಗಳು ಪರಿಹಾರ ಮತ್ತು ರಕ್ಷಣಾ ಕಾರ್ಯಾಚರಣೆ, ಯೋಜನೆಯ ಮೇಲ್ವಿಚಾರಣೆ, ಪ್ರಮುಖ ಕೆಲಸಗಳ ಪ್ರಗತಿ, ಟ್ರ್ಯಾಕ್ ಪರಿಸ್ಥಿತಿಗಳು ಮತ್ತು ತಪಾಸಣೆ ಸಂಬಂಧಿತ ಚಟುವಟಿಕೆಗಳ ಮೇಲ್ವಿಚಾರಣೆ ಚಟುವಟಿಕೆಗಳಲ್ಲಿ ಸಹಾಯ ಮಾಡುತ್ತವೆ.
- ಮೇಳಗಳು ಮತ್ತು ಉತ್ಸವ ಸಮಯದಲ್ಲಿ ಜನರ ಗುಂಪಿನ ನಿರ್ವಹಣೆ, ತ್ಯಾಜ್ಯಗಳನ್ನು ಗುರುತಿಸಲು ಮತ್ತು ರೈಲು ನಿಲ್ದಾಣಗಳ ವೈಮಾನಿಕ ಸಮೀಕ್ಷೆಗಾಗಿ ಸಹ ಇದನ್ನು ಬಳಸಿಕೊಳ್ಳಬಹುದಾಗಿದೆ.
- ಟ್ರ್ಯಾಕ್ ಮತ್ತು ಇತರ ರೈಲ್ವೆ ಮೂಲಸೌಕರ್ಯಗಳ ಸುರಕ್ಷತೆ ಮತ್ತು ನಿರ್ವಹಣೆಗೆ ಸಂಬಂಧಿಸಿದ ನೈಜ ಸಮಯದ ಮಾಹಿತಿಗಳನ್ನು ಒದಗಿಸುವುಲ್ಲಿ ಡ್ರೋನ್ಸ್ ಪ್ರಮುಖ ಪಾತ್ರವಹಿಸುತ್ತದೆ.

ಈ ಉಪಕ್ರಮದ ಅಡಿಯಲ್ಲಿ "ವೆಸ್ಟ್ ಸೆಂಟ್ರಲ್ ರೈಲ್ವೇಸ್" ಜಬಲ್ಪುರ್ "ಡ್ರೋನ್" ಕ್ಯಾಮೆರಾಗಳನ್ನು ಖರೀದಿಸಿದ ಮೊದಲ ರೈಲ್ವೆ ವಲಯ ಆಗಿದೆ.

**<u>ವಿದೇಶಿ ನೇರ ಬಂಡವಾಳ ಹೂಡಿಕೆ ನೀತಿ ಮತ್ತಷ್ಟು ಸಡಿಲ</u>**



ವಿದೇಶಿ ನೇರ ಬಂಡವಾಳ ಹೂಡಿಕೆ ನೀತಿಯಲ್ಲಿ ಹಲವಾರು ತಿದ್ದುಪಡಿಗಳಿಗೆ ಕೇಂದ್ರ ಸಚಿವ ಸಂಪುಟ ಅನುಮೋದನೆ ನೀಡಿದೆ. ದೇಶದಲ್ಲಿ ವ್ಯವಹಾರವನ್ನು ಸುಲಭವಾಗಿಸಲು ಮತ್ತು ಸರಳಗೊಳಿಸುವ ಉದ್ದೇಶದಿಂದ ಎಫ್ಡಿಐ ನೀತಿಯನ್ನು ಉದಾರೀಕರಣಗೊಳಿಸಲಾಗಿದೆ. ಇದರಿಂದ ವಿದೇಶಿ ನೇರ ಬಂಡವಾಳ ಹೂಡಿಕೆ ಒಳಹರಿವು ಹೆಚ್ಚಾಗಲಿದ್ದು, ಹೂಡಿಕೆ, ಆದಾಯ ಮತ್ತು ಉದ್ಯೋಗಗಳ ಬೆಳವಣಿಗೆಗೆ ಕಾರಣವಾಗಲಿದೆ.

**ಪ್ರಮುಖ ಬದಲಾವಣೆಗಳು:**

- ಆಟೋಮ್ಯಾಟಿಕ್ ರೂಟ್‌ನಡಿ ಬರುವ ಸಿಂಗಲ್ ಬ್ರ್ಯಾಂಡ್ ಚಿಲ್ಲರೆ ವಹಿವಾಟಿನಲ್ಲಿ ಶೇ.100 ರಷ್ಟು ಎಫ್ಡಿಐ ಅವಕಾಶ.
- ನಿರ್ಮಾಣ ಕ್ಷೇತ್ರದಲ್ಲಿ ಶೇ 100 ರಷ್ಟು ಎಫ್ಡಿಐ ಅವಕಾಶ
- ಸರಕಾರಿ ಸ್ವಾಮ್ಯದ ವಿಮಾನಯಾನ ಸಂಸ್ಥೆ ಏರ್‌ಇಂಡಿಯಾದಲ್ಲಿ ಶೇ.49ರಷ್ಟು ಹೂಡಿಕೆ ಮಾಡಲು ವಿದೇಶಿ ವೈಮಾನಿಕ ಕಂಪೆನಿಗಳಿಗೆ ಅವಕಾಶ.
- ವೈದ್ಯಕೀಯ ಉಪಕರಣಗಳು ವ್ಯಾಖ್ಯಾನಕ್ಕೆ ತಿದ್ದುಪಡಿ

**ಅಟೋಮ್ಯಾಟಿಕ್ ರೂಟ್?**

ಆಟೋಮ್ಯಾಟಿಕ್ ವಿಧದಲ್ಲಿ ಹೆಚ್ಚಿನ ನಿಬಂಧನೆಗಳು ಇರುವುದಿಲ್ಲ. ಇದರಲ್ಲಿ, ವಿದೇಶಿ ಹೂಡಿಕೆದಾರರು ಅಥವಾ ಭಾರತದ ಕಂಪನಿ ಇಲ್ಲಿ ಹೂಡಿಕೆ ಮಾಡಲು ಆರ್‌ಬಿಐ ಅಥವಾ ಸರಕಾರದ

www.karunaduexams.com

ಅನುಮತಿ ಪಡೆಯಬೇಕಾಗಿಲ್ಲ. ಆದರೆ, ಸರಕಾರದ ಒಪ್ಪಿಗೆಯ ವಿಧದಲ್ಲಿ, ಇಲ್ಲಿ ಬಂಡವಾಳ ಹೂಡಬೇಕೆಂದರೆ, ವಿದೇಶಿ ಹೂಡಿಕೆದಾರರು ಸರಕಾರದಿಂದ ಪೂರ್ವಾನುಮತಿ ಪಡೆಯಬೇಕು.

**<u>ಟ್ರಾನ್ಸ್‌ಪೋರ್ಟ್ ಫಾರ್ ಲಂಡನ್ (TFL) ಜೊತೆ ಒಡಂಬಡಿಕೆ ಒಪ್ಪಂದಕ್ಕೆ ಸಹಿ</u>**



ರಸ್ತೆ ಸಾರಿಗೆ ಮತ್ತು ಹೆದ್ದಾರಿಗಳ ಸಚಿವಾಲಯವು ಟ್ರಾನ್ಸ್‌ಪೋರ್ಟ್ ಫಾರ್ ಲಂಡನ್ ನೊಂದಿಗೆ ಒಪ್ಪಂದಕ್ಕೆ ಸಹಿ ಹಾಕಿದೆ. TFL ಪರಿಣಿತಿಯೊಂದಿಗೆ ದೇಶದ ಸಾರ್ವಜನಿಕ ಸಾರಿಗೆ ವಿನ್ಯಾಸವನ್ನು ಪುನರುಜ್ಜೀವನಗೊಳಿಸಲು ಉದ್ದೇಶದಿಂದ ಒಡಂಬಡಿಕೆ ಒಪ್ಪಂದಕ್ಕೆ ಸಹಿಹಾಕಲಾಗಿದೆ.

ಪ್ರಸ್ತಾವಿತ ಒಡಂಬಡಿಕೆಯು ಸಾರ್ವಜನಿಕ ಸಾರಿಗೆ ವ್ಯವಸ್ಥೆಯನ್ನು ಪುನರುಜ್ಜೀವನಗೊಳಿಸಲು ಮತ್ತು ಸಮರ್ಥನೀಯ ಸಾರ್ವಜನಿಕ ಸಾರಿಗೆ ವ್ಯವಸ್ಥೆಯನ್ನು ರಚಿಸುವ ಮೂಲಕ ಪ್ರಯಾಣಿಕರ ಸಾಮರ್ಥ್ಯವನ್ನು ವೃದ್ಧಿಸಲು ಸಹಾಯ ಮಾಡಲಿದೆ.

ಸಾರ್ವಜನಿಕ ಸಾರಿಗೆಯಲ್ಲಿ ವಿದ್ಯುತ್ ಚಾಲಿತ ವಾಹನಗಳನ್ನು ಹೆಚ್ಚಿಸುವುದು ಮತ್ತು ಡಿಜಿಟಲ್ ವಹಿವಾಟು ಮೂಲಕ ಟಿಕೆಟ್ ವಿತರಣೆ ಉತ್ತೇಜಿಸುವುದು ಒಪ್ಪಂದ ಭಾಗವಾಗಿದೆ.

## ರಾಷ್ಟ್ರೀಯ

**<u>ಅರುಣಾಚಲ ಪ್ರದೇಶ ಬಯಲು ಮಲ ವಿಸರ್ಜನೆ ಮುಕ್ತ ರಾಜ್ಯವಾಗಿ ಘೋಷಣೆ</u>**




ಅರುಣಾಚಲ ಪ್ರದೇಶವನ್ನು ಬಯಲು ಮಲ ವಿಸರ್ಜನೆ ಮುಕ್ತ ರಾಜ್ಯವೆಂದು ಘೋಷಿಸಲಾಗಿದೆ. ಈಶಾನ್ಯ ಭಾರತದಲ್ಲಿ ಸಿಕ್ಕಿಂನ ನಂತರ ಈ ಸಾಧನೆ ಮಾಡಿದ ಎರಡನೇ ರಾಜ್ಯವೆಂಬ ಖ್ಯಾತಿಗೆ ಅರುಣಾಚಲ ಪ್ರದೇಶ ಪಾತ್ರವಾಗಿದೆ. ಅರುಣಾಚಲ ಪ್ರದೇಶವು 21 ಜಿಲ್ಲೆಗಳನ್ನು ಹೊಂದಿದೆ.

**ಹಿನ್ನಲೆ**:

2019ರ ಅಕ್ಟೋಬರ್ 2ರ ಅಂತ್ಯದೊಳಗೆ ಭಾರತವನ್ನು ಬಯಲು ಮಲ ವಿಸರ್ಜನೆ ಮುಕ್ತವನ್ನಾಗಿಸಲು ಗುರಿಯನ್ನು ಹೊಂದಲಾಗಿದೆ. ಆದರೆ ಅವಧಿಗೆ ಮುನ್ನವೇ ಅರುಣಾಚಲ ಪ್ರದೇಶ ಈ ಸಾಧನೆಯನ್ನು ಮಾಡಿದೆ.

**ಸ್ವಚ್ಛ ಭಾರತ ಮಿಷನ್:**

2019ರ ಹೊತ್ತಿಗೆ ಬಯಲು ಮಲ ವಿಸರ್ಜನೆಯನ್ನು ತಡೆಯುವುದು ಸ್ವಚ್ಛ ಭಾರತ ಅಭಿಯಾನದ ಗುರಿಯಾಗಿದೆ. 2014ರಲ್ಲಿ ಸ್ವಚ್ಛ ಭಾರತ ಅಭಿಯಾನಕ್ಕೆ ಚಾಲನೆ ನೀಡಲಾಯಿತು. ಮುನಿಸಿಪಲ್ ಘನ ತ್ಯಾಜ್ಯ ನಿರ್ವಹಣೆ ಹಾಗೂ ನೈರ್ಮಲ್ಯತೆ ಕಾಪಾಡುವುದು ಸಹ ಯೋಜನೆಯ ಪ್ರಮುಖ ಉದ್ದೇಶ.

www.karunaduexams.com

## ಭಾರತದ ನೂತನ ವಿದೇಶಾಂಗ ಕಾರ್ಯದರ್ಶಿಯಾಗಿ ವಿಜಯ್ ಗೋಖಲೆ ನೇಮಕ



ಭಾರತೀಯ ವಿದೇಶಾಂಗ ಸೇವೆಗಳ (ಐಎಫ್ಎಸ್) ಹಿರಿಯ ಅಧಿಕಾರಿ ವಿಜಯ್ ಗೋಖಲೆ ಮುಂದಿನ ವಿದೇಶಾಂಗ ಕಾರ್ಯದರ್ಶಿಯಾಗಿ ನಿಯೋಜಿತರಾಗಿದ್ದಾರೆ. ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ನೇಮಕಾತಿ ಸಚಿವ ಸಂಪುಟ ವಿಜಯ್ ಗೋಖಲೆ ಅವರನ್ನು ಈ ಹುದ್ದೆಗೆ ನೇಮಕ ಮಾಡಿದೆ. ಮುಂದಿನ ಎರಡು ವರ್ಷಗಳ ಕಾಲ ಗೋಖಲೆ ಅವರು ಈ ಹುದ್ದೆಯಲ್ಲಿ ಕಾರ್ಯನಿರ್ವಹಿಸಲಿದ್ದಾರೆ. ವಿದೇಶಾಂಗ ಕಾರ್ಯದರ್ಶಿ ಎಸ್. ಜೈಶಂಕರ್ ಅವರ ಅಧಿಕಾ ಅವಧಿ ಜನವರಿ 28ಕ್ಕೆ ಕೊನೆಗೊಳ್ಳಲಿದೆ.

**ವಿಜಯ್ ಗೋಖಲೆ:**

- ಗೋಖಲೆ ಅವರು 1981 ಬ್ಯಾಚಿನ ಭಾರತ ವಿದೇಶಾಂಗ ಸೇವೆಗಳ ಅಧಿಕಾರಿ. ಚೀನಾ ವಿಷಯದಲ್ಲಿ ಹೆಚ್ಚು ನೈಪುಣ್ಯತೆ ಹೊಂದಿರುವ ಗೋಖಲೆ ರವರು ಮ್ಯಾಂಡರಿನ್ ಭಾಷೆಯ ಬಳಕೆಯಲ್ಲಿ ಪರಿಣಿತಿ ಹೊಂದಿದ್ದಾರೆ.
- ಪ್ರಸ್ತುತ ಗೋಖಲೆ ಅವರು ವಿದೇಶಾಂಗ ಸಚಿವಾಲಯದಲ್ಲಿ ಕಾರ್ಯದರ್ಶಿ (ಆರ್ಥಿಕ ಸಂಬಂಧ)ಯಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಅದಕ್ಕೂ ಮುಂಚೆ ಜನವರಿ 2016 ರಿಂದ 2017 ಅಕ್ಟೋಬರ್ ವರೆಗೆ ಚೀನಾಕ್ಕೆ ಭಾರತದ ರಾಯಭಾರಿಯಾಗಿದ್ದರು.
- ಕಳೆದ ವರ್ಷ ಭಾರತ ಮತ್ತು ಚೀನಾ ನಡುವೆ ತಲೆದೂರಿದ್ದ ಡೊಕ್ಲಮ್ ಗಡಿ ವಿವಾದವನ್ನು ತಿಳಿಗೊಳಿಸುವಲ್ಲಿ ಗೋಖಲೆ ರವರು ಪ್ರಮುಖ ಪಾತ್ರವಹಿಸಿದ್ದರು.

## ರಾಷ್ಟ್ರೀಯ ಪೌರತ್ವ ನೋಂದಣಿಯ ಮೊದಲ ಕರಡು ಬಿಡುಗಡೆ



ಬಹುನಿರೀಕ್ಷಿತ ರಾಷ್ಟ್ರೀಯ ಪೌರತ್ವ ನೋಂದಣಿಯ (ಎನ್ಆರ್ಸಿ) ಮೊದಲ ಕರಡು ಬಿಡುಗಡೆಗೊಂಡಿದೆ. ರಾಷ್ಟ್ರೀಯ ಪೌರತ್ವ ನೋಂದಣಿಗೆ ಅರ್ಜಿ ಸಲ್ಲಿಸಿದ್ದ 3.29 ಕೋಟಿ ಜನರಲ್ಲಿ 1.9 ಕೋಟಿ ಜನರು ಅಧಿಕೃತವಾಗಿ ಭಾರತೀಯ ಪೌರತ್ವ ಹೊಂದಿದ್ದಾರೆ ಎಂದು ಕರಡಿನಲ್ಲಿ ಗುರುತಿಸಲಾಗಿದೆ. ಬಾಂಗ್ಲಾದೇಶದ ಗಡಿಯಿಂದ ಅಕ್ರಮವಾಗಿ ಅಸ್ಸಾಂ ಪ್ರವೇಶಿಸಿದವರನ್ನು ಪತ್ತೆ ಹಚ್ಚುವ ಸಲುವಾಗಿ ಸುಪ್ರೀಂ ಕೋರ್ಟ್ ಆದೇಶದ ಮೇರೆಗೆ ರಾಷ್ಟ್ರೀಯ ಪೌರತ್ವ ನೋಂದಣಿಯನ್ನು ರೂಪಿಸಿಲಾಗಿದೆ.

**ಹಿನ್ನಲೆ**:

ಬಾಂಗ್ಲಾದೇಶದಿಂದ ಅಸ್ಸಾಂಗೆ ಅಕ್ರಮವಾಗಿ ವಲಸೆ ಬರುವುದನ್ನು ತಡೆಯುವ ಸಲುವಾಗಿ ರಾಷ್ಟ್ರೀಯ ಪೌರತ್ವ ನೋಂದಣಿಯನ್ನು ತಯಾರಿಸಲಾಗಿದೆ. 1951 ರಲ್ಲಿ ಮೊದಲ ಬಾರಿಗೆ ತಯಾರಿಸಲ್ಪಟ್ಟ ಎನ್ಆರ್ಸಿ ಹೊಂದಿರುವ ಏಕೈಕ ರಾಜ್ಯ ಅಸ್ಸಾಂ. ಸಂಪೂರ್ಣ ಪ್ರಕ್ರಿಯೆಯನ್ನು ಮೇಲ್ವಿಚಾರಣೆ ಮಾಡುತ್ತಿರುವ ಸುಪ್ರೀಂ ಕೋರ್ಟ್ ಎನ್ಆರ್ಸಿಯ ಮೊದಲ ಕರಡು ಪ್ರತಿಯನ್ನು ಡಿಸೆಂಬರ್ 31 ರೊಳಗೆ ಪ್ರಕಟಿಸುವಂತೆ ಆದೇಶಿಸಿತ್ತು.

**ಏನಿದು ವಿವಾದ?**

www.karunaduexams.com

ಈ ಹಿಂದೆ ಕೊನೆಯ ಬಾರಿಗೆ 1951ರಲ್ಲಿ ಅಸ್ಸಾಂನಲ್ಲಿ ಎನ್‌ಆರ್‌ಸಿ ಪರಿಷ್ಕರಿಸಲಾಗಿತ್ತು. ಅಂದಿನ ವರದಿಯಲ್ಲಿ 80 ಲಕ್ಷ ಜನರು ಪೌರತ್ವವನ್ನು ಹೊಂದಿದ್ದರು. ನಂತರದಲ್ಲಿ ವಲಸಿಗರನ್ನು ಪತ್ತೆ ಹಚ್ಚುವ ಈ ಪ್ರಕ್ರಿಯೆ ನಡೆಸುವ ಕುರಿತು ಚರ್ಚೆ ನಡೆಸಲಾಗುತ್ತಿದೆ. 1979 ರಲ್ಲಿ ಅಸ್ಸಾಂ ಸ್ಟೂಡೆಂಟ್ಸ್ ಯೂನಿಯನ್ (ASU) ಯಿಂದ ಅಕ್ರಮ ವಲಸಿಗರ ಗುರುತಿಸುವಿಕೆ ಮತ್ತು ಗಡೀಪಾರು ಮಾಡುವ ಆರು ವರ್ಷಗಳ ಆಂದೋಲನವನ್ನು ಪ್ರಾರಂಭಿಸಲಾಯಿತು. ಇದು ಆಗಸ್ಟ 15, 1985 ರಂದು ಅಸ್ಸಾಂ ಒಪ್ಪಂದಕ್ಕೆ ಸಹಿ ಹಾಕುವ ಮೂಲಕ ಮುಕ್ತಾಯವಾಯಿತು.

2013ರ ಡಿಸೆಂಬರ್‌ನಲ್ಲಿ ಈ ಎನ್‌ಆರ್‌ಸಿ ಪ್ರಕ್ರಿಯೆ ಆರಂಭಗೊಂಡಿತ್ತು. ಕಳೆದ ಮೂರು ವರ್ಷಗಳಲ್ಲಿ ಈ ಸಂಬಂಧ ಸುಪ್ರೀಂ ಕೋರ್ಟ್‌ನಲ್ಲಿ 40 ಬಾರಿ ವಿಚಾರಣೆ ನಡೆದಿದೆ.

## ಕೇಂದ್ರ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವಾಲಯದಿಂದ “ನಾರಿ” ಪೋರ್ಟಲ್ ಗೆ ಚಾಲನೆ



ಕೇಂದ್ರ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವಾಲಯ “ನಾರಿ (NARI)” ಪೋರ್ಟಲ್ ಅನ್ನು ಹೊರತಂದಿದೆ. ಮಹಿಳೆಯರಿಗಾಗಿ ಜಾರಿಗೆ ತಂದಿರುವ ಕಾರ್ಯಕ್ರಮಗಳ ಮಾಹಿತಿಗಳು ಸುಲಭವಾಗಿ ಲಭ್ಯವಾಗುವ ಸಲುವಾಗಿ ನಾರಿ ವೆಬ್ ಪೋರ್ಟಲ್ ಅನ್ನು ಅಭಿವೃದ್ಧಿಪಡಿಸಲಾಗಿದೆ.

ಈ ಪೋರ್ಟಲ್‌ಗೆ ಕೇಂದ್ರ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವೆ ಮೇನಕಾ ಗಾಂಧಿ ಚಾಲನೆ ನೀಡಿದರು.

**ಉದ್ದೇಶ**:

- ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ನಡೆಸುತ್ತಿರುವ ಯೋಜನೆಗಳ ಬಗ್ಗೆ ಮಾಹಿತಿಯನ್ನು ಪೋರ್ಟಲ್ ಒಳಗೊಂಡಿದೆ. ವೆಬ್ ಪೋರ್ಟಲ್ ನಲ್ಲಿ ಯೋಜನೆಗಳನ್ನು ಒದಗಿಸುವ ಸಚಿವಾಲಯಗಳು, ಇಲಾಖೆಗಳು ಮತ್ತು ಸ್ವಾಯತ್ತ ಸಂಸ್ಥೆಗಳ ಲಿಂಕ್ಗಳು ಲಭ್ಯವಿರಲಿವೆ. ಅಲ್ಲದೇ ಆನ್ಲೈನ್ ಮೂಲಕ ಅರ್ಜಿ ಸಲ್ಲಿಸುವ ಮತ್ತು ದೂರುಗಳ ಪರಿಹಾರಕ್ಕೆ ಅವಕಾಶ ಕಲ್ಪಿಸಲಿದೆ.

**ಇ-ಸಂವಾದ**:

ಇದು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವಾಲಯದೊಂದಿಗೆ NGO ಗಳು ಮತ್ತು ನಾಗರಿಕ ಸಂಘ ಸಂಸ್ಥೆಗಳು ಸಂವಹನ ನಡೆಸಲು ಆರಂಭಿಸಲಾಗಿರುವ ಆನ್ಲೈನ್ ವೇದಿಕೆಯಾಗಿದೆ. ಇ-ಸಂವಾದ ಪೋರ್ಟಲ್ ಮೂಲಕ ಎನ್ಜಿಒಗಳು ಮತ್ತು ಸಿವಿಲ್ ಸೊಸೈಟಿ ತಮ್ಮ ಪ್ರತಿಕ್ರಿಯೆ,

www.karunaduexams.com

ಸಲಹೆಗಳನ್ನು, ಕುಂದುಕೊರತೆಗಳನ್ನು ಉತ್ತಮ ಅಭ್ಯಾಸಗಳನ್ನು ಹಂಚಿಕೊಳ್ಳಬಹುದಾಗಿದೆ. ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವಾಲಯದೊಳಗಿನ ಹಿರಿಯ ಅಧಿಕಾರಿಗಳು ತಮ್ಮ ಸಂಬಂಧಪಟ್ಟ ವಿಷಯ ವ್ಯಾಪ್ತಿಯೊಳಗೆ ಸ್ವೀಕರಿಸಿದ ಪ್ರತಿಕ್ರಿಯೆ/ಸಲಹೆಗಳನ್ನು ವೀಕ್ಷಿಸಬಹುದಾಗಿದೆ. ಇದು ಮಹಿಳೆಯರು ಮತ್ತು ಮಕ್ಕಳ ಕಲ್ಯಾಣಕ್ಕಾಗಿ ಪರಿಣಾಮಕಾರಿಯಾದ ನೀತಿಗಳನ್ನು ಮತ್ತು ಕ್ರಮಗಳನ್ನು ರೂಪಿಸುವಲ್ಲಿ ಸಹಾಯ ಮಾಡುತ್ತದೆ.

## ಪಶ್ಚಿಮ ಬಂಗಾಳ, ಉತ್ತರ ಪ್ರದೇಶ ಮತ್ತು ಉತ್ತರಖಂಡದಲ್ಲಿ ಐದು ನಮಾಮಿ ಗಂಗೆ ಯೋಜನೆಗೆ ಒಪ್ಪಿಗೆ



ಪಶ್ಚಿಮ ಬಂಗಾಳ, ಉತ್ತರಪ್ರದೇಶ ಮತ್ತು ಉತ್ತರಖಂಡ ರಾಜ್ಯಗಳಲ್ಲಿ ಸುಮಾರು 295.01 ಕೋಟಿ ರೂಪಾಯಿ ಮೌಲ್ಯದ ಐದು ನಮಾಮಿ ಗಂಗೆ ಯೋಜನೆಗಳಿಗೆ "ನ್ಯಾಷನಲ್ ಮಿಷನ್ ಫಾರ್ ಕ್ಲೀನ್ ಗಂಗಾ (ಎನ್‌ಎಂಸಿಜಿ)" ಅನುಮೋದನೆ ನೀಡಿದೆ. ಈ ಐದು ಯೋಜನೆಗಳಲ್ಲಿ, ಪಶ್ಚಿಮ ಬಂಗಾಳದಲ್ಲಿ ಕೊಳಚೆನೀರು ನಿರ್ವಹಣೆಗೆ ಸಂಬಂಧಿಸಿದಂತೆ ಮೂರು, ಉತ್ತರಖಂಡದಲ್ಲಿ ಚರಂಡಿ ನಿರ್ವಹಣೆಗೆ ಸಂಬಂಧಿಸಿದೆ ಒಂದು ಮತ್ತು ಉಳಿದ ಒಂದು ಯೋಜನೆ ಉತ್ತರ ಪ್ರದೇಶದಲ್ಲಿ ಘಾಟ್ ನಿರ್ವಹಣೆಗೆ ಸಂಬಂಧಿಸಿದೆ.

**ಯೋಜನೆಗಳ ಬಗ್ಗೆ:**

- **ಉತ್ತರಖಂಡ:** ಹರಿದ್ವಾರದಲ್ಲಿ ಕೆಲವು ತೆರೆದ ಪ್ರದೇಶಗಳಲ್ಲಿ ಒಳಚರಂಡಿ ಮಾರ್ಗಗಳನ್ನು ಹಾಕುವ ಯೋಜನೆ.
- **ವಾರಣಾಸಿ:** ಅನುಮೋದಿತ ಯೋಜನೆಯು ಹಲವಾರು ಘಾಟ್‌ಗಳ ದುರಸ್ತಿ ಮತ್ತು ಪುನಃ ರಚಿಸುವಿಕೆಯನ್ನು ಒಳಗೊಂಡಿದೆ.
- **ಪಶ್ಚಿಮ ಬಂಗಾಳ:** ಸಾರ್ವಜನಿಕ-ಖಾಸಗಿ ಸಹಭಾಗಿತ್ವದಲ್ಲಿ ಕಮರಹತಿ ಮತ್ತು ಬರಾನಗರ್ ಪುರಸಭೆಗಳಲ್ಲಿ ಒಳಚರಂಡಿ ನಿರ್ವಹಣೆ ಯೋಜನೆ ಸೇರಿದಂತೆ ಬರ್ಹಂಪುರ್ ಮುನಿಸಿಪಾಲಿಟಿ ಗಂಗಾ ನದಿ ಮಾಲಿನ್ಯ ತಡೆಯುವ ಯೋಜನೆಯನ್ನು ಅನುಮೋದಿಸಲಾಗಿದೆ.

**ನ್ಯಾಷನಲ್ ಮಿಷನ್ ಫಾರ್ ಕ್ಲೀನ್ ಗಂಗಾ:**

www.karunaduexams.com

ಎನ್‌ಎಂಸಿಜಿ ಗಂಗಾ ನದಿಯ ಪುನರುಜ್ಜೀವನ, ರಕ್ಷಣೆ ಮತ್ತು ನಿರ್ವಹಣೆ ರಾಷ್ಟ್ರೀಯ ಮಂಡಳಿಯ ಅನುಷ್ಠಾನ ವಿಭಾಗವಾಗಿದೆ (ನ್ಯಾಷನಲ್ ಗಂಗಾ ಕೌನ್ಸಿಲ್ ಎಂದೂ ಸಹ ಕರೆಯಲಾಗುತ್ತದೆ). ಸೊಸೈಟಿ ನೋಂದಣಿ ಕಾಯಿದೆ-1860ರಡಿ 2011 ರಲ್ಲಿ ಸ್ಥಾಪಿಸಲಾಗಿದೆ.

ಆಡಳಿತ ಸಮಿತಿ ಮತ್ತು ಕಾರ್ಯಕಾರಿ ಸಮಿತಿಯನ್ನೂ ಒಳಗೊಂಡಿರುವ ಎರಡು ಹಂತದ ನಿರ್ವಹಣೆಯ ರಚನೆಯನ್ನು ಹೊಂದಿದೆ. ಎನ್‌ಎಂಸಿಜಿಯ ಡೈರೆಕ್ಟರ್ ಜನರಲ್ ರವರು ಎರಡು ಸಮಿತಿಯ ಮುಖ್ಯಸ್ಥರಾಗಿರುತ್ತಾರೆ. ಮಿಷನ್ ನಡಿ 1000 ಕೋಟಿ ಮೌಲ್ಯದ ಯೋಜನೆಗಳನ್ನು ಅನುಮೋದಿಸುವ ಅಧಿಕಾರವನ್ನು ಕಾರ್ಯಕಾರಿ ಸಮಿತಿಯು ಹೊಂದಿದೆ.

**<u>ಜಲ ಮಾರ್ಗ ವಿಕಾಸ ಯೋಜನೆ- ಅನುಷ್ಠಾನಕ್ಕೆ ಸಚಿವ ಸಂಪುಟ ಒಪ್ಪಿಗೆ</u>**



ಗಂಗಾ ನದಿಯ ಮೇಲೆ ಹಲ್ದಿಯಾ-ವಾರಣಾಸಿ ನಡುವಿನ 1380 ಕಿ.ಮೀ ಉದ್ದದ ರಾಷ್ಟ್ರೀಯ ಜಲಮಾರ್ಗ-1(NW1)ರ ಸಂಚಾರ ಸಾಮರ್ಥ್ಯ ಹೆಚ್ಚಿಸಲು ಜಲ ಮಾರ್ಗ ವಿಕಾಸ ಯೋಜನೆ(ಜೆಎಂವಿಪಿ) ಅನುಷ್ಠಾನಕ್ಕೆ ಆರ್ಥಿಕ ವ್ಯವಹಾರಗಳ ಕ್ಯಾಬಿನೆಟ್ ಸಮಿತಿ (ಸಿಸಿಇಎ) ಅನುಮೋದನೆ ನೀಡಿದೆ

ರೂ 5,370 ಕೋಟಿ ಯೋಜನೆ ಇದಾಗಿದ್ದು, ವಿಶ್ವ ಬ್ಯಾಂಕಿನ ತಾಂತ್ರಿಕ ನೆರವು ಮತ್ತು ಹೂಡಿಕೆ ಬೆಂಬಲದೊಂದಿಗೆ ಅನುಷ್ಠಾನಗೊಳಿಸಲಾಗುವುದು. ಮಾರ್ಚ್ 2023ರ ವೇಳೆಗೆ ಯೋಜನೆ ಮುಕ್ತಾಯಗೊಳ್ಳಲಿದೆ ಎಂದು ಅಂದಾಜಿಸಲಾಗಿದೆ.

**ಜಲ ಮಾರ್ಗ ವಿಕಾಸ ಯೋಜನೆ:**

ಗಂಗಾ ನದಿಯ ಮೇಲೆ ಕನಿಷ್ಠ 1500 ಟನ್ ಹಡಗುಗಳ ವಾಣಿಜ್ಯ ಸಂಚರಣೆ ಸಕ್ರಿಯಗೊಳಿಸಲು 2014-15ರ ಬಜೆಟ್ನಲ್ಲಿ ಜಲ ಮಾರ್ಗ ವಿಕಾಸ ಯೋಜನೆಯನ್ನು ಕೇಂದ್ರ ಸರ್ಕಾರ ಘೋಷಿಸಿತು. ಯೋಜನೆಯಡಿ ಗಂಗಾ ನದಿಯ ಮೇಲೆ ಅಲಹಾಬಾದ್ ಮತ್ತು ಹಲ್ದಿಯಾ ನಡುವೆ 1620 ಕಿ.ಮೀ ಜಲಮಾರ್ಗವನ್ನು ಅಭಿವೃದ್ಧಿಪಡಿಸಲಾಗುವುದು.

ಈ ಯೋಜನೆಯು ಉತ್ತರ ಪ್ರದೇಶ, ಬಿಹಾರ, ಜಾರ್ಖಂಡ್ ಮತ್ತು ಪಶ್ಚಿಮ ಬಂಗಾಳವನ್ನು ಒಳಗೊಂಡಿದೆ. ವಾರಾಣಸಿ, ಬಲಿಯಾ, ಘಜಿಪುರ್, ಚಪ್ರಾ, ಬಕ್ಸಾರ್, ಪಾಟ್ನಾ, ವೈಶಾಲಿ, ಖಗೇರಿಯಾ, ಬೇಗುಸಾರೈ, ಮುಂಗರ್, ಭಾಗಲ್ಪುರ್, ಸಾಹಿಬ್ ಗಂಜ್ ಯೋಜನೆಯಡಿ ಬರುವ ಪ್ರಮುಖ ಜಿಲ್ಲೆಗಳು.

ಗಂಗಾ ನದಿಯಲ್ಲಿ 1500 ಟನ್ ಹಡಗುಗಳ ವಾಣಿಜ್ಯ ಸಂಚರಣೆ ಸಕ್ರಿಯಗೊಳಿಸಲು ಮೂರು ಮೀಟರ್ಗಳಷ್ಟು ಆಳವನ್ನು ಹೊಂದಿರುವ ಫೇರ್ ವೇ ಅಭಿವೃದ್ಧಿಪಡಿಸುವುದು ಯೋಜನೆಯ ಉದ್ದೇಶ.

www.karunaduexams.com


## ಝೋಜಿಲಾ ಸುರಂಗ ನಿರ್ಮಾಣಕ್ಕೆ ಕೇಂದ್ರ ಸಚಿವ ಸಂಪುಟ ಒಪ್ಪಿಗೆ



ಜಮ್ಮು ಮತ್ತು ಕಾಶ್ಮೀರದಲ್ಲಿ ಎರಡು ಪಥದ ಝೋಜಿಲಾ ಪಾಸ್ ಸುರಂಗ ನಿರ್ಮಾಣಕ್ಕೆ ಕೇಂದ್ರ ಆರ್ಥಿಕ ವ್ಯವಹಾರಗಳ ಸಂಪುಟ ಸಮಿತಿ ಅನುಮೋದನೆ ನೀಡಿದೆ. ಆಯಕಟ್ಟಿನ ಸುರಂಗವು ಲೇಹ್ ಪ್ರದೇಶಕ್ಕೆ ಸರ್ವಋತು ಸಂಪರ್ಕವನ್ನು ಒದಗಿಸಲಿದೆ. ಪೂರ್ಣಗೊಂಡ ನಂತರ ಇದು ಏಷ್ಯಾದ ಅತಿದೊಡ್ಡ ಎರಡು ಪಥದ ಸುರಂಗ ಮಾರ್ಗ ಎನಿಸಲಿದೆ.

- ಝೋಜಿಲಾ ಸುರಂಗವು ಶ್ರೀನಗರ-ಕಾರ್ಗಿಲ್-ಲೇಹ್ ರಾಷ್ಟ್ರೀಯ ಹೆದ್ದಾರಿ (NH-1A) ಯಲ್ಲಿ 11,578 ಅಡಿ ಎತ್ತರದಲ್ಲಿದೆ.
- ₹6,809 ಕೋಟಿ ವೆಚ್ಚದಲ್ಲಿ ನಿರ್ಮಿಸಲಾಗುವ ಈ ಸುರಂಗವು ಶ್ರೀನಗರ, ಕಾರ್ಗಿಲ್ ಮತ್ತು ಲೇಹ್‌ಗೆ ಸಂಪರ್ಕ ಕಲ್ಪಿಸುತ್ತದೆ. ಏಳು ವರ್ಷಗಳಲ್ಲಿ ಈ ಸುರಂಗ ನಿರ್ಮಿಸಲು ಉದ್ದೇಶಿಸಲಾಗಿದೆ.
- 14.15 ಕಿಲೋ ಮೀಟರ್ ಉದ್ದದ ನಾಲ್ಕು ಪಥದ ಒಂದೇ ಸುರಂಗ ಮಾರ್ಗವನ್ನು ನಿರ್ಮಿಸಲು ಯೋಜನೆ ರೂಪಿಸಲಾಗಿದೆ.
- ರಸ್ತೆ ಸಾರಿಗೆ ಮತ್ತು ಹೆದ್ದಾರಿ ಸಚಿವಾಲಯ ಈ ಯೋಜನೆಯನ್ನು ರಾಷ್ಟ್ರೀಯ ಹೆದ್ದಾರಿ ಮತ್ತು ಮೂಲಸೌಕರ್ಯ ಅಭಿವೃದ್ಧಿ ನಿಗಮದ ಮೂಲಕ ಅನುಷ್ಠಾನಗೊಳಿಸಲಿದೆ.
- ಈ ಸುರಂಗ ಮಾರ್ಗವು ಎಲ್ಲ ಋತುಗಳಲ್ಲಿ ಶ್ರೀನಗರ, ಕಾರ್ಗಿಲ್ ಮತ್ತು ಲೇಹ್‌ಗೆ ಸಂಪರ್ಕ ಕಲ್ಪಿಸುವ ಜತೆಗೆ ಆರ್ಥಿಕವಾಗಿ ಮತ್ತು ಸಾಮಾಜಿಕವಾಗಿ ಈ ಪ್ರದೇಶದಲ್ಲಿ ಬದಲಾವಣೆ ತರಲಿದೆ ಎಂದು ರಸ್ತೆ ಸಾರಿಗೆ ಮತ್ತು ಹೆದ್ದಾರಿ ಸಚಿವಾಲಯ ತಿಳಿಸಿದೆ.

## ICCR ಅಧ್ಯಕ್ಷರಾಗಿ ವಿನಯ್ ಸಹಸ್ರಬುದ್ಧೆ ನೇಮಕ



ಸಂಸದ ವಿನಯ್ ಸಹಸ್ರಬುದ್ಧೆ ಅವರನ್ನು ಭಾರತೀಯ ಕೌನ್ಸಿಲ್ ಆಫ್ ಕಲ್ಚರಲ್ ರಿಲೇಶನ್ಸ್ (ಐಸಿಸಿಆರ್) ಅಧ್ಯಕ್ಷರಾಗಿ ರಾಷ್ಟ್ರಪತಿ ರಾಮ್ ನಾಥ್ ಕೋವಿಂದ್ ರವರು ನೇಮಿಸಿದ್ದಾರೆ.

**ಐಸಿಸಿಆರ್ (ICCR):**

ಐಸಿಸಿಆರ್ ಭಾರತದ ಸರ್ಕಾರದ ಸ್ವಾಯತ್ತ ಸಂಸ್ಥೆಯಾಗಿದ್ದು, ಭಾರತದ ಬಾಹ್ಯ ಸಂಸ್ಕೃತಿಯನ್ನು ಇತರ ದೇಶಗಳೊಂದಿಗೆ ಮತ್ತು ಅದರ ಜನರೊಂದಿಗೆ ವಿನಿಮಯ ಮಾಡಿಕೊಳ್ಳುವ ಮೂಲಕ ಸಂಬಂಧಗಳನ್ನು ಬಲಪಡಿಸುವ ಕಾರ್ಯವನ್ನು ಮಾಡುತ್ತಿದೆ.

www.karunaduexams.com

ಇಂಡಿಯನ್ ಕೌನ್ಸಿಲ್ ಫಾರ್ ಕಲ್ಚರಲ್ ರಿಲೇಶನ್ಸ್ (ಐಸಿಸಿಆರ್) ಅನ್ನು 1950 ರಲ್ಲಿ ಸ್ವತಂತ್ರ ಭಾರತದ ಮೊದಲ ಶಿಕ್ಷಣ ಮಂತ್ರಿ ಮೌಲಾನಾ ಅಬುಲ್ ಕಲಾಮ್ ಆಜಾದ್ ಅವರು ಸ್ಥಾಪಿಸಿದರು.

**ಐಸಿಸಿಆರ್ ಧ್ಯೇಯ:**

ಭಾರತದ ಬಾಹ್ಯ ಸಾಂಸ್ಕೃತಿಕ ಸಂಬಂಧಗಳಿಗೆ ಸಂಬಂಧಿಸಿದ ನೀತಿಗಳು ಮತ್ತು ಕಾರ್ಯಕ್ರಮಗಳ ಸೂತ್ರೀಕರಣ ಮತ್ತು ಅನುಷ್ಠಾನದಲ್ಲಿ ಸಕ್ರಿಯವಾಗಿ ಭಾಗವಹಿಸುವುದು ಇದರ ಗುರಿಯಾಗಿದೆ. ಭಾರತ ಮತ್ತು ಇತರ ದೇಶಗಳ ನಡುವಿನ ಸಾಂಸ್ಕೃತಿಕ ಸಂಬಂಧಗಳು ಮತ್ತು ಪರಸ್ಪರ ಸಹಕಾರ ಬೆಳೆಸುವುದು ಮತ್ತು ಬಲಪಡಿಸುವುದು. ಇತರ ದೇಶಗಳು ಮತ್ತು ಜನರೊಂದಿಗೆ ಸಾಂಸ್ಕೃತಿಕ ವಿನಿಮಯವನ್ನು ಉತ್ತೇಜಿಸುವುದು ಮತ್ತು ರಾಷ್ಟ್ರಗಳೊಂದಿಗೆ ಸಂಬಂಧಗಳನ್ನು ಬೆಳೆಸುವುದು.

**<u>ರಾಜೀಂದರ್ ಖನ್ನ ಉಪ ರಾಷ್ಟ್ರೀಯ ಭದ್ರತಾ ಸಲಹೆಗಾರರಾಗಿ ನೇಮಕ</u>**



ರಿಸರ್ಚ್ ಅಂಡ್ ಅನಾಲಿಸಿಸ್ ವಿಂಗ್ (RAW)ನ ನಿವೃತ್ತ ಮುಖ್ಯಸ್ಥ ರಾಜೀಂದರ್ ಖನ್ನ ರವರನ್ನು ಉಪ ರಾಷ್ಟ್ರೀಯ ಭದ್ರತಾ ಸಲಹೆಗಾರರಾಗಿ ಕೇಂದ್ರ ನೇಮಕಾತಿ ಸಚಿವ ಸಂಪುಟ ನೇಮಕ ಮಾಡಿದೆ. ನಿಶ್ಚಿತ ಅಧಿಕಾರಾವಧಿ ಅವಧಿಗೆ ಇವರನ್ನು ನೇಮಕ ಮಾಡಲಾಗಿದ್ದು, ಮುಂದಿನ ಆದೇಶದ ವರೆಗೆ ಈ ಹುದ್ದೆಯಲ್ಲಿ ಮುಂದುವರೆಯಲಿದ್ದಾರೆ. ಖನ್ನ ಅವರು ರಾಷ್ಟ್ರೀಯ ಭದ್ರತಾ ಸಲಹೆಗಾರ ಅಜಿತ್ ದಾವಲ್ ಅವರಿಗೆ ಅಗತ್ಯ ಸಹಾಯವನ್ನು ನೀಡಲಿದ್ದಾರೆ.

**ರಾಜೀಂದರ್ ಖನ್ನ**:

- ಖನ್ನ ಅವರು 1978ನೇ ಬ್ಯಾಚಿನ ರಿಸರ್ಚ್ ಅಂಡ್ ಅನಾಲಿಸಿಸ್ ವಿಂಗ್ ಕೇಡರ್ ಅಧಿಕಾರಿ.
- ಡಿಸೆಂಬರ್ 2014 ರಿಂದ ಎರಡು ವರ್ಷಗಳ ಕಾಲ ರಿಸರ್ಚ್ ಅಂಡ್ ಅನಾಲಿಸಿಸ್ ವಿಂಗ್ ಮುಖ್ಯಸ್ಥರಾಗಿ ಕಾರ್ಯನಿರ್ವಹಿಸಿದ್ದರು.
- ಖನ್ನ ಅವರು RAWನಲ್ಲಿ ಭಯೋತ್ಪಾದನಾ-ವಿರೋಧಿ ಘಟಕದ ಪಿತಾಮಹ ಎನಿಸಿದ್ದಾರೆ. ಈ ಪತ್ತೇದಾರಿ ಸಂಸ್ಥೆಯಲ್ಲಿ ಅನೇಕ ಭಯೋತ್ಪಾದನಾ ಕಾರ್ಯಾಚರಣೆಗಳನ್ನು ನಡೆಸಿದ್ದಾರೆ. ಮುಖ್ಯವಾಗಿ ಪಾಕಿಸ್ತಾನ ಮತ್ತು ಇಸ್ಲಾಮಿಕ್ ಭಯೋತ್ಪಾದನೆ ವಿರುದ್ಧ ನಡೆಸಿದ್ದಾರೆ.

**ರಾಷ್ಟ್ರೀಯ ಭದ್ರತಾ ಸಲಹೆಗಾರ:**

ರಾಷ್ಟ್ರೀಯ ಭದ್ರತಾ ಸಲಹೆಗಾರರು ರಾಷ್ಟ್ರೀಯ ಭದ್ರತಾ ಮಂಡಳಿಯ ಮುಖ್ಯಕಾರ್ಯನಿರ್ವಾಹಕ ಅಧಿಕಾರಿ. ಇವರು ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ

www.karunaduexams.com

ಭದ್ರತೆಯ ಬಗ್ಗೆ ಪ್ರಧಾನ ಮಂತ್ರಿಯ ಪ್ರಾಥಮಿಕ ಸಲಹೆಗಾರರಾಗಿ ಕಾರ್ಯನಿರ್ವಹಿಸುತ್ತಾರೆ. ರಾ ಮತ್ತು ಇಂಟಲಿಜೆಲ್ಸಿ ಬ್ಯೂರೋಗಳು ತಮ್ಮ ವರದಿಯನ್ನು ರಾಷ್ಟ್ರೀಯ ಭದ್ರತಾ ಸಲಹೆಗಾರರ ಮೂಲಕ ಪ್ರಧಾನಿ ಅವರಿಗೆ ತಲುಪಿಸುತ್ತವೆ. ರಾಷ್ಟ್ರೀಯ ಭದ್ರತಾ ಸಲಹೆಗಾರರಿಗೆ ಉಪ ರಾಷ್ಟ್ರೀಯ ಭದ್ರತಾ ಸಲಹೆಗಾರರು ಕರ್ತವ್ಯ ನಿರ್ವಹಣೆಯಲ್ಲಿ ನೆರವಾಗುತ್ತಾರೆ.

1998ರಲ್ಲಿ ಅಟಲ್ ಬಿಹಾರಿ ವಾಜಪೇಯಿ ಸರ್ಕಾರ ರಾಷ್ಟ್ರೀಯ ಭದ್ರತಾ ಸಲಹೆಗಾರ ಹುದ್ದೆಯನ್ನು ಮೊದಲ ಬಾರಿಗೆ ನೇಮಕ ಮಾಡಿತ್ತು. ಬಿಜೇಶ್ ಮಿಶ್ರಾ ರವರು ಭಾರತದ ಮೊದಲ ರಾಷ್ಟ್ರೀಯ ಭದ್ರತಾ ಸಲಹೆಗಾರರು.

## ಬರಾಕ್ ಕ್ಷಿಪಣಿ, ಪಿಜಿಎಂ ಬಾಂಬ್ ಖರೀದಿಸಲು ರಕ್ಷಣಾ ಸಚಿವಾಲಯ ಒಪ್ಪಿಗೆ



ರಕ್ಷಣಾ ಸಚಿವಾಲಯ ಭಾರತೀಯ ನೌಕಪಡೆಗೆ 131 ಬರಾಕ್ ಕ್ಷಿಪಣಿ ಹಾಗೂ ಭಾರತೀಯ ವಾಯು ಪಡೆಗೆ 240 ನಿಖರ ಮಾರ್ಗದರ್ಶಿ ಶಸ್ತ್ರಾಸ್ತ್ರ (ಪಿಜಿಎಂ)ಗಳನ್ನು ಖರೀದಿಸಲು ಅಂತಿಮ ಅನುಮೋದನೆ ನೀಡಿದೆ. ಒಟ್ಟಾರೆ ರೂ 1714 ಕೋಟಿ ಖರೀದಿ ಒಪ್ಪಂದ ಇದಾಗಿದೆ. ರಕ್ಷಣಾ ಮಂತ್ರಿ ನಿರ್ಮಲಾ ಸೀತಾರಾಮನ್ ಅವರು ಪ್ರಸ್ತಾವನೆಗೆ ಅಂತಿಮ ಅನುಮತಿ ನೀಡಿದರು.

**ನಿಖರ ಮಾರ್ಗದರ್ಶಿ ಶಸ್ತ್ರಾಸ್ತ್ರ (ಪಿಜಿಎಂ):**

- 240 KAB-1500 PGM ಗಳನ್ನು ರಷ್ಯಾದ ರೋಸೊಬೊರೊನೆಕ್ಸ್ಪೋರ್ಟ್ನಿಂದ 1,254 ಕೋಟಿ ವೆಚ್ಚದಲ್ಲಿ ಖರೀದಿಸಲಾಗುವುದು. PGM ಎಂಬುದು KAB PGM ಗಳಿಂಗಿತ ವಿಭಿನ್ನವಾಗಿದ್ದು, ಈಗಾಗಲೇ ಐಎಎಫ್ ಸೇವೆಯಲ್ಲಿದೆ ಮತ್ತು ಸು-30 ಫೈಟರ್ ಜೆಟ್ಗಳಲ್ಲಿ ಬಳಸಿಕೊಳ್ಳಲಾಗುತ್ತಿದೆ.

**ಬರಾಕ್ ಕ್ಷಿಪಣಿ:**

131 ಬರಾಕ್ (Surface-to-air) ಕ್ಷಿಪಣಿಗಳು ಮತ್ತು ಸಂಬಂಧಿತ ಸಲಕರಣೆಗಳನ್ನು ಇಸ್ರೇಲ್ನ ರಾಫೆಲ್ ಅಡ್ವಾನ್ಸ್ಡ್ ಡಿಫೆನ್ಸ್ ಸಿಸ್ಟಮ್ಸ್ ಲಿಮಿಟೆಡ್ನಿಂದ 460 ಕೋಟಿ ರೂಪಾಯಿಗಳಿಗೆ ಖರೀದಿಸಲಾಗುವುದು. ಇವುಗಳನ್ನು ಭಾರತೀಯ ನೌಕಾಪಡೆಯ ಎಲ್ಲಾ ಮುಂಚೂಣಿಯ ಯುದ್ಧನೌಕೆಗಳಲ್ಲಿ ಅಳವಡಿಸಲಾಗುವುದು.

## ಗೋಧಿಯ ಉತ್ಪಾದನೆಯನ್ನು ಹೆಚ್ಚಿಸಲು ಪ್ರಪಂಚದ ಮೊದಲ 'ವೇಗ ತಳಿ' ತಂತ್ರ



ಆಸ್ಟ್ರೇಲಿಯಾದ ವಿಜ್ಞಾನಿಗಳು ವಿಶ್ವದ ಮೊದಲ 'ವೇಗ ತಳಿ (Speed Breeding)' ವಿಧಾನವನ್ನು ಅಭಿವೃದ್ಧಿಪಡಿಸಿದ್ದಾರೆ, ಇದು ಬೆಳೆಯ ಉತ್ಪಾದನೆಯನ್ನು ಮೂರು ಪಟ್ಟು ಹೆಚ್ಚಿಸಲಿದೆ.

ವಿಜ್ಞಾನಿಗಳು ವೇಗ ತಳಿ ತಂತ್ರಜ್ಞಾನವನ್ನು ಬಳಸಿಕೊಂಡು ಹೊಸ 'ಡಿಎಸ್ ಫ್ಯಾರಡೆ' ಎಂಬ ಗೋಧಿ ತಳಯನ್ನು ಅಭಿವೃದ್ಧಿಪಡಿಸಿದ್ದು, ಈ ವರ್ಷದಲ್ಲಿ ಬಿಡುಗಡೆಗೊಳಿಸಲಿದ್ದಾರೆ. ಡಿಎಸ್ ಫ್ಯಾರಡೆಯು ಹೆಚ್ಚಿನ ಪ್ರೊಟೀನ್ ಹಾಗೂ ಕೊಯ್ಲಿಗಿಂತ ಮುಂಚೆ ಮೊಳಕೆ ಬರುವುದನ್ನು ತಡೆಯುವ ಸಾಮರ್ಥ್ಯವನ್ನು ಹೊಂದಿದೆ.

**ತಂತ್ರಜ್ಞಾನದ ಪ್ರಾಮುಖ್ಯತೆ**:

ಸ್ಪೀಡ್ ಬ್ರೀಡಿಂಗ್ ತಂತ್ರಗಳನ್ನು ಬಳಸಿ ವಿಶೇಷವಾಗಿ ಪರಿವರ್ತಿತ ಗಾಜಿನ ಮನೆಗಳಲ್ಲಿ ವಿಜ್ಞಾನಿಗಳು ಆರು ತಲೆಮಾರಿನ ಗೋಧಿ, ಕಡಲೆ ಮತ್ತು ಬಾರ್ಲಿ ಗಿಡಗಳನ್ನು ಮತ್ತು ಒಂದು ವರ್ಷದಲ್ಲಿ ನಾಲ್ಕು ತಲೆಮಾರಿನ ಕ್ಯಾನೋಲ ಸಸ್ಯಗಳನ್ನು ಬೆಳೆಸಬಹುದು. ಸಾಮಾನ್ಯ ಗಾಜಿನ ಮನೆಗಳಲ್ಲಿ ಎರಡು ಅಥವಾ ಮೂರು ತಲೆಮಾರುಗಳ ತಳಿಯನ್ನು ಮಾತ್ರ ಬೆಳೆಸಬಹುದು. ನಿಯಂತ್ರಿತ ಹವಾಗುಣ ಪರಿಸ್ಥಿತಿಗಳಲ್ಲಿ ಬೆಳೆದ ಸಸ್ಯಗಳ ಗುಣಮಟ್ಟ ಮತ್ತು ಇಳುವರಿಯು ನಿಯಮಿತವಾದ ಗಾಜಿನಮನೆಗಳಲ್ಲಿ ಬೆಳೆದ ಗಿಂತಲೂ ಉತ್ತಮವಾಗಿದೆ.

**ಸ್ಪೀಡ್ ಬ್ರೀಡಿಂಗ್ ತಂತ್ರಜ್ಞಾನ:**

ಈ ತಂತ್ರಜ್ಞಾನದಲ್ಲಿ ಸಂಪೂರ್ಣವಾಗಿ ನಿಯಂತ್ರಿತ ಬೆಳವಣಿಗೆ ಪರಿಸರವನ್ನು ಬಳಸಲಾಗುತ್ತದೆ. ತೀವ್ರವಾದ ದ್ಯುತಿಸಂಶ್ಲೇಷಣೆಗೆ ಸಹಾಯ ಮಾಡಬಲ್ಲ ಎಲ್ಇಡಿ ದೀಪಗಳನ್ನು ದಿನಕ್ಕೆ 22 ಗಂಟೆಗಳವರೆಗೆ ಬಳಸಲಾಗುತ್ತದೆ.

**ಎಲ್ಇಡಿ ದೀಪಗಳು ಏಕೆ:**

ಎಲ್ಇಡಿ ದೀಪಗಳು ಸೋಡಿಯಂ ವೇಪರ್ ದೀಪಗಳಿಗೆ ಹೋಲಿಸಿದರೆ ಖರ್ಚನ್ನು ಕಡಿಮೆಗೊಳಿಸುತ್ತವೆ. ಅಲ್ಲದೇ ಸೋಡಿಯಂ ದೀಪಗಳು ಹೆಚ್ಚು ಶಾಖವನ್ನು ಉತ್ಪಾದಿಸುತ್ತವೆ ಮತ್ತು ಕಳಪೆ ಗುಣಮಟ್ಟದ ಬೆಳಕನ್ನು ಹೊರಸೂಸುತ್ತವೆ.

**<u>ಸುರೇಶ್ ಪ್ರಭು ಅಧ್ಯಕ್ಷತೆಯಲ್ಲಿ ಕೌನ್ಸಿಲ್ ಫಾರ್ ಟ್ರೇಡ್ ಡೆವಲಪ್ಮೆಂಟ್ ಅಂಡ್ ಪ್ರೋಮೋಷನ್ ಸಭೆ</u>**



ಕೇಂದ್ರ ವಾಣಿಜ್ಯ ಮತ್ತು ಕೈಗಾರಿಕಾ ಸಚಿವ ಸುರೇಶ್ ಪ್ರಭು ರವರು ಇತ್ತೀಚೆಗೆ "ಕೌನ್ಸಿಲ್ ಫಾರ್ ಟ್ರೇಡ್ ಡೆವಲಪ್ಮೆಂಟ್ ಅಂಡ್ ಪ್ರಮೋಷನ್" ನ 3 ನೇ ಸಭೆಯ ಅಧ್ಯಕ್ಷತೆಯನ್ನು ವಹಿಸಿದ್ದರು.

**ಕೌನ್ಸಿಲ್ ಫಾರ್ ಟ್ರೇಡ್ ಡೆವಲಪ್ಮೆಂಟ್ ಅಂಡ್ ಪ್ರೋಮೋಷನ್:**

ವಿದೇಶಿ ವ್ಯಾಪಾರ ನೀತಿ ಹೇಳಿಕೆ 2015-20 ರ ನಿಬಂಧನೆಗಳ ಅನುಸಾರ ವಾಣಿಜ್ಯ ಮತ್ತು ಕೈಗಾರಿಕಾ ಕೇಂದ್ರ ಸಚಿವ ನೇತೃತ್ವದಲ್ಲಿ ಕೌನ್ಸಿಲ್ ಫಾರ್ ಟ್ರೇಡ್ ಡೆವಲಪ್ಮೆಂಟ್ ಅಂಡ್ ಪ್ರೋಮೋಷನ್ ಅನ್ನು 2015 ಜುಲೈನಲ್ಲಿ ಸ್ಥಾಪಿಸಲಾಗಿದೆ.

**ಉದ್ದೇಶ**:

ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳೊಂದಿಗೆ ನಿರಂತರ ಮಾತುಕತೆಯನ್ನು ಆಯೋಜಿಸುವ ಮೂಲಕ ಅಂತರರಾಷ್ಟ್ರೀಯ ವ್ಯಾಪಾರ ಸುಗಮಗೊಳಿಸುವುದು ಮತ್ತು ದೇಶದ ರಫ್ತುಗಳನ್ನು ಉತ್ತೇಜಿಸುವಲ್ಲಿ ರಾಜ್ಯಗಳು ಸಕ್ರಿಯ ಭಾಗವಹಿಸಲು ಚೌಕಟ್ಟನ್ನು ರೂಪಿಸುವುದು.

**ರಚನೆ**:

ವಾಣಿಜ್ಯ ಮತ್ತು ಕೈಗಾರಿಕೆಗಳ ರಾಜ್ಯ ಸಚಿವರಗಳು, ಸಂಬಂಧಪಟ್ಟ ಕೇಂದ್ರ ಇಲಾಖೆಗಳು / ಸಚಿವಾಲಯದ ಕಾರ್ಯದರ್ಶಿಗಳು ಮತ್ತು ಇತರ ರಫ್ತು ಸಂಬಂಧಿತ ಸಂಸ್ಥೆಗಳು / ವ್ಯಾಪಾರ ಸಂಸ್ಥೆಗಳ ಮುಖ್ಯಸ್ಥರು ಮಂಡಳಿಯ ಸದಸ್ಯರಾಗಿದ್ದಾರೆ.

www.karunaduexams.com

**ಕೇಂದ್ರೀಯ ಜಲ ಆಯೋಗಕ್ಕೆ ಸಿಬಿಐಪಿ ವಿಶೇಷ ಪ್ರಶಸ್ತಿ**



ಕೇಂದ್ರೀಯ ಜಲ ಆಯೋಗಕ್ಕೆ ಸೆಂಟ್ರಲ್ ಬೋರ್ಡ್ ಆಫ್ ಇರಿಗೇಷನ್ ಅಂಡ್ ಪವರ್ (ಸಿಬಿಐಪಿ) ವಿಶೇಷ ಸಾಧನೆ ಪ್ರಶಸ್ತಿ 2018 ಲಭಿಸಿದೆ. ದೊಡ್ಡ ಅಣೆಕಟ್ಟುಗಳ ಬಾಳಿಕೆ ಮತ್ತು ಸುರಕ್ಷತೆಗಾಗಿ ಈ ಪ್ರಶಸ್ತಿ ಲಭಿಸಿದೆ.

ವಿಶ್ವ ಬ್ಯಾಂಕಿನ ನೆರವಿನಿಂದ ಅಣೆಕಟ್ಟಿನ ಪುನರ್ವಸತಿ ಮತ್ತು ಸುಧಾರಣೆ ಯೋಜನೆ (DRIP) ಮೂಲಕ ಭಾರತದ ಅತಿದೊಡ್ಡ ಅಣೆಕಟ್ಟುಗಳ ಬಾಳಿಕೆ ಮತ್ತು ಸುರಕ್ಷತೆಯನ್ನು ಉತ್ತೇಜಿಸಲು ಕೇಂದ್ರೀಯ ಜಲ ಆಯೋಗ (ಸಿಡಬ್ಲ್ಯೂಸಿ) ನೀಡಿದ ಕೊಡುಗೆಗೆ ಈ ಪ್ರಶಸ್ತಿಯನ್ನು ನೀಡಲಾಗಿದೆ.

**DRIP**?

ವಿಶ್ವ ಬ್ಯಾಂಕಿನ ನೆರವಿನೊಂದಿಗೆ ಜಲ ಸಂಪನ್ಮೂಲ ಸಚಿವಾಲಯ ಆರು ಅಣೆಕಟ್ಟು ಪುನರ್ವಸತಿ ಮತ್ತು ಅಭಿವೃದ್ಧಿ ಯೋಜನೆ (ಡ್ರಿಪ್) ಅನ್ನು ಅನುಷ್ಠಾನಗೊಳಿಸಲಾಗುತ್ತಿದೆ. ಇದು ಆರು ವರ್ಷಗಳ

ಯೋಜನೆಯಾಗಿದೆ. ಕೇಂದ್ರೀಯ ಜಲ ಆಯೋಗದ ಕೇಂದ್ರ ಅಣೆಕಟ್ಟು ಸುರಕ್ಷತಾ ಸಂಸ್ಥೆ, ಈ ಯೋಜನೆಯ ಅನುಷ್ಠಾನ ಮತ್ತು ಮೇಲ್ವಿಚಾರಣೆ ಮಾಡುತ್ತಿದೆ.

ಕೇರಳ, ಮಧ್ಯಪ್ರದೇಶ, ಒಡಿಶಾ, ತಮಿಳುನಾಡು ಮತ್ತು ಕರ್ನಾಟಕ ರಾಜ್ಯಗಳಲ್ಲಿ 223 ಅಣೆಕಟ್ಟುಗಳ ಪುನರ್ವಸತಿ ಮತ್ತು ಸುಧಾರಣೆಗೆ ಯೋಜನೆಯನ್ನು ಜಾರಿಗೊಳಿಸಲಾಯಿತು. ಉತ್ತರಾಖಂಡ್ ಮತ್ತು ಜಾರ್ಖಂಡ್ ಯೋಜನೆಗೆ ಸೇರ್ಪಡೆಗೊಳ್ಳುವ ಮೂಲಕ ಅಣೆಕಟ್ಟುಗಳ ಸಂಖ್ಯೆ 250ಕ್ಕೆ ಏರಿಕೆಯಾಯಿತು. ಅಣೆಕಟ್ಟು ಸುರಕ್ಷತೆಗೆ ಹೊಸ ತಂತ್ರಜ್ಞಾನಗಳನ್ನು ಉತ್ತೇಜಿಸುವುದು, ಕೇಂದ್ರ ಮತ್ತು ರಾಜ್ಯ ಮಟ್ಟಗಳಲ್ಲಿ ಅಣೆಕಟ್ಟಿನ ಸುರಕ್ಷತೆ ಮೌಲ್ಯಮಾಪನ ಮತ್ತು ಅನುಷ್ಠಾನಕ್ಕೆ ಸಾಂಸ್ಥಿಕ ಸಂಸ್ಥೆಗಳು, ದೇಶದ ಪ್ರಮುಖ ಶೈಕ್ಷಣಿಕ ಮತ್ತು ಸಂಶೋಧನಾ ಸಂಸ್ಥೆಗಳ ಸಾಮರ್ಥ್ಯಗಳನ್ನು ಸುಧಾರಿಸುವುದು ಯೋಜನೆಯ ಗುರಿ.

**ಕೇಂದ್ರೀಯ ಜಲ ಆಯೋಗ:**

ಕೇಂದ್ರೀಯ ಜಲ ಆಯೋಗವು ಜಲ ಸಂಪನ್ಮೂಲಗಳ ಕ್ಷೇತ್ರದಲ್ಲಿ ಭಾರತದ ಪ್ರಮುಖ ತಾಂತ್ರಿಕ ಸಂಸ್ಥೆಯಾಗಿದ್ದು, ಪ್ರಸ್ತುತ ಇದು ಜಲ ಸಂಪನ್ಮೂಲ, ನದಿ ಅಭಿವೃದ್ಧಿ ಮತ್ತು ಗಂಗಾ ಪುನರ್ವಸತಿ, ಸಚಿವಾಲಯದಡಿ ಕಾರ್ಯನಿರ್ವಹಿಸುತ್ತಿದೆ.

## <u>ಅಸಿಯಾನ್-ಭಾರತ (ASEAN-INDIA) ಪ್ರವಾಸಿ ಭಾರತೀಯ ದಿವಸ</u>




ವಾರ್ಷಿಕ ಅಸಿಯಾನ್ ಭಾರತ ಪ್ರವಾಸಿ ಭಾರತೀಯ ದಿವಾಸ್ ಅನ್ನು ಸಿಂಗಪುರದಲ್ಲಿ ಆಚರಿಸಲಾಗುತ್ತಿದೆ. ಸಿಂಗಪುರ ಮತ್ತು ಭಾರತದ ಪ್ರಮುಖ ನಾಯಕರು ಮತ್ತು ಉದ್ಯಮಿಗಳು ಸಮ್ಮೇಳನದಲ್ಲಿ ಪಾಲ್ಗೊಳ್ಳಲಿದ್ದಾರೆ. ಸಮ್ಮೇಳನದಲ್ಲಿ ಆಗ್ನೇಯ ಏಷ್ಯಾದ ಅಭಿವೃದ್ಧಿಗೆ ಭಾರತೀಯ ವಲಸೆ ಸಮುದಾಯದ ಕೊಡುಗೆ ಕುರಿತು ಚರ್ಚಿಸಲಾಗುವುದು.

**ಕಾರ್ಯಕ್ರಮದ ಉದ್ದೇಶ**: "ಭಾರತ ಮತ್ತು ಆಗ್ನೇಯ ಏಷ್ಯಾದ ನಡುವಿನ ಪ್ರಾಚೀನ ಮಾನವ, ಕಡಲ, ಸಾಂಸ್ಕೃತಿಕ, ವಾಣಿಜ್ಯ ಮತ್ತು ಧಾರ್ಮಿಕ ಸಂಬಂಧಗಳನ್ನು" ಪ್ರದರ್ಶಿಸುವುದು ಮತ್ತು ಎರಡು ಪ್ರದೇಶಗಳ ನಡುವೆ ಆರ್ಥಿಕ, ಸಾಂಸ್ಕೃತಿಕ ಮತ್ತು ರಾಜತಾಂತ್ರಿಕ ಸಹಕಾರವನ್ನು ಉತ್ತೇಜಿಸುವುದು.

**ಥೀಮ್**: "ಏನ್ಶಿಯಂಟ್ ರೂಟ್, ನ್ಯೂ ಜರ್ನಿ: ಡಯಾಸ್ಪೋರಾ ಇನ್ ದಿ ಡೈನಾಮಿಕ್ ಅಸಿನ್-ಇಂಡಿಯಾ ಪಾರ್ಟ್ನರ್ಶಿಪ್.

**ಕಾರ್ಯಕ್ರಮದ ಮಹತ್ವ**:

ಭಾರತ-ಅಸಿಯಾನ್ ಡೈಲಾಗ್ ಪಾರ್ಟನರ್ಷಿಪ್ನ 25ನೇ ವಾರ್ಷಿಕೋತ್ಸವದ ಸಮಯದಲ್ಲೇ ಈ ಕಾರ್ಯಕ್ರಮವನ್ನು ಆಯೋಜಿಸಲಾಗುತ್ತಿದೆ. ನವದೆಹಲಿಯಲ್ಲಿ ಭಾರತ-ಅಸಿಯಾನ್ ಡೈಲಾಗ್ ಪಾರ್ಟನರ್ಷಿಪ್ ಶೃಂಗಸಭೆ ಜನವರಿ 25 ರಂದು ನಡೆಯಲಿದೆ. ಜನವರಿ 26ರಂದು ನವದೆಹಲಿಯಲ್ಲಿ ನಡೆಯಲಿರುವ ಗಣರಾಜ್ಯೋತ್ಸವಕ್ಕೆ ಅಸಿಯಾನ್ ನಾಯಕರನ್ನು ಮುಖ್ಯ ಅತಿಥಿಗಳಾಗಿ ಭಾರತದಿಂದ ಆಹ್ವಾನಿಸಲಾಗಿದೆ.

www.karunaduexams.com

**ಪ್ರವಾಸಿ ಭಾರತೀಯ ದಿವಸ:**

ಭಾರತ ಅಭಿವೃದ್ಧಿಗೆ ವಿದೇಶಿ ಭಾರತೀಯ ಸಮುದಾಯದ ಕೊಡುಗೆಗಳನ್ನು ಗುರುತಿಸಲು ಪ್ರವಾಸಿ ಭಾರತೀಯ ದಿವಸವನ್ನು (ಪಿಬಿಡಿ) ಪ್ರತಿವರ್ಷ ಜನವರಿ 9 ರಂದು ಆಚರಿಸಲಾಗುತ್ತದೆ. 1915 ಜನವರಿ 9 ರಂದು ಮಹಾತ್ಮಾ ಗಾಂಧಿ ರವರು ದಕ್ಷಿಣ ಆಫ್ರಿಕಾದಿಂದ ಭಾರತಕ್ಕೆ ಹಿಂದಿರುಗಿದರು. ಆದ್ದರಿಂದ ಈ ದಿನವನ್ನು ಪ್ರವಾಸಿ ಭಾರತೀಯ ದಿವಸವೆಂದು ಆಚರಿಸಲು ನಿರ್ಧರಿಸಲಾಯಿತು.

**ಮೆಡಾರಂ/ಸರಳಮ್ಮ ಜಾತ್ರೆ**



ಮೆಡಾರಂನ ಸಮ್ಮಕ್ಕ, ಸರಕ್ಕ/ಸರಳಮ್ಮ ಜಾತ್ರೆಯನ್ನು ರಾಷ್ಟ್ರೀಯ ಉತ್ಸವವೆಂದು ಕೇಂದ್ರ ಸರ್ಕಾರ ಈ ವರ್ಷ ಘೋಷಿಸುವ ಸಂಭವವಿದೆ. ಈ ಜಾತ್ರೆಯನ್ನು ರಾಷ್ಟ್ರೀಯ ಉತ್ಸವವೆಂದು ಘೋಷಿಸಿದರೆ ವಿಶ್ವಸಂಸ್ಥೆಯ ಶೈಕ್ಷಣಿಕ, ವೈಜ್ಞಾನಿಕ ಮತ್ತು ಸಾಂಸ್ಕೃತಿಕ ಸಂಸ್ಥೆ (UNESCO) ಯ 'ಮಾನವೀಯತೆಯ ಅಮೂರ್ತ ಸಾಂಸ್ಕೃತಿಕ ಪರಂಪರೆ ('intangible cultural heritage of humanity)" ಗೆ ಇದನ್ನು ಪರಿಗಣಿಸಬಹುದಾಗಿದೆ.

**ಜಾತ್ರೆಯ ಬಗ್ಗೆ:**

ಮೆಡಾರಂ ಅಥವಾ ಸರಳಮ್ಮ ಜಾತ್ರೆಯು ತೆಲಂಗಾಣ ಮತ್ತು ಸುತ್ತಮುತ್ತಲಿನ ರಾಜ್ಯಗಳಲ್ಲಿ ಅರಣ್ಯದಲ್ಲಿ ನೆಲಸುವ ಕೋಯಾ ಬುಡಕಟ್ಟು ಜನಾಂಗ ನಡೆಸುವ ಜಾತ್ರೆ. ಇದು ಏಷ್ಯಾದಲ್ಲೇ ಅತಿ ದೊಡ್ಡ ಬುಡಕಟ್ಟು ಉತ್ಸವವಾಗಿದ್ದು, ಸರಾಸರಿ ಒಂದು ಕೋಟಿ ಜನರು ಭಾಗವಹಿಸುತ್ತಾರೆ.

- ಎರಡು ವರ್ಷಕ್ಕೊಮ್ಮೆ ನಡುವೆಯು ಈ ಜಾತ್ರೆಯಲ್ಲಿ ಅವಳಿ ದೇವತೆಗಳಾದ ಸಮ್ಮಕ್ಕ ಮತ್ತು ಅವಳ ಮಗಳಾದ ಸರಕ್ಕ ರನ್ನು ಪೂಜಿಸಲಾಗುತ್ತದೆ. ತೆಲಂಗಾಣದ ಹಲವಾರು ಸಮುದಾಯಗಳು ಈ ಜಾತ್ರೆಯನ್ನು ಬೆಂಬಲಿಸುತ್ತಿವೆ. ಕಾಕತೀಯ ರಾಜರು ಬುಡಕಟ್ಟು ಜನರ ಅರಣ್ಯ ಭೂಮಿಯನ್ನು ಆಕ್ರಮಿಸಿಕೊಳ್ಳುವ ವಿರುದ್ದ ಸಮ್ಮಕ್ಕ ಮತ್ತು ಸರಕ್ಕ ರವರು ಹೋರಾಡಿದರು ಎಂಬುದು ನಂಬಿಕೆ. ಪುರಾಣದ ಪ್ರಕಾರ ಸಮಕ್ಕಳ ಶಾಪದಿಂದ ಕಾಕತೀಯ ಸಂತತಿ ನಿಧಾನವಾಗಿ ಕುಸಿದು ಪತನಕ್ಕೆ ಕಾರಣವಾಯಿತು ಎನ್ನಲಾಗಿದೆ.

**ಮೆಡಾರಂ ಎಲ್ಲಿದೆ?**

ದಂಡಕಾರಣ್ಯದ ಭಾಗವಾದ ಎತುರ್ನಗರಮ್ ವನ್ಯಜೀವಿ ಅಭಯಾರಣ್ಯದಲ್ಲಿ ಮೇಡರಮ್ ಇದೆ. ದಂಡಕಾರಣ್ಯ ದಖ್ಖನ್ ನಲ್ಲಿರುವ ಅತಿ ದೊಡ್ಡ ಅರಣ್ಯ ಪ್ರದೇಶವಾಗಿದೆ.

## ಭೀಮಾ-ಕೋರೆಗಾಂವ್ ವಿಜಯೋತ್ಸವ ಗಲಭೆ: ಮಹಾರಾಷ್ಟ್ರ ಬಂದ್



ಪ್ರತಿ ವರ್ಷ ಜನವರಿ 1ರಂದು ಪುಣೆಯ ಸಮೀಪದಲ್ಲಿರುವ 'ಭೀಮಾ-ಕೋರೆಗಾಂವ್"ನಲ್ಲಿ ಕೋರೆಗಾಂವ್ ವಿಜಯೋತ್ಸವ ಆಚರಿಸಲು ತೆರಳುತ್ತಿದ್ದ ದಲಿತ ಗುಂಪಿನ ಮೇಲೆ ಹಿಂದೂತ್ವ ಸಂಘಟನೆಗಳು ದಾಳಿ ಮಾಡಿದ್ದು, ಮಹಾರಾಷ್ಟ್ರದಾದ್ಯಂತ ಭಾರಿ ಸಂಚಲನ ಮಾಡಿದೆ. ಅಲ್ಲದೆ ದಾಳಿಯನ್ನು ಖಂಡಿಸಿ ಮಹಾರಾಷ್ಟ್ರ ಬಂದ್ ಗೆ ಕರೆ ನೀಡಲಾಗಿತ್ತು.

**ಏನಿದು ಭೀಮಾ-ಕೋರೆಗಾಂವ್ ವಿಜಯೋತ್ಸವ:**

1818 ಜನವರಿ 1ರಂದು ನಡೆದ ಸಂಘರ್ಷದಲ್ಲಿ ಹೋರಾಡಿ ಮಡಿದ 22 ಮಹರ್ ಸೈನಿಕರ ನೆನಪಿಗಾಗಿ ಬ್ರಿಟಿಷರು ಕೋರೆಗಾಂವ್‌ನಲ್ಲಿ 65 ಅಡಿ ಎತ್ತರದ ವಿಜಯಸ್ತಂಭ ನಿರ್ಮಿಸಿದ್ದಾರೆ. 1740ರಲ್ಲಿ ಒಂದನೇ ಬಾಜಿ ರಾವ್ ನಿಧನದ ಬಳಿಕ ಬ್ರಾಹ್ಮಣ ಸಮುದಾಯಕ್ಕೆ ಸೇರಿದ ಪೇಶ್ವೆಗಳು ಹಾಗೂ ದಲಿತರಾದ ಮಹರ್ ಜನರ ನಡುವಿನ ಸಂಬಂಧ ಹದಗೆಟ್ಟಿತು. ಎರಡನೇ ಬಾಜಿ ರಾವ್ ಆಡಳಿತದಲ್ಲಿ ಮಹರ್ ಸಮುದಾಯವನ್ನು ಕೀಳಾಗಿ ನಡೆಸಿಕೊಳ್ಳಲಾಗುತ್ತದೆ. ಪೇಶ್ವೆಗಳ ಸೇನೆಗೆ ತಮ್ಮನ್ನೂ ಸೇರಿಸಿಕೊಳ್ಳುವಂತೆ ಮಹರ್ ಜನರು ಮಾಡುವ ಬಿನ್ನಹವನ್ನು ತಿರಸ್ಕರಿಸುವ ಎರಡನೇ ಬಾಜಿ ರಾವ್, ಕೀಳು ಜಾತಿಯವರಾದ ನಿಮ್ಮನ್ನು ಸೇನೆಗೆ ಸೇರಿಸಿಕೊಳ್ಳಲು ಸಾಧ್ಯವಿಲ್ಲ ಎನ್ನುತ್ತಾರೆ. ಆತ್ಮಗೌರವದ ಪ್ರಶ್ನೆಯಿಂದ ಬ್ರಿಟಿಷ್ ಸೇನೆಯೊಂದಿಗೆ ಸೇರುವ ಮಹರ್ ಜನರು 1818ರಲ್ಲಿ ಪೇಶ್ವೆ ಸೇನೆಯ ವಿರುದ್ಧ ಕಾದಾಡುತ್ತಾರೆ. ಬ್ರಿಟಿಷ್ ಕ್ಯಾಪ್ಟನ್ ಎಫ್.ಎಫ್. ಸ್ಟಾಂಟನ್ ನೇತೃತ್ವದಲ್ಲಿ ಬಾಂಬೆ ರೆಜಿಮೆಂಟ್‌ನ 500 ಮಹರ್ ಸೈನಿಕರು, ಪೂನಾದ 250 ಅಶ್ವದಳ ಹಾಗೂ ಮದ್ರಾಸ್‌ನ 24 ಗನ್‌ಮೆನ್‌ಗಳು 1818ರ ಜನವರಿ 1ರಂದು 28 ಸಾವಿರ ಯೋಧ ಬಲದ ಬೃಹತ್ ಪೇಶ್ವೆ ಪಡೆಯ ವಿರುದ್ಧ ಹೋರಾಟ ನಡೆಸಿದರು. 20 ಸಾವಿರ ಅಶ್ವದಳ ಮತ್ತು 8,000 ಕಾಲಾಳುಗಳಿದ್ದ ಮಹಾರಾಷ್ಟ್ರ ಆಡಳಿತದ ಸೇನೆಯ 2000 ಯೋಧರು ಪ್ರಾರಂಭದಲ್ಲಿ ಕಣಕ್ಕಿಳಿದರು. ಪೇಶ್ವೆ ಯೋಧರ ಸಂಖ್ಯೆ ಹೆಚ್ಚಿಸಿ ಸೇನೆ ಬಲಪಡಿಸಿದರೂ 500 ಮಹರ್ ಸೈನಿಕರು ದಿಟ್ಟ ಹೋರಾಟದಿಂದ ಅವರನ್ನು ಧೂಳೀಪಟ ಮಾಡಿದರು. 600ಕ್ಕೂ ಹೆಚ್ಚು ಪೇಶ್ವೆ ಯೋಧರು ಬಲಿಯಾಗುತ್ತಿದ್ದಂತೆ ಆ ಸೇನೆ ರಣರಂಗದಿಂದ ಪಲಾಯನ ಮಾಡಿತು. ಈ ಯುದ್ಧದಲ್ಲಿ ನೂರಾರು ಬ್ರಿಟಿಷ್, ಮರಾಠ, ರಜಪೂತ ಸೇರಿ ಹಲವು ಸಮುದಾಯದ ಯೋಧರು ಮೃತಪಟ್ಟರು. ಇಲ್ಲಿ 22 ಮಹರ್ ಯೋಧರ ಹುತಾತ್ಮರಾದರು.

- 1927ರ ಜನವರಿ 1ರಂದು ಕೋರೆಗಾಂವ್ ಭೇಟಿ ನೀಡಿದ್ದ ಅಂಬೇಡ್ಕರ್, ಮಹರ್ ಯೋಧರ ಹೋರಾಟವನ್ನು ಜನರಿಗೆ ತಿಳಿಯುವಂತೆ ಮಾಡಿದ್ದರು. ಅಂಬೇಡ್ಕರ್ ತಾವು ಬದುಕಿರುವವರೆಗೂ ಪ್ರತಿ ವರ್ಷ ಜನವರಿಯಲ್ಲಿ ಕೋರೆಗಾಂವ್ ಸ್ಮಾರಕಕ್ಕೆ ಭೇಟಿ ನೀಡುತ್ತಿದ್ದರು.
- ಅಸ್ಪೃಶ್ಯತೆಯ ವಿರುದ್ಧ ಬಂಡೆದ್ದ ಮಹರ್ ದಲಿತ ಯೋಧರು ಮಹಾರಾಷ್ಟ್ರದ ಪೇಶ್ವೆಗಳ ವಿರುದ್ಧ ಜಯ ಸಾಧಿಸಿದ ದಿನವು, ಶೋಷಿತರ ಆತ್ಮಗೌರವ ತಲೆಯೆತ್ತಿದ ದಿನವೆಂದೇ ಪ್ರಸಿದ್ಧ. ಭಾರತದ ಇತಿಹಾಸದಲ್ಲಿ ಈ ಅಧ್ಯಾಯ ನೆನಪಿನಲ್ಲಿ ಉಳಿಸಲು ಹಾಗೂ ಆತ್ಮಗೌರವಕ್ಕಾಗಿ

www.karunaduexams.com

ಹೋರಾಡಿದ ದಲಿತರ ಗೌರವಾರ್ಥ 2005ರಲ್ಲಿ ಭೀಮಾ–ಕೋರೆಗಾಂವ್ ರಣಸ್ತಂಭ ಸೇವಾ ಸಂಘ(ಬಿಕೆಆರ್‌ಎಸ್‌ಎಸ್) ಸ್ಥಾಪಿಸಲಾಗಿದೆ.

ಕೃಪೆ: ಪ್ರಜಾವಾಣಿ

## <u>ಗಂಗಾ ನದಿಯನ್ನು ಸ್ವಚ್ಛಗೊಳಿಸಲು ಮಾಜಿ ಸೈನಿಕರ ಪ್ರಾದೇಶಿಕ ಸೈನ್ಯದ ಬೆಟಾಲಿಯನ್</u>



ಗಂಗಾನದಿಯನ್ನು 2020ರ ಹೊತ್ತಿಗೆ ಸ್ವಚ್ಛಗೊಳಿಸುವ ಗುರಿಯನ್ನು ಹೊಂದಿರುವ ಕೇಂದ್ರ ಸರ್ಕಾರ, ಸ್ವಚ್ಛ ಗಂಗಾ ಮಿಷನ್ ಭಾಗವಾಗಿ ಮಾಜಿ ಸೈನಿಕರನ್ನು ಒಳಗೊಂಡಿರುವ ಪ್ರಾದೇಶಿಕ ಸೈನ್ಯ ಬೆಟಾಲಿಯನ್ ಅನ್ನು ಮಂಜೂರು ಮಾಡಿದೆ. ಉತ್ತರ ಪ್ರದೇಶದ ಅಲಹಾಬಾದ್ನಲ್ಲಿ ನ್ಯಾಷನಲ್ ಮಿಷನ್ ಫಾರ್ ಕ್ಲೀನ್ ಗಂಗಾ (ಎನ್‌ಎಂಸಿಜಿ) ಕಾಂಪೋಸಿಟ್ ಇಕಾಲಾಜಿಕಲ್ ಟಾಸ್ಕ್ ಫೋರ್ಸ್ (ಸಿಇಟಿಎಫ್) ಆಗಿ ಈ ಬೆಟಾಲಿಯನ್ ಅನ್ನು ಸ್ಥಾಪಿಸಲಾಗುವುದು.

**ಬೆಟಾಲಿಯನ್ ಬಗ್ಗೆ:**

ಸಿಇಟಿಎಫ್ ಬೆಟಾಲಿಯನ್ ಕರ್ನಲ್-ಶ್ರೇಣಿಯ ಅಧಿಕಾರಿ ನೇತೃತ್ವದಲ್ಲಿ ಎಂಟು ಅಧಿಕಾರಿಗಳು, 20 ಜ್ಯೂನಿಯರ್ ಕಮಾಂಡರ್ ಗಳು ಮತ್ತು ಸುಮಾರು 500 ಇತರ ಶ್ರೇಣಿಯ ಅಧಿಕಾರಗಳನ್ನು ಹೊಂದಿರಲಿದೆ.

**ಕರ್ತವ್ಯಗಳು**:

ನದಿಗೆ ಸಂಬಂಧಿಸಿದ ಪರಿಸರ ಮತ್ತು ಪರಿಸರ ಯೋಜನೆಗಳನ್ನು ಮೇಲ್ವಿಚಾರಣೆ ಮಾಡುವ ಜವಾಬ್ದಾರಿಯು ಬೆಟಾಲಿಯನ್ ಹೊಂದಿರಲಿದೆ. ಅಲ್ಲದೆ ಶಿಬಿರಗಳ ಮೂಲಕ ಸಾರ್ವಜನಿಕ ಅರಿವು ಮೂಡಿಸುವ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಿದೆ.

## <u>ಅಖಿಲ ಭಾರತ ಸಚೇತಕರ ಸಮಾವೇಶ (Whip Conference)</u>



18ನೇ ಅಖಿಲ ಭಾರತ ಸಚೇತಕರ ಸಮಾವೇಶ ಇತ್ತೀಚೆಗೆ ರಾಜಸ್ಥಾನದ ಉದಯಪುರದಲ್ಲಿ ಉದ್ಘಾಟಿಸಲಾಯಿತು. ಸಮ್ಮೇಳನದಲ್ಲಿ 19 ರಾಜ್ಯಗಳು ಮತ್ತು ಕೇಂದ್ರಕ್ಕೆ ಸೇರಿದ ಸುಮಾರು 90 ಪ್ರತಿನಿಧಿಗಳನ್ನು ಭಾಗವಹಿಸಿದ್ದರು.

**ಸಚೇತಕರ ಸಮಾವೇಶ:**

ಈ ಸಮಾವೇಶದ ಉದ್ದೇಶವು ಸಂಸತ್ತಿನ ಪ್ರಜಾಪ್ರಭುತ್ವ, ಅದರ ಸಂಸ್ಥೆಗಳನ್ನು ಬಲಪಡಿಸುವುದು ಮತ್ತು ಅಂತಿಮವಾಗಿ ಸಾರ್ವಜನಿಕರಿಗೆ ದೊಡ್ಡಮಟ್ಟದಲ್ಲಿ ಸೇವೆಯನ್ನು ನೀಡುವುದು. ಸಮಾವೇಶವು

www.karunaduexams.com

ಹಲವಾರು ರಾಜಕೀಯ ಪಕ್ಷಗಳ ಸಚೇತಕರಿಗೆ ಅವರ ಅಭಿಪ್ರಾಯಗಳು ಮತ್ತು ಅನುಭವಗಳನ್ನು ವಿನಿಮಯ ಮಾಡಿಕೊಳ್ಳಲು ವೇದಿಕೆಯನ್ನು ಒದಗಿಸುತ್ತದೆ.

**ಸಚೇತಕ**?

ಸಚೇತಕ ಅಥವಾ ವಿಪ್ ರಾಜಕೀಯ ಪಕ್ಷದ ಪ್ರಮುಖ ಸದಸ್ಯ. ಸಂಸತ್ತಿನ ಎರಡು ಮನೆಗಳಲ್ಲಿ ತನ್ನ ಪಕ್ಷದ ಸದಸ್ಯರ ನಿರ್ವಹಣೆ ಮತ್ತು ಶಿಸ್ತನ್ನು ಕಾಪಾಡುವುದು ಸಚೇತಕರ ಪ್ರಮುಖ ಜವಾಬ್ದಾರಿ. ಪಕ್ಷದ ಸದಸ್ಯರು ಸಂಸತ್ತಿನಲ್ಲಿ ಮತ್ತು ಶಾಸಕಾಂಗದಲ್ಲಿ ಪ್ರಮುಖ ವಿಷಯಗಳ ಬಗ್ಗೆ ಪಕ್ಷದ ಅಧಿಕೃತ ನೀತಿಗೆ ಅನುಗುಣವಾಗಿ ಮತ ಚಲಾಯಿಸುವುದನ್ನು ಖಚಿತಪಡಿಸಿಕೊಳ್ಳುವುದು ಸಚೇತಕರ ಕರ್ತವ್ಯ.

- 1952ರಲ್ಲಿ ಮೊದಲ ಅಖಿಲ ಭಾರತ ಸಚೇತಕರ ಸಮಾವೇಶವನ್ನು ಇಂದೋರ್ ನಲ್ಲಿ ಆಯೋಜಿಸಲಾಗಿತ್ತು.
- ಅಖಿಲ ಭಾರತ ಸಚೇತಕರ ಸಮ್ಮೇಳನವನ್ನು ಸಂಘಟಿಸುವುದು ಸಂಸತ್ತಿನ ವ್ಯವಹಾರಗಳ ಸಚಿವಾಲಯದ ಜವಾಬ್ದಾರಿ. ಸಂವಿಧಾನದ ಪರಿಚ್ಛೇದ 77 (3) ರ ಅಡಿಯಲ್ಲಿ ಭಾರತ ಸರ್ಕಾರ (ವ್ಯವಹಾರ ಹಂಚಿಕೆ) ನಿಯಮಗಳು, 1961ರ ಅಡಿಯಲ್ಲಿ ಸಂಸತ್ತಿನ ವ್ಯವಹಾರಗಳ ಸಚಿವಾಲಯಕ್ಕೆ ವಹಿಸಲಾಗಿದೆ.

## “ಹೈ ರಿಸ್ಕ್ ಪ್ರೆಗ್ನೆನ್ಸಿ ಪೋರ್ಟಲ್” ಆರಂಭಿಸಿದ ದೇಶದ ಮೊದಲ ರಾಜ್ಯ ಹರಿಯಾಣ



ಹರಿಯಾಣ ಸರ್ಕಾರ “ಹೈ ರಿಸ್ಕ್ ಪ್ರೆಗ್ನೆನ್ಸಿ (ಎಚ್‌ಆರ್‌ಪಿ) ಪೋರ್ಟಲ್ (High Risk Pregnancy Portal)” ಅನ್ನು ಪ್ರಾರಂಭಿಸಿದ್ದು, ಇಂತಹ ಪೋರ್ಟಲ್ ಜಾರಿಗೆ ತಂದ ದೇಶದ ಮೊದಲ ರಾಜ್ಯವೆನಿಸಿದೆ. ಕೇಂದ್ರ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವಾಲಯ ಮತ್ತು ನೀತಿ ಅಯೋಗ ಇದೊಂದು ಉತ್ತಮ ಕ್ರಮವೆಂದು ಬಣ್ಣಿಸಿದೆ.

**ಪೋರ್ಟಲ್ ಬಗ್ಗೆ:**

ಈ ವಿನೂತನ ವೆಬ್ ಅಪ್ಲಿಕೇಶನ್ ಹೆರಿಗೆಯಾದ 42 ದಿನಗಳ ವರೆಗೆ ಹೆಚ್ಚು ತೊಂದರೆಯಲ್ಲಿರುವ ಗರ್ಭಿಣಿ ಮಹಿಳೆಯರನ್ನು ಪತ್ತೆಹಚ್ಚಲು ವಿನ್ಯಾಸಗೊಳಿಸಲಾಗಿದೆ, ಇದರಿಂದ ಗರ್ಭಿಣಿಯರು ಉತ್ತಮ ಆರೋಗ್ಯ ಹಾರೈಕೆಯನ್ನು ಪಡೆಯಲು ಅನುಕೂಲವಾಗಲಿದೆ. ಈ ಪೋರ್ಟಲ್ ನಿಂದ ಹೆಚ್ಚು-ಅಪಾಯಕಾರಿ ಗರ್ಭಿಣಿ ಪ್ರಕರಣಗಳನ್ನು ತಳಮಟ್ಟದಲ್ಲಿ ಮುಂಚಿತವಾಗಿ ಗುರುತಿಸುವುದಲ್ಲದೇ, ಆಸ್ಪತ್ರೆಗಳಿಗೆ ಸಕಾಲದಲ್ಲಿ ದಾಖಲಿಸಲು ಸುಲಭವಾಗಲಿದೆ.

**ಹಿನ್ನಲೆ**:

ಅಪಾಯಕಾರಿ ಗರ್ಭಧಾರಣೆಯ ಪ್ರಕರಣಗಳನ್ನು ಗುರುತಿಸಲು “ಹೈ ರಿಸ್ಕ್ ಪ್ರೆಗ್ನೆನ್ಸಿ” ನಿಯಮವನ್ನು ನವೆಂಬರ್, 2017 ರಿಂದ ರಾಜ್ಯದಾದ್ಯಂತ ಅನುಷ್ಠಾನಗೊಳಿಸಲಾಗುತ್ತಿದೆ. ಈ ಉಪಕ್ರಮವು ತಾಯಿಯಂದಿರ ಮರಣ ಪ್ರಮಾಣ (MMR), ಶಿಶು ಮರಣ ಪ್ರಮಾಣ (IMR) ಮತ್ತು ಗರ್ಭಪಾತದಂತಹ ಪ್ರಕರಣಗಳನ್ನು ತಡೆಯಲು ರೂಪಿಸಲಾಗಿದೆ.



www.karunaduexams.com

## ಗಲ್ಲು ಶಿಕ್ಷೆಗಿಂತ ಪರ್ಯಾಯ ಮಾರ್ಗ ಸದ್ಯಕ್ಕಿಲ್ಲ: ಸುಪ್ರೀಂಗೆ ಕೇಂದ್ರ ಸರ್ಕಾರ



ಮರಣದಂಡನೆ ಶಿಕ್ಷೆ ವಿಧಿಸಿದಾಗ ಗಲ್ಲುಶಿಕ್ಷೆ ಬದಲಾಗಿ ನೋವುರಹಿತ ಪರ್ಯಾಯ ಮಾರ್ಗಗಳನ್ನು ಅಳವಡಿಸಿಕೊಳ್ಳಲು ಸುಪ್ರೀಂಕೋರ್ಟ್ ಕೇಂದ್ರ ಸರ್ಕಾರಕ್ಕೆ ಸೂಚಿಸಿತ್ತು. ಆದರೆ ಖೈದಿಗಳಿಗೆ ಗಲ್ಲುಶಿಕ್ಷೆ ಹೊರತಾಗಿ ಪ್ರಸ್ತುತ ಬೇರೆ ಯಾವುದೇ ಪರ್ಯಾಯ ವಿಧಾನವಿಲ್ಲವೆಂದು ಕೇಂದ್ರ ಸರ್ಕಾರ ಸುಪ್ರೀಂಕೋರ್ಟಿಗೆ ತಿಳಿಸಿದೆ.

**ಪರಾಮರ್ಶೆ ಅಗತ್ಯವೇನು?**

ಅಪರಾಧಿಯು ಶಾಂತಿಯಿಂದ ಮತ್ತು ನೋವು ರಹಿತವಾಗಿ ಸಾಯಬೇಕು ಹಾಗೂ ಸಾವಿನ ಸಂದರ್ಭದಲ್ಲೂ ಮಾನವರ ಘನತೆಯನ್ನು ಗೌರವಿಸಬೇಕು ಎಂದು ಸುಪ್ರೀಂಕೋರ್ಟ್ ಭಾವಿಸಿತ್ತು. ಅಲ್ಲದೆ, ಗಲ್ಲುಶಿಕ್ಷೆ "ಅನಾಗರಿಕ, ಅಮಾನವೀಯ ಮತ್ತು ಕ್ರೂರ"ವಾದ ಶಿಕ್ಷೆ ವಿಧಾನ ಮತ್ತು ಇದು "ಯುನೈಟೆಡ್ ನೇಷನ್ಸ್ ಎಕನಾಮಿಕ್ ಅಂಡ್ ಸೋಶಿಯಲ್ ಕೌನ್ಸಿಲ್ (ಇಸಿಒಸಿಒಸಿ)" ಅಳವಡಿಸಿಕೊಂಡ ನಿರ್ಣಯಗಳಿಗೆ ವಿರುದ್ದ ಸಹ ಆಗಿದೆ. ಆದ್ದರಿಂದ ಗಲ್ಲುಶಿಕ್ಷೆಯ ಬದಲಿಗೆ ಪರ್ಯಾಯವಾದ ಶಿಕ್ಷೆಯ ಬಗ್ಗೆ ಚಿಂತಿಸುವಂತೆ ಕೇಂದ್ರ ಸರ್ಕಾರಕ್ಕೆ ಸೂಚಿಸಿತ್ತು.

**ಹಿನ್ನಲೆ**:

ಮರಣ ಸಮಯದಲ್ಲಿ ಖೈದಿಗಳು ನರಳುವುದನ್ನು ತಡೆಯಲು ನ್ಯಾಯಾಲಯ ಮಧ್ಯಪ್ರವೇಶಿಸಬೇಕೆಂದು ರಿಟ್ ಅರ್ಜಿಯನ್ನು ಸಲ್ಲಿಸಿ ಮನವಿ ಮಾಡಲಾಗಿತ್ತು. ಮನವಿಯಲ್ಲಿ ಅವನ ಅಥವಾ ಅವಳ ಜೀವನ ಅಂತ್ಯದ ಸಮಯದಲ್ಲಿ ನೋವನ್ನು ಅನುಭವಿಸುವಂತೆ ಒತ್ತಾಯಿಸಬಾರದು ಎಂಬುದು ಅರ್ಜಿದಾರರ ವಾದ. ಒಬ್ಬ ವ್ಯಕ್ತಿಯನ್ನು ಮರಣದಂಡನೆಗೆ ನೇಣು ಹಾಕಿದಾಗ, ಅವನ ಘನತೆ ನಾಶವಾಗುತ್ತದೆ ಎಂದು ಅರ್ಜಿಯಲ್ಲಿ ಹೇಳಲಾಗಿದೆ. ಅರ್ಜಿದಾರರು ಸಂವಿಧಾನದ 21ನೇ ವಿಧಿಯನ್ನು (ಜೀವಿಸುವ ಹಕ್ಕು) ಸಹ ಉಲ್ಲೇಖಿಸಿದ್ದಾರೆ ಮತ್ತು ಖೈದಿಗಳ ಸಾವು ಕೂಡ ಘನತೆಯಿಂದ ಹಾಗೂ ನೋವು ರಹಿತವಾಗಿರಬೇಕು ಎಂದು ವಿವರಿಸಲಾಗಿದೆ.

**ಮರಣದಂಡನೆಯ ಸಂವಿಧಾನಾತ್ಮಕತೆ:**

ಮರಣ ದಂಡನೆಯ ಸಂವಿಧಾನ ಮಾನ್ಯತೆಯು ದೀನಾ ವರ್ಸಸ್ ಯೂನಿಯನ್ ಆಫ್ ಇಂಡಿಯಾ ಮತ್ತು 1980 ರಲ್ಲಿ ಬಚ್ಚನ್ ಸಿಂಗ್ ಕೇಸ್ನಲ್ಲಿ ಸೇರಿದಂತೆ ಈಗಾಗಲೇ ಸುಪ್ರೀಂಕೋರ್ಟ್ನಿಂದ ಈಗಾಗಲೇ ಮಾನ್ಯತೆ ಪಡೆದಿದೆ. ಕೋಡ್ ಆಫ್ ಕ್ರಿಮಿನಲ್ ಪ್ರೊಸಿಜರ್ನ ಸೆಕ್ಷನ್ 354 (5)ರಡಿ ಗಲ್ಲುಶಿಕ್ಷೆಯನ್ನು ಕೋರ್ಟ್ ಎತ್ತಿಹಿಡಿದಿದೆ.

**ಕಾನೂನು ಆಯೋಗದ ಅವಲೋಕನಗಳು**:

ಕಾನೂನು ಆಯೋಗ ತನ್ನ 187ನೆಯ ವರದಿಯಲ್ಲಿ ಗಲ್ಲುಶಿಕ್ಷೆ ಮೂಲಕ ಮರಣದಂಡನೆ ವಿಧಾನವನ್ನು ಈಗಾಗಲೇ ಅನೇಕ ದೇಶಗಳು ರದ್ದುಗೊಳಿಸಿದ್ದು, ಗಲ್ಲುಶಿಕ್ಷೆ ಬದಲಾಗಿ ವಿದ್ಯುತ್ ಶಾಕಿಂಗ್, ಮಾರಕ ಚುಚ್ಚುಮದ್ದನ್ನು ಬಳಸುತ್ತಿವೆ ಎಂದು ವರದಿ ನೀಡಿದೆ. ಗಲ್ಲುಶಿಕ್ಷೆ ನಿಸ್ಸಂದೇಹವಾಗಿ ತೀವ್ರವಾದ ಚಿತ್ರಹಿಂಸೆ ಮತ್ತು ನೋವಿನಿಂದ ಕೂಡಿದೆ ಎಂದು ಆಯೋಗ ಹೇಳಿದೆ.

www.karunaduexams.com

## ಮಧುಬನಿ ಕಲೆ (Madhubani Art)



ಬಿಹಾರದ ವಿವಿಧ ಸರಕಾರಿ ಕಟ್ಟಡಗಳ ಗೋಡೆಗಳ ಮೇಲೆ ಇಲ್ಲಿನ ಪ್ರಸಿದ್ಧ ಮಧುಬನಿ ಜಾನಪದ ಚಿತ್ರಕಲೆಯನ್ನು ಚಿತ್ರಿಸಲು ಬಿಹಾರ ಸರ್ಕಾರ ಮುಂದಾಗಿದೆ. ಪ್ರವಾಸಿಗರಿಗೆ ಬಿಹಾರದ ಸಂಸ್ಕೃತಿಯೊಂದಿಗೆ ವರ್ಣಚಿತ್ರಗಳನ್ನು ಹೇಗೆ ಸಂಯೋಜಿಸಲಾಗಿದೆ ಎಂಬುದರ ಬಗ್ಗೆ ಅನುಭವವನ್ನು ನೀಡುವುದು ಈ ಕಲ್ಪನೆಯ ಹಿಂದಿನ ಉದ್ದೇಶ.

**ಮಧುಬನಿ ಕಲೆ:**

- ಮಧುಬನಿಕಲೆ ಅಥವ ಮಿಥಿಲ ಚಿತ್ರಕಲೆ ಭಾರತದ ಚಿತ್ರಕಲಾ ಶೈಲಿಗಳಲ್ಲಿ ಒಂದಾಗಿದೆ. ಬಿಹಾರ್ ರಾಜ್ಯದ ಮಿಥಿಲ ಪ್ರದೇಶದಲ್ಲಿ, ಭಾರತದ ಪಕ್ಕದಲ್ಲಿರುವ ನೇಪಾಳದ ತೆರಾಯಿನಲ್ಲಿ ಈ ಕಲೆ ಕಂಡು ಬರುತ್ತದೆ. ಚಿತ್ರಗಳನ್ನು ನೈಸರ್ಗಿಕ ವರ್ಣಗಳು ಮತ್ತು ವರ್ಣದ್ರವ್ಯಗಳನ್ನು ಬಳಸಿ, ಬೆರಳುಗಳು, ಕೊಂಬೆಗಳನ್ನು, ಕುಂಚ, ಮುಳ್ಳು-ಪೆನ್ನುಗಳು, ಮತ್ತು ಬೆಂಕಿ ಪೊಟ್ಟಣದ ಕಡ್ಡಿಯನ್ನು ಉಪಯೊಗಿಸಿ ಮಾಡಲಾಗುತ್ತದೆ.
- ಭರ್ನಿ, ಕಟ್ಚ್ನಿ, ತಂತ್ರಿಕ್, ಗಾಡ್ನಾ ಮತ್ತು ಕೋಬಾರ್ ಮಧುಬನಿ ಚಿತ್ರಕಲೆಯ ವಿವಿಧ ಶೈಲಿಗಳು. ಇವುಗಳನ್ನು ಐತಿಹಾಸಿಕವಾಗಿ ಜಾತಿ ಪದ್ಧತಿಯ ಮೇಲುವರ್ಗದ ಮಹಿಳೆಯರಿಂದ ಮಾತ್ರ ಚಿತ್ರಿಸಲಾಗುವುದು,

## ನ್ಯಾಷನಲ್ ಟ್ರಸ್ಟ್ ಕಾಯಿದೆ-1999 ತಿದ್ದುಪಡಿಗೆ ಕೇಂದ್ರ ಸಂಪುಟ ಒಪ್ಪಿಗೆ



ಆಟಿಸಂ, ಸೆರೆಬ್ರಲ್ ಪ್ಲಾಸಿ, ಬುದ್ಧಿಮಾಂದ್ಯರು ಮತ್ತು ಬಹುವಿಧದ ಅಂಗವಿಕಲತೆಯಿಂದ ಬಳಲುತ್ತಿರುವ ಜನರ ಕಲ್ಯಾಣ ರಾಷ್ಟ್ರೀಯ ಟ್ರಸ್ಟ್ ಕಾಯಿದೆ-1999 ರ ಸೆಕ್ಷನ್ 4(1) ಮತ್ತು ಸೆಕ್ಷನ್ 5(1)ಕ್ಕೆ ತಿದ್ದುಪಡಿ ತರಲು ಕೇಂದ್ರ ಸಂಪುಟ ಅನುಮತಿ ನೀಡಿದೆ. ಟ್ರಸ್ಟ್ ನ ಮುಖ್ಯಸ್ಥರು ಮತ್ತು ಸದಸ್ಯರ ಅವಧಿಯನ್ನು ಮೂರು ವರ್ಷದ ಅವಧಿಗೆ ನಿಗದಿಪಡಿಸಿ ಅವಧಿಯಲ್ಲಿರುವವರು ದೀರ್ಘಕಾಲದ ವರೆಗೆ ಹುದ್ದೆಯಲ್ಲಿ ಮುಂದುವರೆಯುವದಕ್ಕೆ ಕಡಿವಾಣ ಹಾಕುವುದು ತಿದ್ದುಪಡಿಯ ಉದ್ದೇಶವಾಗಿದೆ.

**ತಿದ್ದುಪಡಿಯ ಅವಶ್ಯಕತೆ?**

ರಾಷ್ಟ್ರೀಯ ಟ್ರಸ್ಟ್ ಕಾಯಿದೆ, 1999 ರ ಸೆಕ್ಷನ್ 4 (1) ರ ಪ್ರಕಾರ, ಅಧ್ಯಕ್ಷರು ಅಥವಾ ರಾಷ್ಟ್ರೀಯ ಟ್ರಸ್ಟ್ ಮಂಡಳಿಯ ಸದಸ್ಯರು ಮೂರು ವರ್ಷಗಳ ಅವಧಿಯ ನಂತರವೂ ಉತ್ತರಾಧಿಕಾಗಿ ನೇಮಕ ಆಗುವವರೆಗೆ ಅಧಿಕಾರದಲ್ಲಿ ಮುಂದುವರೆಯಬಹುದಾಗಿದೆ. ಕಾಯಿದೆ ಸೆಕ್ಷನ್ 5 (1) ರ ಪ್ರಕಾರ ಟ್ರಸ್ಟ್ ಅಧ್ಯಕ್ಷರು ರಾಜೀನಾಮೆ ನೀಡಿದಾಗ ಅವರ ಉತ್ತರಾಧಿಕಾರಿಯನ್ನು ಸರ್ಕಾರದಿಂದ ನೇಮಕ ಮಾಡುವ

www.karunaduexams.com

ತನಕ ಅವರು ಅಧಿಕಾರದಲ್ಲಿ ಮುಂದುವರಿಯಬಹುದು. ಇದರಿಂದ ಸೂಕ್ತ ಉತ್ತರಾಧಿಕಾರಿ ನೇಮಕ ಆಗುವವರೆಗೂ ಅಧ್ಯಕ್ಷರು ದೀರ್ಘಕಾಲ ಹುದ್ದೆಯಲ್ಲಿ ಇರಬಹುದಾಗಿದೆ.

**ರಾಷ್ಟ್ರೀಯ ಟ್ರಸ್ಟ್:**

ರಾಷ್ಟ್ರೀಯ ಟ್ರಸ್ಟ್ ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ಸಚಿವಾಲಯದಡಿ, ವಿಕಲಚೇತನರ ಸಬಲೀಕರಣ ಇಲಾಖೆ, ಅಡಿಯಲ್ಲಿ ಒಂದು ಶಾಸನಬದ್ಧ ಸಂಸ್ಥೆಯಾಗಿದೆ. ವಿಕಲಚೇತನರು ಮತ್ತು ಅವರ ಕುಟುಂಬದವರ ಸಾಮರ್ಥ್ಯದ ಅಭಿವೃದ್ಧಿಯ ಅವಕಾಶಗಳನ್ನು ಒದಗಿಸುವುದು, ಅವರ ಹಕ್ಕುಗಳನ್ನು ಪೂರ್ಣಗೊಳಿಸುವುದು, ಅವರ ಬೆಳವಣಿಗೆಗೆ ಸೂಕ್ತ ಪರಿಸರ ಸೃಷ್ಟಿಸುವ ಉದ್ದೇಶಕ್ಕಾಗಿ ರಾಷ್ಟ್ರೀಯ ಟ್ರಸ್ಟ್ ಅನ್ನು ಸ್ಥಾಪಿಸಲಾಯಿತು.

**ರಾಷ್ಟ್ರೀಯ ಟ್ರಸ್ಟ್ ಕರ್ತವ್ಯ:**

ರಾಷ್ಟ್ರೀಯ ಟ್ರಸ್ಟ್ ಕಾನೂನು ಮತ್ತು ಕಲ್ಯಾಣ ಸಂಬಂಧಿತ ಎರಡು ಮೂಲಭೂತ ಕರ್ತವ್ಯಗಳನ್ನು ಒಳಗೊಂಡಿದೆ. ಜಿಲ್ಲಾ ಮಟ್ಟದಲ್ಲಿ ಜಿಲ್ಲೆಯ ಜಿಲ್ಲಾಧಿಕಾರಿ/ಜಿಲ್ಲಾ ಮ್ಯಾಜಿಸ್ಟ್ರೇಟ್ ನೇತೃತ್ವದಲ್ಲಿ ಲೋಕಲ್ ಲೆವೆಲ್ ಕಮಿಟಿ (ಎಲ್ಎಲ್ ಸಿ) ಮೂಲಕ ಕಾನೂನು ಸಲಹೆ ಕರ್ತವ್ಯವನ್ನು ಒದಗಿಸುತ್ತಿದೆ. ಯೋಜನೆಗಳು ಮತ್ತು ಚಟುವಟಿಕೆಗಳ ಮೂಲಕ ಕಲ್ಯಾಣ ಕರ್ತವ್ಯಗಳನ್ನು ನೆರವೇರಿಸಲಾಗುತ್ತದೆ.

## <u>ಸಂಸದರ ಪ್ರದೇಶ ಅಭಿವೃದ್ಧಿ ಯೋಜನೆ ಮುಂದುವರೆಸಲು ಸಂಪುಟ ಒಪ್ಪಿಗೆ</u>



ಸಂಸದರ ಸ್ಥಳೀಯ ಪ್ರದೇಶ ಅಭಿವೃದ್ಧಿ ಯೋಜನೆಯನ್ನು 14ನೇ ಹಣಕಾಸು ಯೋಜನೆ ಅಂತ್ಯದ ವರೆಗೆ ಅಂದರೆ 31.03.2020ರ ವರೆಗೆ ಮುಂದುವರೆಸಲು ಕೇಂದ್ರ ಆರ್ಥಿಕ ವ್ಯವಹಾರಗಳ ಸಚಿವ ಸಂಪುಟ ಅನುಮೋದನೆ ನೀಡಿದೆ.

**ಸಂಸದರ ಸ್ಥಳೀಯ ಪ್ರದೇಶ ಅಭಿವೃದ್ಧಿ ಯೋಜನೆ (MPLAD)**

ಸಂಸದರ ಸ್ಥಳೀಯ ಪ್ರದೇಶ ಅಭಿವೃದ್ಧಿ ಯೋಜನೆಯನ್ನು 1993ರಲ್ಲಿ ಜಾರಿಗೆ ತರಲಾಗಿದೆ. ಬಾಳಿಕೆ ಬರುವ ಸಮುದಾಯ ಆಸ್ತಿಗಳ ಸೃಷ್ಟಿಗಾಗಿ ಮತ್ತು ಸ್ಥಳೀಯ ಮೂಲಭೂತ ಸೌಕರ್ಯಗಳ ಆಧಾರದ ಮೇಲೆ ಮೂಲಭೂತ ಸೌಕರ್ಯಗಳನ್ನು ಒದಗಿಸುವುದಕ್ಕಾಗಿ ಸಂಸದರು ಕಾಮಗಾರಿಗಳನ್ನು ಶಿಫಾರಸು ಮಾಡಲು ಯೋಜನೆಯನ್ನು ಜಾರಿಗೆ ತರಲಾಗಿದೆ.

- ಸ್ಥಳೀಯ ಅಗತ್ಯತೆಗಳ ಆಧಾರದ ಮೇಲೆ ಮತ್ತು ಸಾರ್ವಜನಿಕರ ಬಳಕೆಗೆ ಯಾವಾಗಲೂ ಲಭ್ಯವಾಗುವಂತ ಕಾಮಗಾರಿಗಳಿಗೆ ಯೋಜನೆಯಡಿಯಲ್ಲಿ ಪ್ರಾಮುಖ್ಯತೆಯನ್ನು ನೀಡಲಾಗುವುದು. ಕುಡಿಯುವ ನೀರು, ಸಾರ್ವಜನಿಕ ಆರೋಗ್ಯ, ಶಿಕ್ಷಣ, ನೈರ್ಮಲ್ಯ, ರಸ್ತೆಗಳು ಮುಂತಾದವುಗಳನ್ನು ರಾಷ್ಟ್ರೀಯ ಆದ್ಯತೆಗಳಿಗೆ ಸಂಬಂಧಿಸಿದ ಕೆಲಸಗಳಿಗೆ ಯೋಜನೆಯಡಿಯಲ್ಲಿ ಆದ್ಯತೆ ನೀಡಲಾಗಿದೆ.

www.karunaduexams.com

- ಹಣವನ್ನು ನೇರವಾಗಿ ಜಿಲ್ಲಾಡಳಿತಕ್ಕೆ ಬಿಡುಗಡೆ ಮಾಡಲಾಗುತ್ತದೆ. ಯೋಜನೆಯ ಅಡಿಯಲ್ಲಿ ಬಿಡುಗಡೆಯಾದ ಹಣವು ಬಿಡುಗಡೆ ವರ್ಷ ಖರ್ಚು ಆಗದಿದ್ದರೆ ವ್ಯರ್ಥವಾಗುವುದಿಲ್ಲ ಬದಲಿಗೆ ಮುಂದಿನ ವರ್ಷದಲ್ಲಿ ಬಳಸಬಹುದು.

**ಕಾಮಗಾರಿ ಶಿಫಾರಸ್ಸು:**

ಲೋಕಸಭಾ ಸದಸ್ಯರು ತಮ್ಮ ಕ್ಷೇತ್ರಗಳಲ್ಲಿ ಕೆಲಸಗಳನ್ನು ಶಿಫಾರಸು ಮಾಡಬಹುದು. ರಾಜ್ಯಸಭೆಯ ಚುನಾಯಿತ ಸದಸ್ಯರು ತಾವು ಆಯ್ಕೆಯಾದ ರಾಜ್ಯದಲ್ಲಿ ಎಲ್ಲಿಯಾದರೂ ಶಿಫಾರಸು ಮಾಡಬಹುದು. ಲೋಕಸಭೆಯ ಮತ್ತು ರಾಜ್ಯಸಭೆಗೆ ನಾಮನಿರ್ದೇಶನಗೊಂಡ ಸದಸ್ಯರು ದೇಶದಲ್ಲಿ ಎಲ್ಲಿಯಾದರೂ ಅನುಷ್ಠಾನಕ್ಕಾಗಿ ಕೆಲಸಗಳನ್ನು ಆಯ್ಕೆ ಮಾಡಬಹುದು.

## ಆಧಾರ್ ಸೋರಿಕೆ ತಡೆಗೆ ವರ್ಚುಯಲ್ ಐಡಿ



ಆಧಾರ್ ನೋಂದಣಿ ಸಂದರ್ಭದಲ್ಲಿ ಸಂಗ್ರಹಿಸಲಾಗಿರುವ ನೋಂದಣಿದಾರರ ವೈಯಕ್ತಿಕ ವಿವರಗಳ ಸುರಕ್ಷತೆಗಾಗಿ ಭಾರತೀಯ ವಿಶಿಷ್ಟ ಗುರುತಿನ ಚೀಟಿ ಪ್ರಾಧಿಕಾರವು (ಯುಐಡಿಎಐ) ‘ಪರ್ಯಾಯ ಗುರುತು ಸಂಖ್ಯೆ’ಯ (ವರ್ಚ್ಯುವಲ್ ಐಡಿ) ವಿನೂತನಪರಿಕಲ್ಪನೆಯನ್ನು ರೂಪಿಸಿದೆ.

**ಪರ್ಯಾರ ಗುರುತು ಸಂಖ್ಯೆ:**

ಆಧಾರ್ ಸಂಖ್ಯೆ ಹೊಂದಿರುವವರು ಯುಐಡಿಎಐ ವೆಬ್‌ಸೈಟ್ ನಿಂದ 16 ಸಂಖ್ಯೆಗಳ ಪರ್ಯಾಯ ಗುರುತಿನ ಸಂಖ್ಯೆಯನ್ನು ಪಡೆದುಕೊಳ್ಳಬಹುದು. ಬಯೊಮೆಟ್ರಿಕ್ ವಿವರಗಳನ್ನು ಒಳಗೊಂಡಿರುವ ಈ ಗುರುತಿನ ಸಂಖ್ಯೆಯನ್ನು ಮೊಬೈಲ್‌ಗೆ ಆಧಾರ್ ಜೋಡಣೆಗೆ ಬಳಸಬಹುದು. ಹಾಗೆಯೇ, ಆಧಾರ್ ಜೋಡಣೆ ಮಾಡಬೇಕಿರುವ ವಿವಿಧ ಸೇವೆಗಳಿಗೂ ಇದನ್ನು ನೀಡಬಹುದು. ಅಲ್ಲದೆ, ಗುರುತು, ಭಾವಚಿತ್ರ, ವಿಳಾಸ ದೃಢೀಕರಣಕ್ಕೂ ಇದನ್ನು ಬಳಸಬಹುದು. ಈ ಹೊಸ ವ್ಯವಸ್ಥೆಯಿಂದಾಗಿ ವಿವಿಧ ಸೇವೆಗಳಿಗೆ ಜನರು ತಮ್ಮ ಆಧಾರ್ ಸಂಖ್ಯೆಯನ್ನು ನೀಡಬೇಕಾಗಿಲ್ಲ.

**ಸೀಮಿತ ವೈಯಕ್ತಿಕ ವಿವರ**: ಪರ್ಯಾಯ ಗುರುತಿನ ಸಂಖ್ಯೆಯ ಜೊತೆಗೆ ‘ಸೀಮಿತ– ವೈಯಕ್ತಿಕ ವಿವರ’ (ಲಿಮಿಟೆಡ್ ಕೆವೈಸಿ) ಎಂಬ ಮತ್ತೊಂದು ಪರಿಕಲ್ಪನೆಯನ್ನೂ ಯುಐಡಿಎಐ ರೂಪಿಸಿದೆ. ಈ ವ್ಯವಸ್ಥೆಯಲ್ಲಿ ನಿರ್ದಿಷ್ಟ ಸೇವೆ ಒದಗಿಸುವ ಸಂಸ್ಥೆಗಳಿಗೆ ಅಗತ್ಯಕ್ಕೆ ಬೇಕಾದಷ್ಟೇ ವಿವರಗಳನ್ನು ಪ್ರಾಧಿಕಾರ ನೀಡಲಿದೆ.

**ಜಾರಿ ಯಾವಾಗ?**

ಪರ್ಯಾಯ ಗುರುತಿನ ಸಂಖ್ಯೆ ವ್ಯವಸ್ಥೆ 2018ರ ಮಾರ್ಚ್ 1ರಿಂದ ಜಾರಿಗೆ ಬರಲಿದೆ. ವಿವಿಧ ಸೇವೆಗಳನ್ನು ನೀಡುವ ಎಲ್ಲ ಸಂಸ್ಥೆಗಳು ಜೂನ್ 1ರಿಂದ ಹೊಸ ವ್ಯವಸ್ಥೆಯನ್ನು ಅಳವಡಿಸಿಕೊಳ್ಳುವುದು ಕಡ್ಡಾಯ.

**ಕೃಪೆ: ಪ್ರಜಾವಾಣಿ**

www.karunaduexams.com

**<u>ರಾಷ್ಟ್ರೀಯ ಯುವ ಉತ್ಸವ</u>**




ರಾಷ್ಟ್ರೀಯ ಯುವ ಉತ್ಸವವನ್ನು ಜನವರಿ 12 ರಂದು ಆಚರಿಸಲಾಗುತ್ತದೆ, ಭಾರತದ ಯುವಪೀಳಿಗೆಯ ಐಕಾನ್ ಎನಿಸಿರುವ ಸ್ವಾಮಿ ವಿವೇಕಾನಂದರ ಜನ್ಮದಿನದಂದು ರಾಷ್ಟ್ರೀಯ ಯುವ ಉತ್ಸವವನ್ನು ಆಯೋಜಿಸಲಾಗುತ್ತದೆ.

ರಾಷ್ಟ್ರೀಯ ಯುವ ಉತ್ಸವ ದೇಶದಲ್ಲೇ ಅತಿ ದೊಡ್ಡ ಯುವ ಉತ್ಸವವಾಗಿದೆ. ಉತ್ತರ ಪ್ರದೇಶದ ರಾಜ್ಯ ಸರ್ಕಾರದ ಸಹಯೋಗದೊಂದಿಗೆ ಕೇಂದ್ರ ಯುವ ವ್ಯವಹಾರ ಮತ್ತು ಕ್ರೀಡಾ ಸಚಿವಾಲಯವು ಈ ಉತ್ಸವವನ್ನು ಗೌತಮ್ ಬುದ್ದ ವಿಶ್ವವಿದ್ಯಾನಿಲಯದಲ್ಲಿ ಆಯೋಜಿಸುತ್ತಿದೆ.

**ಈ ವರ್ಷದ ಥೀಮ್: ಸಂಕಲ್ಪ ಸೇ ಸಿದ್ಧಿ**

- ಇದು 22ನೇ ರಾಷ್ಟ್ರೀಯ ಯುವ ಉತ್ಸವ. ಮೊದಲನೆ ರಾಷ್ಟ್ರೀಯ ಯುವ ಉತ್ಸವವನ್ನು 1995ರಲ್ಲಿ ಭೋಪಾಲ್ನಲ್ಲಿ ನಡೆಸಲಾಯಿತು.
- ಇದೇ ಮೊದಲ ಬಾರಿಗೆ ನ್ಯಾಷನಲ್ ಕ್ಯಾಪಿಟಲ್ ರೀಜನ್ (NCR)ನಲ್ಲಿ ರಾಷ್ಟ್ರೀಯ ಯುವ ಉತ್ಸವವನ್ನು ಆಯೋಜಿಸಲಾಗುತ್ತಿದೆ.

# ವಿಜ್ಞಾನ-ತಂತ್ರಜ್ಞಾನ

**<u>ಗೇಲ್ (GAIL) ನಿಂದ ದೇಶದ ಎರಡನೇ ಅತಿದೊಡ್ಡ ಮೇಲ್ಛಾವಣಿ ಸೌರ ವಿದ್ಯುತ್ ಘಟಕ</u>**



ಸರ್ಕಾರಿ ಸ್ವಾಮ್ಯದ ಗೇಲ್ ಇಂಡಿಯಾ ಲಿಮಿಟೆಡ್ ಭಾರತದ ಎರಡನೇ ಅತಿದೊಡ್ಡ ಮೇಲ್ಛಾವಣಿ ಸೌರ ವಿದ್ಯುತ್ ಸ್ಥಾವರವನ್ನು ಉತ್ತರ ಪ್ರದೇಶದಲ್ಲಿ ಇತ್ತೀಚೆಗೆ ಅನಾವರಣಗೊಳಿಸಿದೆ. ಇದು 5.76 ಮೆಗಾ ವ್ಯಾಟ್ ಪೀಕ್ ಸಾಮರ್ಥ್ಯದ ಘಟಕವಾಗಿದ್ದು, ಉತ್ತರ ಪ್ರದೇಶದ ಪಾಟದಲ್ಲಿರುವ ಗೇಲ್ ನ ಪೆಟ್ರೋಕೆಮಿಕಲ್ ಕಾಂಪ್ಲೆಕ್ಸ್ ನಲ್ಲಿ ಸ್ಥಾಪಿಸಲಾಗಿದೆ. ಸುಮಾರು 65000 ಚದರ ಮೀಟರಿನಷ್ಟು ವಿಸ್ತೀರ್ಣವನ್ನು ಹೊಂದಿರುವ ಮೇಲ್ಛಾವಣಿಯನ್ನು ಸ್ಥಾವರ ಹೊಂದಿದೆ. ಪ್ರತಿ ವರ್ಷ 79 ಲಕ್ಷ KWh ವಿದ್ಯುತ್ ಉತ್ಪಾದಿಸುವ ಗುರಿಯನ್ನು ಹೊಂದಲಾಗಿದೆ.

**ದೇಶದ ಅತಿದೊಡ್ಡ ಮೇಲ್ಛಾವಣಿ ಸೌರ ಸ್ಥಾವರ:**

ದೇಶದ ಅತಿದೊಡ್ಡ ಮೇಲ್ಛಾವಣಿ ಸೌರ ಸ್ಥಾವರನ್ನು ಟಾಟಾ ಪವರ್ ಸಂಸ್ಥೆ ಪಂಜಾಬಿನ ಅಮೃತ್ ಸರದಲ್ಲಿ ಡಿಸೆಂಬರ್ 2015ರಲ್ಲಿ ಸ್ಥಾಪಿಸಿದೆ. ಇದು 12ಮೆಗಾವ್ಯಾಟ್ ಸೌರ ಮೇಲ್ಛಾವಣಿಯ ಯೋಜನೆಯಾಗಿದ್ದು, ವಾರ್ಷಿಕವಾಗಿ 150 ಲಕ್ಷಕ್ಕಿಂತ ಹೆಚ್ಚಿನ ಯೂನಿಟ್ ವಿದ್ಯುತ್ ಉತ್ಪಾದಿಸುತ್ತದೆ. ಈ ಯೋಜನೆಯಿಂದ ಪ್ರತಿ ವರ್ಷ 19,000 ಟನ್ ಇಂಗಾಲ ಹೊರಸೂಸುವಿಕೆ ಕಡಿಮೆಯಾಗಿದೆ.

www.karunaduexams.com

**ಹಿನ್ನಲೆ**:

2022ರ ವೇಳೆಗೆ ಭಾರತದಲ್ಲಿ 40 ಗಿಗಾ ವ್ಯಾಟ್ ಮೇಲ್ಛಾವಣಿ ಸೌರ ವಿದ್ಯುತ್ ಉತ್ಪಾದಿಸುವ ಗುರಿಯನ್ನು ಹೊಂದಲಾಗಿದೆ.

**ಗೇಲ್ GAIL:**

ಗೇಲ್ ಸರ್ಕಾರಿ ಸ್ವಾಮ್ಯದ ಸಂಸ್ಥೆಯಾಗಿದ್ದು, ನೈಸರ್ಗಿಕ ಅನಿಲ ಸಂಸ್ಕರಣೆ ಮತ್ತು ಸರಬರಾಜು ಮಾಡುವ ದೇಶದ ಅತಿದೊಡ್ಡ ಕಂಪನಿ. ಗೇಲ್ ಪ್ರಧಾನ ಕಚೇರಿ ನವದೆಹಲಿಯಲ್ಲಿದೆ. ಫೆಬ್ರುವರಿ 2013ರಲ್ಲಿ ಕೇಂದ್ರ ಸರ್ಕಾರ ಗೇಲ್ ಸಂಸ್ಥೆಗೆ ಮಹಾರತ್ನ ಸ್ಥಾನಮಾನವನ್ನು ನೀಡಿದೆ.

## Nyctibatrachus mewasingh: ಪಶ್ಚಿಮ ಘಟ್ಟದಲ್ಲಿ ಹೊಸ ರಾತ್ರಿ ಕಪ್ಪೆ ಪ್ರಭೇದ ಪತ್ತೆ



ವಿಜ್ಞಾನಿಗಳು ಕೋಜಿಕೋಡೆಯ ಮಲಬಾರ್ ವನ್ಯಜೀವಿ ಅಭಯಾರಣ್ಯದಲ್ಲಿ ಹೊಸ ಕಪ್ಪೆ ಪ್ರಭೇದವನ್ನು ಪತ್ತೆಹಚ್ಚಿದ್ದು ಇದಕ್ಕೆ Nyctibatrachus mewasingh ಎಂದು ಹೆಸರಿಡಲಾಗಿದೆ. ಪೆರುವನ್ನಮುಳಿ ಅಣೆಕಟ್ಟು ಉದ್ದಕ್ಕೂ ಹರಿಯುವ ಸಣ್ಣ ನೀರಿನ ಝುರಿಯಲ್ಲಿ ಹೊಸ ಕಪ್ಪೆ ಪ್ರಭೇದವನ್ನು ಪತ್ತೆ ಹಚ್ಚಲಾಗಿದೆ. ಭಾರತದ ಉದ್ದಗಲಕ್ಕೂ ಕೈಗೊಳ್ಳಲಾಗುತ್ತಿರುವ ಉಭಯಜೀವಿಗಳ ಸಂಶೋಧನೆಗೆ ಇದು ಮಹತ್ವರ ಕೊಡುಗೆಯಾಗಿದೆ.

**ಮೆವಸಿಂಗ್ ರಾತ್ರಿ ಕಪ್ಪೆ ಬಗ್ಗೆ:**

ಇದು ಪಶ್ಚಿಮ ಘಟ್ಟ ಪರ್ವತ ಶ್ರೇಣಿಗೆ ಮಾತ್ರ ಸ್ಥೀಮಿತವಾಗಿರುವ ನಿಕ್ಟಿಬಾಟ್ರಾಕಸ್ (ಸಾಮಾನ್ಯವಾಗಿ ರಾತ್ರಿ ಕಪ್ಪೆಗಳು ಎಂದು ಕರೆಯಲ್ಪಡುತ್ತದೆ) ಗುಂಪಿಗೆ ಸೇರಿದೆ. ಈ ಗುಂಪಿನಲ್ಲಿ ಮೆವಸಿಂಗ್ ರಾತ್ರಿ ಕಪ್ಪೆ ಸೇರಿದಂತೆ ಒಟ್ಟು 36 ಕಪ್ಪೆಗಳಿವೆ. ಪರಿಸರ ವಿಜ್ಞಾನಕ್ಕೆ ಅಪಾರ ಕೊಡುಗೆ ನೀಡಿರುವ ವನ್ಯಜೀವಿ ವಿಜ್ಞಾನಿ ಮೆವಸಿಂಗ್ ರವರ ಗೌರವಾರ್ಥವಾಗಿ ಈ ಹೊಸ ಪ್ರಭೇದಕ್ಕೆ ಅವರ ಹೆಸರನ್ನು ಇಡಲಾಗಿದೆ.

## ಭಾರತದ ಮೊದಲ ಡಿಜಿಟಲ್ ಅಂಕೊಲಾಜಿ ಟ್ಯುಟೋರಿಯಲ್ ಸರಣಿಗೆ ಚಾಲನೆ



ಕೇಂದ್ರ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವಾಲಯ ಭಾರತದ ಮೊದಲ ಡಿಜಿಟಲ್ ಅಂಕೊಲಾಜಿ (ಗಂಥಿಶಾಸ್ತ್ರ) ಟ್ಯುಟೋರಿಯಲ್ ಸರಣಿಗೆ ಚಾಲನೆ ಇತ್ತೀಚೆಗೆ ಚಾಲನೆ ನೀಡಿದೆ. ಡಿಜಿಟಲ್ ಅಂಕೊಲಾಜಿ (ಗಂಥಿಶಾಸ್ತ್ರ) ಟ್ಯುಟೋರಿಯಲ್ ಸರಣಿಯನ್ನು ಟಾಟಾ ಮೆಮೊರಿಯಲ್ ಸೆಂಟರ್ ಅಭಿವೃದ್ದಿಪಡಿಸಿದೆ. ಡಿಜಿಟಲ್ ಇಂಡಿಯಾದ

www.karunaduexams.com

ಭಾಗವಾಗಿ ಟಾಟಾ ಮೆಮೊರಿಯಲ್ ಸೆಂಟರ್ ರಾಜ್ಯಗಳ ಸಹಯೋಗದೊಂದಿಗೆ ದೇಶದಾದ್ಯಂತ ಅನಾವರಣಗೊಳಿಸಿದೆ.


**ಅಂಕೊಲಾಜಿ**: ಆಂಕೊಲಾಜಿ ವಿಜ್ಞಾನದ ಒಂದು ಶಾಖೆಯಾಗಿದ್ದು, ಗಡ್ಡೆಗಳು ಮತ್ತು ಕ್ಯಾನ್ಸರ್ ಗೆ ಸಂಬಂಧಿಸಿದಂತೆ ಅಧ್ಯಯನ ನಡೆಸುವುದಾಗಿದೆ. "ಅಂಕೊ" ಎಂಬ ಪದವು ಬೃಹತ್ / ದ್ರವ್ಯರಾಶಿಯ / ಗಡ್ಡೆ ಎಂದರ್ಥ "ಲಾಜಿ" ಅಂದರೆ ಅಧ್ಯಯನ.

**ಪ್ರಮುಖಾಂಶಗಳು**:

- ಅಂಕೊಲಾಜಿ ಟ್ಯುಟೋರಿಯಲ್ ಸರಣಿಯು ಕ್ಯಾನ್ಸರ್ ಕುರಿತು ಆರಂಭಿಕ ಹಂತದಲ್ಲಿ ಪತ್ತೆಹಚ್ಚುವಿಕೆ, ತಡೆಗಟ್ಟುವಿಕೆ, ಪುನರ್ವಸತಿ ಮತ್ತು ವಿವಿಧ ಕ್ಯಾನ್ಸರ್ ಗಳ ಚಿಕಿತ್ಸೆಯ ಬಗ್ಗೆ ದೇಶದಾದ್ಯಂತ ವೈದ್ಯರಿಗೆ ತರಬೇತಿ ನೀಡುವ ಗುರಿ ಹೊಂದಿದೆ.
- ಒಟ್ಟಾರೆ ಕೋರ್ಸ್ ಅನ್ನು ವಿವಿಧ ಕ್ಯಾನ್ಸರ್ ಗಳ ಆಧಾರದ ಮೇಲೆ ವಿವಿಧ ಮಾಡ್ಯೂಲ್ಗಳೊಂದಿಗೆ 7 ವಾರಗಳವರೆಗೆ ವಿನ್ಯಾಸಗೊಳಿಸಲಾಗಿದೆ.
- ಸುಮಾರ 14 ಗಂಟೆಗಳ ಸಮಗ್ರ ಇ-ಕಲಿಕೆ ಇದಾಗಿದ್ದು, 40 ಕ್ಕೂ ಹೆಚ್ಚು ವಿಡಿಯೋ ಉಪನ್ಯಾಸಗಳು, ವಿಶ್ಲೇಷಣೆಗಳು, ಮೌಲ್ಯಮಾಪನ ಪ್ರಶ್ನಾವಳಿಗಳು ಮತ್ತು ಆವರ್ತಕ ಸಂವಹನಗಳನ್ನು ಒಳಗೊಂಡಿದೆ.

www.karunaduexams.com

**<u>ಸೂರ್ಯನ ಅಧ್ಯಯನಕ್ಕೆ 2018ರಲ್ಲಿ ನಾಸಾದಿಂದ ಪಾರ್ಕರ್ ನೌಕೆ</u>**



ಸೂರ್ಯನ ರಹಸ್ಯ ಭೇದಿಸಲು ನಾಸಾ ಸಜ್ಜಾಗಿದ್ದು, ಐತಿಹಾಸಿಕ ಪಾರ್ಕರ್ ಸೌರ ಪ್ರೋಬ್ ಮಿಷನ್ ಅನ್ನು 2018ರಲ್ಲಿ ಆರಂಭಿಸುವುದಾಗಿ ಹೇಳಿದೆ. ಸೂರ್ಯನಲ್ಲಾಗುವ ಬದಲಾವಣೆಯನ್ನು ಬಗ್ಗೆ ಗ್ರಹಿಸುವಲ್ಲಿ ಇದು ಪ್ರಮುಖ

ಪಾತ್ರವಹಿಸಲಿದೆ. ಸೂರ್ಯನಲ್ಲಿ ಬದಲಾಗುವ ಪರಿಸ್ಥಿತಿಗಳು ಸೌರಮಂಡಲದೊಳಗೆ ಹರಡಿ ಭೂಮಿಯ ಮೇಲೆ ಮತ್ತು ಇತರ ಗ್ರಹಗಳ ಮೇಲೆ ಪರಿಣಾಮ ಬೀರುವುದರಿಂದ ಈ ಬಗ್ಗೆ ಅಧ್ಯಯನ ನಡೆಸುವುದು ಮಹತ್ವವೆನಿಸಿದೆ. ಪಾರ್ಕರ್ ನೌಕೆ ಈ ಮುಂಚಿನ ಯಾವುದೇ ಬಾಹ್ಯಾಕಾಶ ನೌಕೆಗಿಂತ ಸೂರ್ಯನ ಹತ್ತಿರಕ್ಕೆ ಚಲಿಸಲಿದ್ದು, ಅತಿಯಾದ ಶಾಖ ಮತ್ತು ವಿಕಿರಣ ಪರಿಸ್ಥಿತಿಗಳನ್ನು ಎದುರಿಸಿ ಅಧ್ಯಯನ ನಡೆಸಲಿದೆ.

60 ವರ್ಷಗಳ ಹಿಂದೆಯೇ ಸೌರ ಮಾರುತದ ಇರುವಿಕೆಯನ್ನು ಸೂಚಿಸಿದ್ದ ಖಗೋಳಶಾಸ್ತ್ರಜ್ಞ ಯುಗೀನ್ ಪಾರ್ಕರ್ ಅವರ ಗೌರವಾರ್ಥ 'ಪಾರ್ಕರ್ ಸೌರ ಶೋಧನಾನೌಕೆ' ಎಂದು ಹೆಸರಿಸಿರುವುದಾಗಿ ನಾಸಾ ತಿಳಿಸಿದೆ.

ಈ ನೌಕೆಯು 2500 ಡಿಗ್ರಿ ಫ್ಯಾರಾನಿಟ್ ಉಷ್ಣತೆಯನ್ನು ತಡೆದುಕೊಳ್ಳುವ ಸಾಮರ್ಥ್ಯ ಹೊಂದಿದೆ. ಇದರಿಂದ ಸೂರ್ಯನ ಪ್ರಭಾವಲಯದಲ್ಲಿ ಹೆಚ್ಚು ಉಷ್ಣತೆ, ಶಾಖ ಹೊಂದಿರುವ ಹಿಂದಿನ ರಹಸ್ಯವನ್ನು ತಿಳಿಯಲೂ ಸಾಧ್ಯವಾಗಲಿದೆ. 4.5 ಇಂಚು ಕಾರ್ಬನ್ ಸಂಯೋಜಿತ ರಕ್ಷಣಾ ಕವಚವನ್ನು ಪಾರ್ಕರ್ ನೌಕೆ ಹೊಂದಿರಲಿದ್ದು ಅತಿ ತಾಪವನ್ನು ತಡೆದು ಶೋಧನಾಕಾರ್ಯ ನಡೆಸಲಿದೆ.


**ಸೂರ್ಯ ಮತ್ತು ಸೌರ ಮಾರುತದ ಅಧ್ಯಯನವೇಕೆ?**

- ನಾವು ಹತ್ತಿರದಿಂದ ಅಧ್ಯಯನ ಮಾಡಬಹುದಾದ ಏಕೈಕ ನಕ್ಷತ್ರ ಸೂರ್ಯ. ಈ ನಕ್ಷತ್ರವನ್ನು ಅಧ್ಯಯನ ಮಾಡುವುದರ ಮೂಲಕ ನಾವು ವಿಶ್ವದ ನಕ್ಷತ್ರಗಳ ಬಗ್ಗೆ ಇನ್ನಷ್ಟು ತಿಳಿದುಕೊಳ್ಳಬಹುದು.
- ಸೂರ್ಯ ಭೂಮಿಯ ಮೇಲೆ ಬೆಳಕು ಮತ್ತು ಉಷ್ಣತೆಯ ಮೂಲವಾಗಿದೆ. ಸೂರ್ಯನ ಬಗ್ಗೆ ಹೆಚ್ಚು ತಿಳಿಯುವ ಮೂಲಕ ಭೂಮಿಯಲ್ಲಿ ಹೇಗೆ ಜೀವಿಗಳ ಅಭಿವೃದ್ಧಿಯಾಯಿತು ಎಂಬುದನ್ನು ನಾವು ಹೆಚ್ಚು ಅರ್ಥಮಾಡಿಕೊಳ್ಳಬಹುದು.
- ಸೂರ್ಯನಲ್ಲಿನ ಚಟುವಟಿಕೆ ಭೂಮಿಯ ಮೇಲೆ ಪರಿಣಾಮ ಬೀರುತ್ತದೆ. ಇದು ಸೌರ ಮಾರುತದ ಮೂಲವಾಗಿದೆ. ಸೌರ ಮಾರುತವು ಸೂರ್ಯನಿಂದ ಅಯಾನೀಕರಿಸಿದ ಅನಿಲಗಳ ಹರಿವಾಗಿದ್ದು, ಭೂಮಿಯ ಮೇಲೆ ಪ್ರತಿ ಸೆಕೆಂಡಿಗೆ 500 ಕಿ.ಮೀ ವೇಗದಲ್ಲಿ (ಪ್ರತಿ ಗಂಟೆಗೆ ಒಂದು ಮಿಲಿಯನ್ ಮೈಲುಗಳು) ವೇಗದಲ್ಲಿ ಹರಿಯುತ್ತದೆ.
- ಸೌರ ಮಾರುತದಲ್ಲಾಗುವ ಬದಲಾವಣೆಗಳು ಭೂಮಿಯ ಕಾಂತೀಯ ಕ್ಷೇತ್ರದ ಮೇಲೆ ಪರಿಣಾಮ ಬೀರುತ್ತದೆ ಮತ್ತು ವಿಕಿರಣ ಪಟ್ಟಿ (Radiation Belt)ಯೊಳಗೆ ಶಕ್ತಿಯನ್ನು ತುಂಬುತ್ತದೆ.

www.karunaduexams.com

- ಸೌರ ಮಾರುತವು ಸೌರ ವ್ಯವಸ್ಥೆಯನ್ನು ಹೆಚ್ಚು ಆವರಿಸಿಕೊಂಡಿದೆ. ನಾವು ಬಾಹ್ಯಾಕಾಶ ನೌಕೆ ಮತ್ತು ಗಗನಯಾತ್ರಿಗಳನ್ನು ನಭಕ್ಕೆ ಕಳುಹಿಸುವ ಮೊದಲು ಸೌರ ವ್ಯವಸ್ಥೆಯನ್ನು ಮೊದಲು ಅರ್ಥಮಾಡಿಕೊಳ್ಳಬೇಕಿದೆ.

**ಪೆರಿಹೆಲಿಯನ್ (Perihelion)**




ಜನವರಿ 3 ರಂದು ಭೂಮಿಯು ಸೂರ್ಯನಿಗೆ ಹತ್ತಿರವಿರಲಿದೆ ಈ ವಿದ್ಯಮಾನವನ್ನು 'ಪೆರಿಹೆಲಿಯನ್' ಎನ್ನಲಾಗುವುದು. ಆದರೆ ಭೂಮಿಯ ಮೇಲಿಂದ ಈ ವಿದ್ಯಮಾನವನ್ನು ನೋಡಲು ಆಗುವುದಿಲ್ಲ. ಜನವರಿ 3 ರಂದು 11.05 ಗಂಟೆಗೆ ಭೂಮಿಯು ತನ್ನ ವಾರ್ಷಿಕ ಅಂಡಾಕಾರದ ಕಕ್ಷೆಯಲ್ಲಿ ಸೂರ್ಯನಿಗೆ 14,70,97,237 ಕಿ.ಮೀ ದೂರದಲ್ಲಿರಲಿದೆ.

**ಪೆರಿಹೆಲಿಯನ್ ಮಹತ್ವ**:

ಪೆರಿಹೆಲಿಯನ್ ಸಂಶೋಧನೆ ಮತ್ತು ಶೈಕ್ಷಣಿಕ ಉದ್ದೇಶಗಳಲ್ಲಿ ಪ್ರಮುಖ ಘಟನೆಯಾಗಿದೆ. ಸಾಮಾನ್ಯವಾಗಿ ಸೂರ್ಯನಿಂದ ಭೂಮಿಯ ದೂರವು ಋತು ಅಥವಾ ತಾಪಮಾನವನ್ನು ಭೂಮಿಯ ಮೇಲೆ ನಿರ್ಧರಿಸುತ್ತದೆ ಎಂದು ನಂಬಲಾಗಿದೆ. ಆದರೆ ಇದು ಸತ್ಯವಲ್ಲ. ಭೂಮಿಯು ಸೂರ್ಯನ ಸುತ್ತ ತನ್ನ ಕಕ್ಷೆಯಲ್ಲಿ (ಅಂದಾಜು 23.5 ಡಿಗ್ರಿ) ಸುತ್ತುವ ಕ್ರಿಯೆಯು ಭೂಮಿಯ ಮೇಲೆ ಋತುಗಳನ್ನು ನಿಯಂತ್ರಿಸುತ್ತದೆ,

ಆದ್ದರಿಂದ ಭೂಮಿಯು ಜನವರಿ ಸಮಯದಲ್ಲಿ ಸೂರ್ಯನ ಸಮೀಪದಲ್ಲಿರುವುದರಿಂದ ಭಾರತ ಸೇರಿದಂತೆ ಉತ್ತರ ಗೋಳಾರ್ಧದಲ್ಲಿರುವ ದೇಶಗಳಲ್ಲಿ ಚಳಿಗಾಲ. ಹಾಗೆಯೇ ದಕ್ಷಿಣ ಗೋಳಾರ್ಧದಲ್ಲಿರುವ ದೇಶಗಳಲ್ಲಿ ಬೇಸಿಗೆ ಕಾಲವಿರುತ್ತದೆ.

ಜುಲೈ 6 ರಂದು ಸೂರ್ಯನಿಂದ 15,20,95,571 ಕಿ.ಮೀ. ದೂರದಲ್ಲಿರಲಿದೆ ಈ ವಿದ್ಯಮಾನವನ್ನು 'ಅಫೀಲಿಯನ್ (Aphelion)' ಎನ್ನಲಾಗುವುದು. ಅಂದರೆ ಈ ದಿನದಂದು ಭೂಮಿಯು ಸೂರ್ಯನಿಂದ ಅತ್ಯಂತ ದೂರದಲ್ಲಿರುತ್ತದೆ.

**ಮೊದಲ ಬಾರಿಗೆ ಬಾಹ್ಯಕಾಶದಲ್ಲಿ ಸೂಕ್ಷ್ಮಜೀವಿಗಳನ್ನು ಪತ್ತೆಹಚ್ಚಿದ ವಿಜ್ಞಾನಿಗಳು**



ಅಂತರರಾಷ್ಟ್ರೀಯ ಬಾಹ್ಯಾಕಾಶ ನಿಲ್ದಾಣ (ಐಎಸ್‌ಎಸ್) ನಲ್ಲಿರುವ ಗಗನಯಾತ್ರಿಗಳು ಬಾಹ್ಯಾಕಾಶದಲ್ಲಿ ಸೂಕ್ಷ್ಮಜೀವಿಗಳನ್ನು ಮೊದಲ ಬಾರಿಗೆ ಪತ್ತೆಹಚ್ಚಿದ್ದಾರೆ.

**ಮಹತ್ವ**:

ಬಾಹ್ಯಾಕಾಶದಲ್ಲಿ ಸೂಕ್ಷ್ಮಜೀವಿಗಳನ್ನು ಗುರುತಿಸುವ ಸಾಮರ್ಥ್ಯ ನೈಜ ಸಮಯದಲ್ಲಿ ಗಗನಯಾತ್ರಿ ಕಾಯಿಲೆಗಳನ್ನು ಪತ್ತೆಹಚ್ಚಲು ಮತ್ತು ಚಿಕಿತ್ಸೆ ನೀಡಲು ಸಹಾಯ ಮಾಡಲಿದೆ, ಜೊತೆಗೆ ಇತರ ಗ್ರಹಗಳ



www.karunaduexams.com

ಮೇಲೆ ಡಿಎನ್ಎ-ಆಧಾರಿತ ಜೀವನವನ್ನು ಗುರುತಿಸುವಲ್ಲಿ ಮಹತ್ವದ ಪಾತ್ರವಹಿಸಲಿದೆ. ಪರಿಭ್ರಮಿಸುವ ಪ್ರಯೋಗಾಲಯದಲ್ಲಿ ಇದು ಇತರ ಪ್ರಯೋಗಗಳಿಗೂ ಸಹ ಪ್ರಯೋಜನಕಾರಿಯಾಗಲಿದೆ.

**ಅಂತರರಾಷ್ಟ್ರೀಯ ಬಾಹ್ಯಕಾಶ ನಿಲ್ದಾಣ:**

ಅಂತರರಾಷ್ಟ್ರೀಯ ಬಾಹ್ಯಾಕಾಶ ನಿಲ್ದಾಣ (ISS )(ಇಂಟರ್ನ್ಯಾಷನಲ್ ಸ್ಪೇಸ್ ಸ್ಟೇಷನ್) ಎಂಬುದು ಅಂತರರಾಷ್ಟ್ರೀಯವಾಗಿ ಅಭಿವೃದ್ಧಿಪಡಿಸಲಾದ ಸಂಶೋಧನಾ ಸೌಲಭ್ಯವಾಗಿದ್ದು, ಇದನ್ನು ಪೃಥ್ವಿಯ ನಿಕಟವರ್ತಿ ಕಕ್ಷೆಯಲ್ಲಿ ಸ್ಥಾಪಿಸಲಾಗಿದೆ.

ಐಎಸ್ಎಸ್ ಸೂಕ್ಷ್ಮ ಗುರುತ್ವ ಮತ್ತು ಬಾಹ್ಯಾಕಾಶ ಪರಿಸರ ಸಂಶೋಧನಾ ಪ್ರಯೋಗಾಲಯವಾಗಿ ಕಾರ್ಯನಿರ್ವಹಿಸುತ್ತದೆ. ಇದರಲ್ಲಿ ಸಿಬ್ಬಂದಿಗಳು ಜೀವಶಾಸ್ತ್ರ, ಮಾನವ ಜೀವಶಾಸ್ತ್ರ, ಭೌತಶಾಸ್ತ್ರ, ಖಗೋಳಶಾಸ್ತ್ರ, ಹವಾಮಾನಶಾಸ್ತ್ರ ಮತ್ತು ಇತರ ಕ್ಷೇತ್ರಗಳಲ್ಲಿ ಪ್ರಯೋಗಗಳನ್ನು ನಡೆಸುತ್ತಾರೆ. ಬಾಹ್ಯಾಕಾಶ ನೌಕೆ ವ್ಯವಸ್ಥೆಗಳ ಹಾಗೂ ಚಂದ್ರ ಮತ್ತು ಮಂಗಳ ಗ್ರಹಗಳಿಗೆ ಅಗತ್ಯವಾದ ಉಪಕರಣಗಳ ಪರೀಕ್ಷೆಗೆ ಈ ನಿಲ್ದಾಣವು ಸೂಕ್ತವಾಗಿರುತ್ತದೆ. ನಿಲ್ದಾಣವನ್ನು 330 ಕಿ.ಮೀ ಯಿಂದ 460 ಕಿ.ಮೀ ರಷ್ಟು ಎತ್ತರದ ಕಕ್ಷೆಯೊಳಗೆ ಸ್ಥಾಪಿಸಲಾಗಿದೆ. ಅಲ್ಲದೇ ಸರಿಸುಮಾರು 27,743.8 km/h (17,239.2 mph) ವೇಗದಲ್ಲಿ ಒಂದು ದಿನಕ್ಕೆ 15.7 ರಷ್ಟು ಕಕ್ಷೆಯನ್ನು ಕ್ರಮಿಸುವ ಮೂಲಕ ಪ್ರಯಾಣ ಮಾಡಲಾಗುತ್ತದೆ.

ಐದು ಸಹಭಾಗಿತ್ವದ ಬಾಹ್ಯಾಕಾಶ ಸಂಸ್ಥೆಗಳ ಜಂಟಿ ಯೋಜನೆಯ ರೂಪದಲ್ಲಿ ನಿರ್ವಹಿಸಲಾಗುತ್ತದೆ. ಈ ಐದು ಸಂಸ್ಥೆಗಳೆಂದರೆ ಅಮೆರಿಕದ ನ್ಯಾಷನಲ್ ಏರೋನಾಟಿಕ್ಸ್ ಅಂಡ್ ಸ್ಪೇಸ್ ಅಡ್ಮಿನಿಸ್ಟ್ರೇಷನ್ (NASA)(ನಾಸಾ), ಯುರೋಪಿಯನ್ ಸ್ಪೇಸ್ ಏಜೆನ್ಸಿ(ESA)(ಯುರೋಪಿನ ಬಾಹ್ಯಾಕಾಶ ಸಂಸ್ಥೆ), ರಷ್ಯಾನ್ ಫೆಡರಲ್ ಸ್ಪೇಸ್ ಏಜೆನ್ಸಿ (RKA), ಜಪಾನ್ ಏರೋಸ್ಪೇಸ್ ಎಕ್ಸ್‌ಪ್ಲೋರೇಷನ್ (JAXA) ಮತ್ತು ಕೆನಡಿಯನ್ ಸ್ಪೇಸ್ ಏಜೆನ್ಸಿ (CSA). ನಿಲ್ದಾಣದ ಮಾಲಿಕತ್ವ ಮತ್ತು ಬಳಕೆಯನ್ನು ಅಂತರ ಸರ್ಕಾರೀ ಒಪ್ಪಂದಗಳು ಮತ್ತು ಕರಾರುಗಳಲ್ಲಿ ದೃಢಪಡಿಸಲಾಗಿದೆ. ಇದು ರಷ್ಯನ್ ಫೆಡರೇಷನ್ ಗೆ, US ಆರ್ಬಿಟಲ್ ಸೆಗ್ಮೆಂಟ್ ನೊಂದಿಗೆ ರಷ್ಯನ್ ಆರ್ಬಿಟಲ್ ಸೆಗ್ಮೆಂಟ್ (ರಷ್ಯನ್ ಕಕ್ಷೆಯ ಭಾಗ)ನಲ್ಲಿರುವ ಅದರ ಘಟಕಗಳ ಮೇಲೆ ಸಂಪೂರ್ಣ ಹಕ್ಕನ್ನು ಉಳಿಸಿಕೊಳ್ಳಲು ಅವಕಾಶ ನೀಡಿದೆ.

ಸೋವಿಯತ್, ರಷ್ಯಾದ ಸಲ್ಯೂಟ್, ಅಲ್ಮಾಜ್, ಮತ್ತು ಮಿರ್ ಸ್ಟೇಶನ್ಗಳು ಮತ್ತು ಯು.ಎಸ್.ನ ಸ್ಕೈಲ್ಯಾಬ್ ನಂತರ ಸಿಬ್ಬಂದಿಗಳು ನೆಲೆಸಲು ರಚಿಸಲಾದ ಒಂಬತ್ತನೇ ಬಾಹ್ಯಕಾಶ ನಿಲ್ದಾಣ ಇದಾಗಿದೆ.

**<u>ಚಂದ್ರನ ಅಧ್ಯಯನಕ್ಕೆ ಚೀನಾದಿಂದ "ಚಾಂಗೆ-4" ಯೋಜನೆ</u>**



ಭೂಮಿಗೆ ಕಾಣದಿರುವ ಚಂದ್ರನ ಮತ್ತೊಂದು ಮಗ್ಗುಲಿನ ಮೇಲೆ ತನ್ನ ಉಪಗ್ರಹವನ್ನು ಇಳಿಸಲು ಚೀನಾಯೋಜನೆ ರೂಪಿಸಿದ್ದು, 2018ರಲ್ಲಿ ಕಾರ್ಯಗತವಾಗಲಿದೆ. ಈ ಯೋಜನೆಗೆ "ಚಾಂಗೆ 4" ಎಂದು ಹೆಸರಿಡಲಾಗಿದೆ.

**ಮಿಷನ್ ಬಗ್ಗೆ:**

ಚಂದ್ರನ ಅಧ್ಯಯನಕ್ಕೆ ಚೀನಾ ಅಭಿವೃದ್ಧಿಪಡಿಸುತ್ತಿರುವ ನಾಲ್ಕನೇ ಮಿಷನ್ ಇದಾಗಿದೆ. ಚೀನಾದ ಚಂದ್ರನ ದೇವತೆಯ ಹೆಸರನ್ನು ಈ ಮಿಷನ್ ಗೆ ಇಡಲಾಗಿದೆ.

ಲಾಂಗ್ ಮಾರ್ಚ್ 4ಸಿ ರಾಕೆಟ್ 425 ಕಿಲೋಗ್ರಾಂ ತೂಕದ ರಿಲೇ ಉಪಗ್ರಹವನ್ನು ಹೊತ್ತು ಚಂದ್ರನ ಹಿಂಭಾಗದಲ್ಲಿ 60,000 ಕಿಲೋಮೀಟ ತನಕ ಚಲಿಸಲಿದೆ. ಈ ಉಪಗ್ರಹವು ಭೂಮಿಯ ಮತ್ತು ಚಂದ್ರನ ದೂರದ ಭಾಗಗಳ ನಡುವಿನ ಆರಂಭಿಕ ಸಂವಹನ ಸಂಪರ್ಕವಾಗಿ ಕಾರ್ಯನಿರ್ವಹಿಸುತ್ತದೆ. ಚೀನಾದ ಬಾಹ್ಯಾಕಾಶ ಸಂಸ್ಥೆ ಲಿಂಕ್ ಅನ್ನು ಸ್ಥಾಪಿಸುವಲ್ಲಿ ಯಶಸ್ವಿಯಾದಾಗ, ಚೀನಾವು ಮಿಷನ್ನ ಎರಡನೇ ಭಾಗವನ್ನು ಪ್ರಚೋದಿಸುತ್ತದೆ, ಅಂದರೆ ಚಂದ್ರನ ಪರೀಕ್ಷಿತ ಪ್ರದೇಶಕ್ಕೆ ಲ್ಯಾಂಡರ್ ಮತ್ತು ರೋವರ್ ಅನ್ನು ಕಳುಹಿಸುತ್ತದೆ.


**ಮಹತ್ವ**:

ಈ ಹಿಂದೆ, ಅಮೆರಿಕ, ರಷ್ಯಾ ದೇಶಗಳು ಚಂದ್ರನಲ್ಲಿಗೆ ತಮ್ಮ ನೌಕೆಗಳನ್ನು ಕಳುಹಿಸಿ ಅಲ್ಲಿನ ಮಣ್ಣು, ಕಲ್ಲು ಇತ್ಯಾದಿಗಳನ್ನು ಪರೀಕ್ಷೆಗಾಗಿ ಭೂಮಿಗೆ ತಂದಿದ್ದವು. ಆದರೆ, ನಾವು ಕಾಣದ ಚಂದ್ರನ ಮಗ್ಗುಲಿಗೆ ಉಪಗ್ರಹವನ್ನು ಕಳುಹಿಸಿರಲಿಲ್ಲ. ಇದೀಗ, ಆ ಕೆಲಸಕ್ಕೆ ಚೀನ ಕೈ ಹಾಕಿದೆ. ಚಂದ್ರನ ಮಗ್ಗಲು ಪ್ರದೇಶವನ್ನು "ಸೌಥ್ ಪೋಲ್-ಐಟ್ಕೆನ್ ಬೇಸಿನ್" ಎಂದು ಕರೆಯಲಾಗುತ್ತದೆ. ಈ ಭಾಗ ಬಾಹ್ಯಕಾಶ ವಿಜ್ಞಾನಿಗಳಿಗೆ ನಿಗೂಡವಾಗಿ ಉಳಿಸಿದೆ. ಈ ಯೋಜನೆ ಯಶಸ್ವಿಯಾದರೆ, ಚಂದ್ರನ ಅಧ್ಯಯನದಲ್ಲಿ ಅಮೆರಿಕ, ರಷ್ಯಾ ಮಾಡಿರುವ ಸಾಧನೆಗಳನ್ನು ಚೀನ ಹಿಂದಿಕ್ಕಿದಂತಾಗುತ್ತದೆ. ಆದರೆ ಭೂಮಿಯಿಂದ ಸಂಪರ್ಕವನ್ನು ಸಾಧಿಸುವುದು ಸುಲಭದ ಮಾತಲ್ಲ.

**ಚಂದ್ರಯಾನದಲ್ಲಿ ಚೀನಾದ ಸಾಧನೆ:**

ಚೀನಾವು ಚಂದ್ರನ ಪರಿಶೋಧನಾ ಕಾರ್ಯಕ್ರಮವನ್ನು 2007 ರಲ್ಲಿ 'ಚಾಂಗ್'ಇ 1 ಎಂಬ ಸರಳ ಉಪಗ್ರಹವನ್ನು ಉಡಾಯಿಸುವ ಮೂಲಕ ಪ್ರಾರಂಭಿಸಿತು. 'ಚಾಂಗ್'ಇ 2 ಎಂಬ ಮಿಷನ್ ಅನ್ನು 2010 ರಲ್ಲಿ ಪ್ರಾರಂಭಿಸಲಾಯಿತು, ನಂತರ 'ಚಾಂಗ್'ಇ 3" ಮಿಷನ್ ಆರಂಭಿಸಿತು. 'ಚಾಂಗ್'ಇ 3" ಚಂದ್ರನ ಮೇಲೆ ಸಾಫ್ಟ್ ಲ್ಯಾಂಡಿಂಗ್ ಮಾಡುವ ಮೂಲಕ ವಿಶ್ವದಾದ್ಯಂತ ಸುದ್ದಿಯನ್ನು ಮಾಡಿತ್ತು.

**<u>ನಾಸಾದಿಂದ GOLD ಮತ್ತು ICON ಮಿಷನ್</u>**



ಅಮೆರಿಕದ ಬಾಹ್ಯಾಕಾಶ ಸಂಸ್ಥೆ ನ್ಯಾಷನಲ್ ಏರೋನಾಟಿಕ್ಸ್ ಅಂಡ್ ಸ್ಪೇಸ್ ಅಡ್ಮಿನಿಸ್ಟ್ರೇಷನ್ (NASA) ಭೂಮಿಯ ಮೇಲಿನ 60 ಮೈಲುಗಳಷ್ಟು (96 ಕಿ.ಮೀ.) ಪ್ರದೇಶವನ್ನು ಅನ್ವೇಷಿಸಲು GOLD ಮತ್ತು ICON ಎಂಬ ಎರಡು ಮಿಷನ್ ಗಳನ್ನು ಪ್ರಾರಂಭಿಸಲು ಸಿದ್ಧವಾಗಿದೆ.

ಜನವರಿ 2018 ರಲ್ಲಿ Global-scale Observations of the Limb and Disk (GOLD) ಅನ್ನು ಮತ್ತು Ionospheric Connection Explorer (ICON) ಅನ್ನು ಈ ವರ್ಷದ ಕೊನೆಯ ಭಾಗದಲ್ಲಿ ಆರಂಭಿಸಲಿದೆ.

www.madueXams.com

**ಮಿಷನ್ ಬಗ್ಗೆ:**

GOLD & ICON ಮಿಷನ್ ಗಳು ವಾತಾವರಣದ ಅಯಾನುಗೋಳವನ್ನು ಅಧ್ಯಯನ ನಡೆಸಲು ವಿನ್ಯಾಸಗೊಳಿಸಲಾಗುತ್ತಿದೆ. ಅಯಾನುಗೋಳವು ಮಧ್ಯಗೋಳದ ನಂತರ ಇರುವ ವಾತಾವರಣದ ಪದರವಾಗಿದೆ. ಇದು ಅಯಾನು ಅಥವಾ ಆವೇಶಭರಿತ ಕಣಗಳಿಂದ ಆಗಿದೆ. ಆದ್ದರಿಂದ ರೇಡಿಯೊ ಪ್ರಸರಣಕ್ಕೆ ಈ ವಲಯ ಸಹಕರಿಸುತ್ತದೆ. ಇದರಿಂದ ವಿಮಾನಗಳು, ಹಡಗುಗಳು ಮತ್ತು ಗ್ಲೋಬಲ್ ಪೊಸಿಶನಿಂಗ್ ಸಿಸ್ಟಮ್ ಉಪಗ್ರಹಗಳನ್ನು ಸುಲಭವಾಗಿ ಕಾರ್ಯನಿರ್ವಹಿಸಬಹುದಾಗಿದೆ.

**ಮಿಷನ್ ಉದ್ದೇಶ:**

ಚಂಡಮಾರುತಗಳು ಮತ್ತು ಭೂಕಾಂತೀಯ ಬಿರುಗಾಳಿಗಳಿಗೆ ಪ್ರತಿಕ್ರಿಯೆಯಾಗಿ ಮೇಲಿನ ವಾತಾವರಣವು ಹೇಗೆ ಬದಲಾಗುತ್ತದೆ ಎಂಬುದನ್ನು ಅಧ್ಯಯ ಮಾಡುವುದು ಮಿಷನ್ ಉದ್ದೇಶ. ಭೂಮಿಯ ಮೇಲಿನ ವಾಯುಮಂಡಲವು ಭೂಕಾಂತೀಯ ಬಿರುಗಾಳಿಗಳಿಗೆ ಹೇಗೆ ಪ್ರತಿಕ್ರಿಯಿಸುತ್ತದೆ ಎಂಬುದನ್ನು ಸಹ GOLD ಸಂಶೋಧನೆ ನಡೆಸಲಿದೆ.

## ಬೆಂಗಳೂರಿನ ದಾಸರಹಳ್ಳಿಯಲ್ಲಿ ಹಕ್ಕಿ ಜ್ವರದ ಆತಂಕ



ಬೆಂಗಳೂರು ನಗರದ ದಾಸರಹಳ್ಳಿಯಲ್ಲಿ ಹಕ್ಕಿ ಜ್ವರ ಪತ್ತೆ ಹಿನ್ನೆಲೆಯಲ್ಲಿ ಆರೋಗ್ಯ ಹಾಗೂ ಪಶುಪಾಲನಾ ಇಲಾಖೆಯಿಂದ ಮುಂಜಾಗ್ರತಾ ಕ್ರಮಗಳು ಮುಂದುವರಿಸಿದ್ದು, ಕೇಂದ್ರ ಸರ್ಕಾರದ ತಜ್ಞರ ತಂಡ ಸ್ಥಳ ಪರಿಶೀಲನೆ ನಡೆಸಿ ವಿವಿಧ ಕೋಳಿಗಳ ಮಾದರಿಗಳನ್ನು ಪರೀಕ್ಷಿಸಿದೆ. ಸೋಂಕಿತ ಕೋಳಿ ಪೂರೈಸಿದ ಫಾರ್ಮ್ಗಳಿಂದ ಸಂಗ್ರಹಿಸಿದ್ದ 200 ಕೋಳಿಗಳ 12 ಮಾದರಿಗಳನ್ನು ಕೇಂದ್ರ ತಜ್ಞರ ತಂಡವು ಹೆಬ್ಬಾಳದ ಪಶುವೈದ್ಯಕೀಯ ಸಂಸ್ಥೆಯ ಪ್ರಯೋಗಾಲಯದಲ್ಲಿ ಪರೀಕ್ಷೆ ನಡೆಸಿದ್ದು, ಸೋಂಕು ದೃಢಪಟ್ಟಿಲ್ಲ.

**ಹಕ್ಕಿ ಜ್ವರ:**

ಏವಿಯನ್ ಫ್ಲೂ ಅಥವಾ ಹಕ್ಕಿ ಜ್ವರ ಪಕ್ಷಿಗಳ ಸಾಂಕ್ರಾಮಿಕ ವೈರಾಣು ರೋಗವಾಗಿದ್ದು, ದೊಡ್ಡ ಪ್ರಮಾಣದಲ್ಲಿ ಗಂಭೀರ ರೋಗವನ್ನು ಉಂಟುಮಾಡುವ ಪ್ರವೃತ್ತಿಯನ್ನು ಹೊಂದಿದೆ. ಹೆಚ್ಚಿನ ಇನ್ಫ್ಲುಯೆನ್ಸ ವೈರಸ್ಗಳು ಮಾನವರಲ್ಲಿ ಸೋಂಕು ತರದಿದ್ದರು ಸಹ, A(H5N1) ಮತ್ತು A(H7N9) ಗಳು ಮಾನವರಲ್ಲಿ ರೋಗವನ್ನು ಉಂಟು ಮಾಡಬಲ್ಲದಾಗಿವೆ.


**ರೋಗದ ಲಕ್ಷಣ:**

ಜ್ವರ, ಕೆಮ್ಮು, ಗಂಟಲು ನೋವು, ಸ್ನಾಯು, ದೇಹ ನೋವು, ವಾಕರಿಕೆ ತೀವ್ರವಾದ ಉಸಿರಾಟದ ತೊಂದರೆಗಳು, ನ್ಯುಮೋನಿಯಾ, ಮತ್ತು ತೀವ್ರವಾದ ಉಸಿರಾಟ ತೊಂದರೆ.

## ತಗ್ಗಿದ ಓಝೋನ್ ರಂಧ್ರ: ನಾಸಾ ವರದಿ



www.karunaadexams.com



ಓಝೋನ್ ಪದರದಲ್ಲಿನ ರಂಧ್ರವು ಗಣನೀಯವಾಗಿ ತಗ್ಗಿದೆ ಎಂದು ನಾಸಾ ವರದಿ ಮಾಡಿದೆ. ಕ್ಲೋರೋಫ್ಲೋರೋಕಾರ್ಬನ್ ಬಳಕೆ ನಿಷೇಧ ಓಝೋನ್ ರಂಧ್ರ ತಗ್ಗಲು ಕಾರಣವಾಗಿದೆ ಎಂದು ನಾಸಾದ ದೃಢೀಕರಿಸಿದೆ. ಭೂಮಿಯ ವಾಯುಮಂಡಲದಲ್ಲಿ ಕ್ಲೋರಿನ್ ಮಟ್ಟವು ವೇಗವಾಗಿ ಕುಸಿಯುತ್ತಿದೆ ಎನ್ನಲಾಗಿದೆ.

ಕಳೆದ ವರ್ಷ ತೆಗೆಯಲಾದ ಉಪಗ್ರಹದ ಚಿತ್ರಗಳನ್ನು ಓಝೋನ್ ರಂಧ್ರವು ಮುಚ್ಚಿರುವುದನ್ನು ಧೃಡಪಡಿಸಿದೆ ಮತ್ತು 2060 ರೊಳಗೆ ಸಂಪೂರ್ಣವಾಗಿ ಮುಚ್ಚಲಿದೆ ಎಂದು ಅಂದಾಜಿಸಲಾಗಿದೆ. ಆದರೆ ಈ ಫಲಿತಾಂಶ 1985ರಲ್ಲಿ ಪ್ರಪಂಚದ ಎಲ್ಲ ರಾಷ್ಟ್ರಗಳಿಂದ ಸಹಿ ಹಾಕಲ್ಪಟ್ಟ "ಮಾಂಟ್ರಿಯಲ್ ಶಿಷ್ಟಚಾರ"ದ ಪರಿಣಾಮವೇ ಎಂಬುದು ದೃಢಪಟ್ಟಿಲ್ಲ.

2005ರಿಂದಾಚೆಗೆ ನಾಸಾದ ದೀರ್ಘಕಾಲೀನ ಉಪಗ್ರಹ ಅವಲೋಕನವು ಭೂಮಿಯ ವಾತಾವರಣದಲ್ಲಿ ಕ್ಲೋರಿನ್ ಮಟ್ಟ ಶೇ.20% ರಷ್ಟು ಕಡಿಮೆಯಾಗಿದೆ ಎಂದು ತೋರಿಸಿದೆ, ಆ ಮೂಲಕ ವಿಶ್ವದಾದ್ಯಂತ ಕ್ಲೋರಿನ್ ಬಳಕೆಯನ್ನು ನಿಷೇಧಿಸುವ ಕ್ರಮವು ಭೂಮಿಯ ಮೇಲೆ ಸಕರಾತ್ಮಕ ಪರಿಣಾಮವನ್ನು ಬೀರಿದೆ ಎಂದು ಮೊದಲ ಬಾರಿಗೆ ಸಾಬೀತುಪಡಿಸಿದೆ.

**ಓಝೋನ್ ಪದರ:**

ಓಝೋನ್ ಪದರ ಸೂರ್ಯನಿಂದ ಹೊರಸೂಸುವ ನೇರಳಾತೀತ ವಿಕಿರಣಗಳನ್ನು ಹೀರಿಕೊಳ್ಳುವ ಭೂಮಿಯ ವಾಯುಮಂಡಲದಲ್ಲಿ ಒಂದು ಪ್ರದೇಶವಾಗಿದೆ. ಇದು ವಾಯುಮಂಡಲದಲ್ಲಿ ಓಝೋನ್ $O_3$ ನ ಅನಿಲದ ಅಧಿಕ ಸಾಂದ್ರತೆಯನ್ನು ಹೊಂದಿದೆ. ಭೂಮಿಯ ಮೇಲೆ ಸುಮಾರು 10 ಕಿ.ಮೀ ನಿಂದ 40ಕಿ.ಮೀ.ರ ವರೆಗೆ ವ್ಯಾಪಿಸಲ್ಪಟ್ಟಿರುವ ಈ ಪ್ರದೇಶವು ಸೂರ್ಯನಿಂದ ಬಿಡುಗಡೆಯಾಗುವ ನೇರಳಾತೀತ ವಿಕಿರಣಗಳನ್ನು ಹೀರಿಕೊಂಡು ಭೂಮಿಗೆ ಅವುಗಳು ತಲಪುವುದನ್ನು ತಡೆಗಟ್ಟುತ್ತವೆ.

**ಓಝೋನ್ ಪದರ ರಂಧ್ರಕ್ಕೆ ಕಾರಣವಾದ ಅಂಶಗಳು:**

ಓಝೋನ್ ಪದರದ ರಂಧ್ರಕ್ಕೆ ಅನೇಕ ಅಂಶಗಳ ಕಾರಣವಾಗಿವೆ. CFCಗಳಿಂದ (ಕ್ಲೋರೊಫ್ಲೋರೊಕಾರ್ಬನ್ಗಳು) ಬಿಡುಗಡೆಯಾಗುವ ಕ್ಲೋರಿನ್ ಅತ್ಯಂತ ಪ್ರಬಲವಾದ ಓಝೋನ್ ಹಾನಿಕಾರಕ ಅಂಶ. ಹೇರ್ ಸ್ಪ್ರೇ, ಹಳೆಯ ರೆಫ್ರಿಜರೇಟರ್ ಸಿಎಫ್ಸಿಗಳನ್ನು ಬಿಡುಗಡೆ ಮಾಡುತ್ತವೆ.

**<u>ಕಾಗದ ಮುಕ್ತ ವ್ಯವಹಾರಕ್ಕೆ ಇ-ಸಂಸದ್ ಮತ್ತು ಇ-ವಿಧಾನ್</u>**



ಸಂಸತ್ತು ಮತ್ತು ರಾಜ್ಯ ಶಾಸಕಾಂಗಗಳಲ್ಲಿ ಕಾಗದ ರಹಿತ ಕಾರ್ಯಾಚರಣೆಯನ್ನು ಉತ್ತೇಜಿಸುವ ಸಲುವಾಗಿ ಇ-ಸಂಸದ್ ಮತ್ತು ಇ-ವಿಧಾನ್ ಅನ್ನು ಕೇಂದ್ರ ಸರ್ಕಾರ ಜಾರಿಗೆ ತಂದಿದೆ.

**ಇ-ಸಂಸದ್ & ಇ-ವಿಧಾನ್:**

ಇ-ಸಂಸದ್ ಮತ್ತು ಇ-ವಿಧಾನ್ ಸಂಸತ್ ಮತ್ತು ರಾಜ್ಯ ಶಾಸಕಾಂಗಗಳ ಕಾರ್ಯಚಟುವಟಿಕೆಯನ್ನು ಕಾಗದ ಮುಕ್ತ ಕಾರ್ಯರೂಪಕ್ಕೆ ತರಲು,

ಡಿಜಿಟಲ್ ಇಂಡಿಯಾ ಅಡಿಯಲ್ಲಿ ಭಾರತದ ಸರ್ಕಾರದ ಯೋಜನೆಗಳಾಗಿವೆ. ಸಂಸದೀಯ ವ್ಯವಹಾರ ಸಚಿವಾಲಯ ಈ ಎರಡೂ ಯೋಜನೆಗಳನ್ನು ಅನುಷ್ಠಾನಗೊಳಿಸುವ ನೋಡಲ್ ಸಚಿವಾಲಯವಾಗಿದೆ.

**ಮಹತ್ವ:**

ಈ ಎರಡು ಯೋಜನೆಗಳು ಸಂಸತ್ತು ಮತ್ತು ರಾಜ್ಯ ಶಾಸನಸಭೆಗಳ ಕಾರ್ಯಚಟುವಟಿಕೆಗಳನ್ನು ಪಾರದರ್ಶಕವಾಗಿಸಲು, ಮತ್ತು ಸಾರ್ವಜನಿಕ ಜವಾಬ್ದಾರಿಯಾಗಿ ಸಂಪೂರ್ಣ ಶಾಸನ ಪ್ರಕ್ರಿಯೆಯನ್ನು ಹೆಚ್ಚು ಪರಿಣಾಮಕಾರಿಯಾಗಿ ಮಾಡುವ ಉದ್ದೇಶವನ್ನು ಹೊಂದಿವೆ. ಇದಲ್ಲದೆ, ಈ ಪರಿಸರ ಸ್ನೇಹಿ ಉಪಕ್ರಮವು ಸರ್ಕಾರದ 'ಗೋ ಗ್ರೀನ್' ಯೋಜನೆಗೆ ಅನುಗುಣವಾಗಿದೆ.

**<u>ಭಾರತದ ವೇಗದ ಕಂಪ್ಯೂಟರ್ "ಪ್ರತ್ಯುಷ್" ಲೋಕಾರ್ಪಣೆ</u>**



ಕೇಂದ್ರ ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವ ಹರ್ಷವರ್ಧನ್ ಅವರು ಪುಣೆಯಲ್ಲಿ ಭಾರತದ ಅತೀ ವೇಗದ ಮತ್ತು ಮೊದಲ 'ಮಲ್ಟಿ ಪೆಟಫ್ಲಾಪ್ಸ್' ಸೂಪರ್ ಕಂಪ್ಯೂಟರ್‌ನ್ನು ದೇಶಕ್ಕೆ ಅರ್ಪಣೆ ಮಾಡಿದ್ದಾರೆ. ಇದರ ಗರಿಷ್ಠ ವೇಗ 6.8 ಪೆಟಪ್ಲಾಪ್ಸ್. ಪೆಟಫ್ಲಾಪ್ಸ್ ಎಂಬುದು ಕಂಪ್ಯೂಟರ್‌ನ ಪ್ರೊಸೆಸಿಂಗ್ ಸ್ಪೀಡ್ ಅಳೆಯುವ ವಿಧಾನವಾಗಿದೆ. ಈ ಸೂಪರ್ ಕಂಪ್ಯೂಟರ್‌ಗೆ 'ಪ್ರತ್ಯುಷ್' ಎಂದು ಹೆಸರಿಸಲಾಗಿದ್ದು, ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಟ್ರೊಫಿಕಲ್ ಮೆಟ್ರಾಲಜಿ ಪುಣೆಯಲ್ಲಿ ಇದನ್ನು ಅಳವಡಿಸಲಾಗಿದೆ.

- ಭಾರತವು ಈಗ ಯುನೈಟೆಡ್ ಕಿಂಗ್ಡಮ್, ಜಪಾನ್ ಮತ್ತು ಯುಎಸ್‌ಎಗ ನಂತರ ಹವಾಮಾನ ಮತ್ತು ವಾತಾವರಣ ಸಂಬಂಧಿಸಿದ ವಿಷಯಗಳಿಗೆ ಮೀಸಲಾದ ಸಾಮರ್ಥ್ಯಗಳ ಸೂಪರ್ ಕಂಪ್ಯೂಟರ್ ಗಳಲ್ಲಿ ನಾಲ್ಕನೇ ಸ್ಥಾನವನ್ನು ಆಕ್ರಮಿಸಲಿದೆ. ಯು.ಕೆ 20.4 ಪೆಟಫ್ಲಾಪ್ಸ್, ಸಾಮರ್ಥ್ಯವನ್ನು ಹೊಂದಿದೆ, ನಂತರದಲ್ಲಿ ಜಪಾನ್ 20 ಪೆಟಫ್ಲಾಪ್ಸ್ ಮತ್ತು ಯುಎಸ್‌ಎ 10.7 ಪೆಟಾಫ್ಲಾಪ್ ಹೊಂದಿವೆ.
- ಪ್ರಪಂಚದ ಅತಿವೇಗದ ಸೂಪರ್ ಕಂಪ್ಯೂಟರ್ಸ್ ಟಾಪ್ 500 ಪಟ್ಟಿಯಲ್ಲಿ ಭಾರತದ ಸೂಪರ್ ಕಂಪ್ಯೂಟರ್ ಸ್ಥಾನವು 300ರಿಂದ 30ಕ್ಕೆ ಏರಿಕೆಯಾಗಲಿದೆ.

**ಪ್ರತ್ಯುಷ್ ಉಪಯೋಗ**:

ಪ್ರತೂಶ್ ಹವಾಮಾನ ಮುನ್ಸೂಚನೆಗಳು ಮತ್ತು ವಿಸ್ತೃತ ಶ್ರೇಣಿ ಮುನ್ಸೂಚನೆಗಳನ್ನು ಸುಧಾರಿಸಲಿದೆ. ಅಲ್ಪ ಸಮಯದಲ್ಲಿ ಚಂಡಮಾರುತಗಳು ಮತ್ತು ಸುನಾಮಿಗಳನ್ನು ನಿಖರವಾಗಿ ಗ್ರಹಿಸಲಿದೆ. ಇದರಿಂದ ಕೃಷಿ, ಜಲಶಾಸ್ತ್ರ, ಮತ್ತು ವಿದ್ಯುತ್ ವಲಯಗಳ ಮೇಲೆ ಅವಲಂಬಿತವಾಗಿರುವವರಿಗೆ ಸಹಾಯ ಆಗಲಿದೆ.

## ಕ್ರೀಡೆ

www.karunaduexams.com

**ವಿದರ್ಭ ಮುಡಿಗೆ ರಣಜಿ ಟ್ರೋಫಿಯ ಗರಿ**



ವಿದರ್ಭ ಕ್ರಿಕೆಟ್ ತಂಡ 2017 ರಣಜಿ ಟ್ರೋಪಿಯನ್ನು ಗೆದ್ದುಕೊಂಡಿತು. ವಿದರ್ಭ ತಂಡಕ್ಕೆ ಇದು ಚೊಚ್ಚಲ ರಣಜಿ ಟ್ರೋಫಿ. ಮಧ್ಯಪ್ರದೇಶದ ಇಂಧೋರಿನ ಹೋಳ್ಕರ್ ಕ್ರೀಡಾಂಗಣದಲ್ಲಿ ನಡೆದ ಫೈನಲ್ ಪಂದ್ಯದಲ್ಲಿ ವಿದರ್ಭ ತಂಡ ದೆಹಲಿ ತಂಡವನ್ನು ಮಣಿಸಿ ಪ್ರಶಸ್ತಿಯನ್ನು ತನ್ನದಾಗಿಸಿಕೊಂಡಿತು.

- ಫೈಜ್ ಫಜಲ್ ನಾಯಕತ್ವದ ವಿದರ್ಭ ತಂಡ ದೆಹಲಿ ವಿರುದ್ಧ ಮೊದಲ ಇನ್ನಿಂಗ್ಸನಲ್ಲಿ ಮುನ್ನಡೆ ಕಾಯ್ದುಕೊಂಡಿತ್ತು. ಎರಡನೇ ಇನ್ನಿಂಗ್ಸನಲ್ಲಿ 29 ರನ್‌ಗಳ ಗುರಿಯನ್ನು ಬೆನ್ನತ್ತಿದ ವಿದರ್ಭ ಒಂದು ವಿಕೆಟ್ ಕಳೆದು ಕೊಂಡು ಗೆಲುವಿನ ನಗೆ ಬೀರಿತು.

**ರಣಜಿ ಟ್ರೋಫಿ:**

ರಣಜಿ ಟ್ರೋಫಿಯು ಪ್ರಾದೇಶಿಕ ಕ್ರಿಕೆಟ್ ಸಂಘಟನೆಗಳನ್ನು ಪ್ರತಿನಿಧಿಸುವ ತಂಡಗಳ ನಡುವೆ ಭಾರತದಲ್ಲಿ ಆಡಲಾಗುವ ಪ್ರಥಮ ದರ್ಜೆಯ ಕ್ರಿಕೆಟ್ ಚಾಂಪಿಯನ್ಶಿಪ್ ಆಗಿದೆ. ಸ್ಪರ್ಧೆಗೆ ಇಂಗ್ಲೆಂಡ್ ಮತ್ತು ಸಸೆಕ್ಸ್ ಪರ ಕ್ರಿಕೆಟ್ ಆಡಿದ ಕುಮಾರ್ ಶ್ರೀ ರಂಜಿತ್‌ಸಿಂಗ್‌ಜಿ ಹೆಸರಿಡಲಾಗಿದೆ. ಇದನ್ನು 1934 ರಲ್ಲಿ ಮೊದಲ ಬಾರಿಗೆ ಆಡಲಾಯಿತು. ಪ್ರಸ್ತುತ, 21 ರಾಜ್ಯಗಳು (29 ರಾಜ್ಯಗಳ ಪೈಕಿ) ಮತ್ತು ದೆಹಲಿ (ಕೇಂದ್ರಾಡಳಿತ ಪ್ರದೇಶ) ಸೇರಿದಂತೆ 27 ತಂಡಗಳ ನಡುವೆ ಚಾಂಪಿಯನ್ಶಿಪ್ ನಲ್ಲಿ ಭಾಗವಹಿಸುತ್ತಿವೆ. ಮುಂಬೈ 41 ಬಾರಿ ಈ ಚಾಂಪಿಯನ್ಸಿಪ್ ನಲ್ಲಿ ಪ್ರಶಸ್ತಿಯನ್ನು ಗೆದ್ದುಕೊಂಡಿದೆ.

## ರಾಜ್ಯ

**ರಾಜ್ಯ ಮಾನವ ಹಕ್ಕುಗಳ ಆಯೋಗದ ಅಧ್ಯಕ್ಷರಾಗಿ ನಿವೃತ್ತ ನ್ಯಾ. ಡಿ.ಎಚ್.ವಘೇಲಾ ನೇಮಕ**



ಕರ್ನಾಟಕ ಹೈಕೋರ್ಟ್‌ನ ನಿವೃತ್ತ ಮುಖ್ಯ ನ್ಯಾಯಮೂರ್ತಿ ಡಿ.ಎಚ್ .ವಘೇಲಾ ಅವರನ್ನು ರಾಜ್ಯ ಮಾನವ ಹಕ್ಕುಗಳ ಆಯೋಗ ಅಧ್ಯಕ್ಷರನ್ನಾಗಿ ನೇಮಕ ಮಾಡಲಾಗಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ವಘೇಲಾ ಅವರನ್ನು ಆಯೋಗದ ಅಧ್ಯಕ್ಷರನ್ನಾಗಿ ಆಯ್ಕೆ ಮಾಡಲಾಗಿದೆ.

**ರಾಜ್ಯ ಮಾನವ ಹಕ್ಕು ಆಯೋಗ:**

ಮಾನವ ಹಕ್ಕುಗಳ ರಕ್ಷಣೆ ಕಾಯಿದೆ, 1993, ಸೆಕ್ಷನ್ 21ರಡಿ ಮಾನವ ಹಕ್ಕುಗಳ (ತಿದ್ದುಪಡಿ) ಕಾಯಿದೆ, 2006 ರ ಪರಿಷ್ಕೃತ ತಿದ್ದುಪಡಿಯಂತೆ, ರಾಜ್ಯ ಸರ್ಕಾರವು ಈ ಕೆಳಕಂಡವರನ್ನು ಒಳಗೊಂಡ ಮಾನವ ಹಕ್ಕುಗಳ ಆಯೋಗವನ್ನು ರಚಿಸಬಹುದಾಗಿದೆ.

- ಒಬ್ಬ ಅಧ್ಯಕ್ಷರು- ಹೈಕೋರ್ಟಿನ ಮುಖ್ಯ ನ್ಯಾಯಮೂರ್ತಿಯಾಗಿ ಕಾರ್ಯನಿರ್ವಹಿಸರಬೇಕು.

www.karunaduexams.com

- ರಾಜ್ಯದಲ್ಲಿ ಜಿಲ್ಲಾ ನ್ಯಾಯಾಧೀಶರಾಗಿ ಕನಿಷ್ಠ ಏಳು ವರ್ಷಗಳ ಅನುಭವವಿರುವ ಅಥವಾ ಹೈಕೋರ್ಟ್ ನ್ಯಾಯಾಧೀಶರಾಗಿ ಸೇವೆ ಸಲ್ಲಿಸಿದ ಒಬ್ಬ ಸದಸ್ಯ.
- ಮಾನವ ಹಕ್ಕುಗಳ ವಿಷಯದಲ್ಲಿ ಜ್ಞಾನ ಹೊಂದಿರುವ ಅಥವಾ ಪ್ರಾಯೋಗಿಕ ಅನುಭವ ಹೊಂದಿರುವ ವ್ಯಕ್ತಿಗಳ ಪೈಕಿ ನೇಮಕಗೊಳ್ಳಲು ಒಬ್ಬ ಸದಸ್ಯ.
- ಆಯೋಗವು ಒಬ್ಬ ಕಾರ್ಯದರ್ಶಿಯನ್ನು ಹೊಂದಿದ್ದು, ಇವರು ರಾಜ್ಯ ಆಯೋಗದ ಮುಖ್ಯ ಕಾರ್ಯನಿರ್ವಾಹಣಾಧಿಕಾರಿಯಾಗಿರುತ್ತಾರೆ.

## ಇತರೆ: ಚೂರು ಪಾರು

- **ಚೀನಾದಲ್ಲಿ ಪರಿಸರ ತೆರಿಗೆ ಸಂಗ್ರಹಣೆಗೆ ಚಾಲನೆ:** ಚೀನಾದ ಪರಿಸರ ಸಂರಕ್ಷಣಾ ತೆರಿಗೆ ಕಾನೂನು ಜನವರಿ 1, 2018 ರಂದು ಜಾರಿಗೆ ಬಂದಿದ್ದು, ಇದರಡಿ ಪರಿಸರವನ್ನು ಉತ್ತಮಗೊಳಿಸಲು ಮತ್ತು ಮಾಲಿನ್ಯಕಾರಕಗಳ ವಿಸರ್ಜನೆಯನ್ನು ತಡೆಯಲು ಪರಿಸರ ತೆರಿಗೆಯನ್ನು ಸಂಗ್ರಹಿಸಲು ಪ್ರಾರಂಭಿಸಿದೆ. ಇದು ಪರಿಸರ ರಕ್ಷಣೆಗಾಗಿ ಸ್ಪಷ್ಟವಾಗಿ ವಿನ್ಯಾಸಗೊಳಿಸಲಾದ ಚೀನಾದ ಮೊದಲ ತೆರಿಗೆ ವ್ಯವಸ್ಥೆಯಾಗಿದೆ. ಕಾಯಿದೆಯಡಿ ಸಂಸ್ಥೆಗಳು ಮತ್ತು ಸಾರ್ವಜನಿಕ ಸಂಸ್ಥೆಗಳು ಮಾಲಿನ್ಯಕಾರಕಗಳನ್ನು ನೇರವಾಗಿ ಪರಿಸರಕ್ಕೆ ಬಿಡುಗಡೆ ಮಾಡಿದರೆ ಹಾಗೂ ಕಂಪೆನಿಗಳು ಶಬ್ದ, ಗಾಳಿ ಮತ್ತು ನೀರು ಮಾಲಿನ್ಯಕಾರಕಗಳನ್ನು ಮತ್ತು ಘನ ತ್ಯಾಜ್ಯವನ್ನು ಉತ್ಪಾದಿಸುವುದಕ್ಕೆ ತೆರಿಗೆಯನ್ನು ಪಾವತಿಸಬೇಕು. ಈ ಕಾಯಿದೆ ಉದ್ಯಮಗಳು, ಸಾರ್ವಜನಿಕ ಸಂಸ್ಥೆಗಳು ಮತ್ತು ಇತರ ವ್ಯವಹಾರ ನಿರ್ವಾಹಕರುಗಳಿಗೆ ಮಾತ್ರ ಅನ್ವಯಿಸುತ್ತದೆ.

- **ನಿಲಂಬೂರ್ ಟೀಕ್ ಗೆ GI ಟ್ಯಾಗ್:** ಕೇರಳದ ನಿಲಂಬೂರ್ ಟೀಕ್ ಅಥವಾ ಮಲಬಾರ್ ಟೀಕ್ ಗೆ ಭೌಗೋಳಿಕ ಸೂಚನೆಗಳು (ಜಿಐ) ರಿಜಿಸ್ಟ್ರಿಯಲ್ಲಿ ಸ್ಥಾನ ಲಭಿಸಿದೆ. GI ಟ್ಯಾಗ್ ಉತ್ಪನ್ನಗಳ ಗುಣಮಟ್ಟ ಮತ್ತು ಮೂಲವನ್ನು ಸೂಚಿಸುತ್ತದೆ. ನಿಲಂಬೂರ್ ಟೀಕ್ ಮರವು ಕಾಂಡದ ವಿಸ್ತೀರ್ಣ, ಆಕೃತಿಯಿಂದ ವಿಶ್ವದಾದ್ಯಂತ ಮರದ ಉದ್ದಿಮೆಯಲ್ಲಿ ಹೆಸರುವಾಸಿಯಾಗಿದೆ.

- **ಮಧ್ಯಪ್ರದೇಶದಲ್ಲಿ ಜಲಮಹೋತ್ಸವ:** ಮಧ್ಯಪ್ರದೇಶದ ಹನುವಾಂಟಿಯಾ ದ್ವೀಪದಲ್ಲಿ ಭಾರತದ ಅತಿ ದೊಡ್ಡ ಜಲಮಹೋತ್ಸವವನ್ನು ಆಯೋಜಿಸಲಾಗಿತ್ತು. ಮಧ್ಯಪ್ರದೇಶದ ಇಂದಿರಾ ಸಾಗರ್ ಅಣೆಕಟ್ಟು ದಂಡೆಯಲ್ಲಿರುವ ಅವಾಂಟಿಯಾ ದ್ವೀಪವು ಜಲ ಮಹೋತ್ಸವವನ್ನು ಆಯೋಜಿಸಲಾಗುತ್ತದೆ.

www.karunaduexams.com

- **26ನೇ ವಿಶ್ವ ಪುಸ್ತಕ ಮೇಳ:** ನವದೆಹಲಿಯಲ್ಲಿ 26ನೇ ಪುಸ್ತಕ ಮೇಳವನ್ನು ಆಯೋಜಿಸಲಾಗಿತ್ತು. "ಪರಿಸರ ಮತ್ತು ಹವಾಮಾನ ಬದಲಾವಣೆ" ಈ ವರ್ಷದ ಥೀಮ್. ಈ ವರ್ಷದ ಗೌರವಾನಿತ್ವ ಗೌರವ ರಾಷ್ಟ್ರವೆಂದು "ಐರೋಪ್ಯ ಒಕ್ಕೂಟ"ವನ್ನು ಗುರುತಿಸಲಾಗಿದೆ.

- **<u>ಲ್ಯಾಟೆ ಲೆವಿ (Latte Lavy):</u>** ಬಿಸಾಡಬಹುದಾದ ಕಾಫಿ ಕಪ್ ಬಳಕೆಯನ್ನು ತಡೆಯಲು ಬ್ರಿಟನ್ "ಲ್ಯಾಟೆ ತೆರಿಗೆ" ಯನ್ನು ಜಾರಿಗೆ ತಂದಿದೆ. ಮಾರಾಟವಾಗುವ ಪ್ರತಿ ಕಾಫಿಗೆ 50 ಸೆಂಟ್ಸ್‌ಳಷ್ಟು ಹೆಚ್ಚು ಶುಲ್ಕವನ್ನು ಪಾವತಿಸಬೇಕಾಗುತ್ತದೆ. ಮರುಬಳಕೆ ಮಾಡಬಹುದಾದ ಕಾಫಿ ಕಪ್ಗಳನ್ನು ಬಳಸಲು ಜನರನ್ನು ಪ್ರೋತ್ಸಾಹಿಸುವುದು ಇದರ ಉದ್ದೇಶವಾಗಿದೆ. ಬ್ರಿಟನ್ ನಲ್ಲಿ ಪ್ರತಿ ನಿಮಿಷ 500 ಕಾಫಿ ಕಪ್ಗಳನ್ನು ಎಸೆಯಲಾಗುತ್ತದೆ. ಹೆಚ್ಚಿನ ಕಪ್ಗಳು ಪ್ಲ್ಯಾಸ್ಟಿಕ್ ಅಥವಾ ಪಾಲಿಎಥಿಲೀನ್ನೊಂದಿಗೆ ಲ್ಯಾಮಿನೇಟ್ ಆಗಿರುವ ಕಾರಣ ಮರುಬಳಕೆ ಮಾಡಲಾಗುವುದಿಲ್ಲ.

- **<u>ಅರುಣಾಚಲ ಪ್ರದೇಶದಲ್ಲಿ ದೇಶದ ಎರಡನೇ FTII</u>** : ಕೇಂದ್ರ ಸರ್ಕಾರವು ಅರುಣಾಚಲ ಪ್ರದೇಶದಲ್ಲಿ ದೇಶದ ಎರಡನೇ "ಫಿಲ್ಮ್ ಅಂಡ್ ಟೆಲಿವಿಷನ್ ಇನ್ಸ್ಟಿಟ್ಯೂಟ್" ಸ್ಥಾಪಿಸಲಿದೆ. ಭಾರತದ ಮೊದಲ ಫಿಲ್ಮ್ ಅಂಡ್ ಟೆಲಿವಿಷನ್ ಇನ್ಸ್ಟಿಟ್ಯೂಟ್ (ಎಫ್ಟಿಐಐ) ಅನ್ನು ಪುಣೆಯಲ್ಲಿ ಸ್ಥಾಪಿಸಲಾಗಿದೆ. ಇದು ಮಾಹಿತಿ ಮತ್ತು ಪ್ರಸರಣ ಸಚಿವಾಲಯದ ಸ್ವಾಯತ್ತ ಸಂಸ್ಥೆಯಾಗಿದೆ.

- **<u>ಗಿನ್ನಿಸ್ ದಾಖಲೆಗೆ ಮಾತುಂಗ ರೈಲ್ವೆ ಸ್ಟೇಷನ್:</u> ಮುಂಬೈನ** ಉಪನಗರ ಮಾತುಂಗ ರೈಲ್ವೆ ನಿಲ್ದಾಣಕ್ಕೆ ಎಲ್ಲ ಮಹಿಳಾ ಸಿಬ್ಬಂದಿಯೇ ನೇಮಕಗೊಂಡಿದ್ದು, ಈ ನಿಲ್ದಾಣ ಲಿಮ್ಕಾ ದಾಖಲೆಗೆ ಸೇರ್ಪಡೆಯಾಗಿದೆ. ಇಲ್ಲಿನ ಎಲ್ಲ ಸಿಬ್ಬಂದಿಯೂ ಮಹಿಳೆಯರೇ ಆಗಿದ್ದು, ಈ ಸಾಧನೆ ಮಾಡಿದ ದೇಶದ ಮೊಲದ ರೈಲ್ವೆ ನಿಲ್ದಾಣ ಎಂಬ ಹೆಗ್ಗಳಿಕೆಗೆ ಮಾತುಂಗ ರೈಲ್ವೆ ನಿಲ್ದಾಣ ಪಾತ್ರವಾಗಿತ್ತು.
- **<u>ಅಂತಾರಾಷ್ಟ್ರೀಯ ಧರ್ಮ-ಧಮ್ಮ ಸಮಾವೇಶ:</u>** 4ನೇ ಅಂತಾರಾಷ್ಟ್ರೀಯ "ಧರ್ಮ-ಧಮ್ಮ ಸಮಾವೇಶವನ್ನು ಇತ್ತೀಚೆಗೆ ನಳಂದ ಜಿಲ್ಲೆಯ ರಾಜಗೀರ್ ನಲ್ಲಿ ಉದ್ಘಾಟಿಸಲಾಯಿತು. ಅಸಿಯಾನ್-ಇಂಡಿಯಾ ಡೈಲಾಗ್ ಪಾರ್ಟನರ್ಷಿಪ್ ನ 25ನೇ ವರ್ಷದ ಸ್ಮರಣಾರ್ಥ ಸಮಾವೇಶವನ್ನು ಆಯೋಜಿಸಲಾಗಿತ್ತು. ಸಂಘಟಕರು: ನಳಂದ ವಿಶ್ವವಿದ್ಯಾಲಯ, ಸೆಂಟರ್ ಫಾರ್ ಸ್ಟಡಿ ಆಫ್ ರಿಲೀಜನ್ ಅಂಡ್ ಸೊಸೈಟಿಯ ಸಹಯೋಗದೊಂದಿಗೆ, ಇಂಡಿಯಾ ಫೌಂಡೇಶನ್, ವಿದೇಶಾಂಗ ಸಚಿವಾಲಯ ಮತ್ತು ವಿಯೆಟ್ನಾಂ ಬೌದ್ಧ ವಿಶ್ವವಿದ್ಯಾನಿಲಯವು ಸಮ್ಮೇಳನವನ್ನು ಆಯೋಜಿಸುತ್ತಿದೆ.
- **<u>ಗೋವಾ ಹಕ್ಕಿ ಉತ್ಸವ:</u>** ಎರಡನೇ ಗೋವಾ ಹಕ್ಕಿ ಉತ್ಸವ ಜನವರಿ 12 ರಿಂದ 14 ರವರೆಗೆ ಕೊಟಿಕೊವೊ ವನ್ಯಜೀವಿ ಅಭಯಾರಣ್ಯ, ಕ್ಯಾನಕೋನಾದಲ್ಲಿ ನಡೆಯಲಿದೆ. ಈ ಉತ್ಸವದಲ್ಲಿ ದೇಶದ ಅಗ್ರಗಣ್ಯ ಪರಿಸರವಾದಿಗಳು, ಛಾಯಾಚಿತ್ರಗ್ರಾಹಕರು ಮತ್ತು ಕಲಾವಿದರು ಸಂಪನ್ಮೂಲ ವ್ಯಕ್ತಿಗಳಾಗಿ ಭಾಗವಹಿಸಲಿದ್ದಾರೆ. ಕೋಟಿಗವೊ ವನ್ಯಜೀವಿ ಧಾಮವನ್ನು 1968

ರಲ್ಲಿ ಸ್ಥಾಪಿಸಲಾಯಿತು. ಇದು ಗೋವಾದ ಎರಡನೇ ದೊಡ್ಡ ರಾಷ್ಟ್ರೀಯ ಉದ್ಯಾನವನವಾಗಿದೆ.

www.karunaduexams.com